**ಕನ್ನಡ ಕಟ್ಟಿದವರು ಮಾಲೆ**

ಬಿ.ಎಂ. ಶ್ರೀಕಂಠಯ್ಯ

ಪ್ರಧಾನ ಸಂಪಾದಕರು

ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಬಿ.ಎಂ. ಶ್ರೀಕಂಠಯ್ಯ

**ಟಿ.ಎಸ್.ದಕ್ಷಿಣಾಮೂರ್ತಿ**

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

B.M.SHRIKANTAYYA A Monograph on B.M.Shrikanthya in Kannada Written by:T.S.Daxinamurthy Published By B.H Mallikarjun, Administrative Officer, Kannada Pustaka Pradhikara, Kannada Bhavana, J.C.Road, Bengaluru -560002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012

Pages :Xvi +90

Copies:1000

Price : 60.00

ಮೊದಲ ಮುದ್ರಣ : ೨೦೧೨

ಪುಟಗಳು : Xvi +೯೦

ಪ್ರತಿಗಳು : ೧೦೦೦

ಬೆಲೆ : ೬೦.೦೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:

ಬಿ.ಎಚ್.ಮಲ್ಲಿಕಾರ್ಜುನ

ಕೆ.ಸಿ.ಎ.ಎಸ್. ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ,

ಜೆ.ಸಿ.ರಸ್ತೆ ಬೆಂಗಳೂರು-೫೬೦ ೦೦೨

ಮುದ್ರಕರು:

ಮೆ॥ ಪ್ರಿಂಟ್ ಪಾರ್ಕ್ ೧೪೯೬/೪,

೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧

ದೂ : ೦೮೦-೨೩೪೨೨೮೩೮

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

---

## ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು

ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

---

## ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ ಸಂಪಾದಕ ಸಮಿತಿಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಪುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಪುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚೆಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು-ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ-ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ

---

## ಲೇಖಕರ ಮಾತು

ಪ್ರಾಧ್ಯಾಪಕ ಬಿ.ಎಂ.ಶ್ರೀಕಂಠಯ್ಯನವರನ್ನು ಕುರಿತ ಈ ಪುಸ್ತಕವು ಅವರ ಜೀವನ ಮತ್ತು ಸಾಹಿತ್ಯವನ್ನು ಕುರಿತ ಸಮಗ್ರ ಪರಿಚಯ ಮತ್ತು ಸಮಾಲೋಚನೆ ಅಲ್ಲ. ಶ್ರೀಯವರ ಬದುಕು, ಬರಹ ಬಹಳ ವಿಸ್ತಾರವಾದುವು. ಶ್ರೀಯವರ ಬದುಕಿನ ಸಂಕ್ಷಿಪ್ತ ಪರಿಚಯ ಮತ್ತು ಅವರ ಸೃಜನಶೀಲ ಸಾಹಿತ್ಯದ ಕೃತಿಗಳನ್ನು, ಕನ್ನಡಕ್ಕಾಗಿ ಮಾಡಿದ ಪಾದ್ರಿ, ಸೇವೆಯನ್ನು, ನಾಡು ನುಡಿಗಾಗಿ ನಡೆಸಿದ ಹೋರಾಟವನ್ನು, ಆಧುನಿಕ ಕನ್ನಡವನ್ನು ಸಜ್ಜುಗೊಳಿಸಲು ಕೈಗೊಂಡ ಕ್ರಮಗಳನ್ನು ಮಾತ್ರ ಇದರಲ್ಲಿ ಅಡಕಗೊಳಿಸಲು ಪ್ರಯತ್ನಿಸಲಾಗಿದೆ. ಜೊತೆಗೆ ಅವರ ಸೃಜನಶೀಲ ಪ್ರವೃತ್ತಿಗಳನ್ನು ಕುರಿತು ಪರಿಚಯಿಸಲಾಗಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು' ಮಾಲಿಕೆಯಲ್ಲಿ ಕನ್ನಡ ನಾಡು-ನುಡಿ-ಸಾಂಸ್ಕೃತಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅಪೂರ್ವ ವ್ಯಕ್ತಿಗಳ ಜೀವನ ಮತ್ತು ಸಾಧನೆ ಕುರಿತು ಕೃತಿ ರಚಿಸುವ ಈ ಯೋಜನೆಯಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತದ್ದಕ್ಕಾಗಿ ನನಗೆ ಸಂತೋಷವಾಗಿದೆ. ಈ ಕಾರಣಕ್ಕಾಗಿ ಶ್ರೀಯವರ ಸಾಹಿತ್ಯವನ್ನು ಮತ್ತೊಮ್ಮೆ ಓದುವ ಮತ್ತು ಅವರ ಬಗೆಗಿನ ನನ್ನ ಗೌರವವನ್ನು ಹೀಗೆ ಅಭಿವ್ಯಕ್ತಿಸುವ ಅವಕಾಶವಾಯಿತು. ಇದಕ್ಕೆ ಪ್ರೇರಕರೂ, ಕಾರಣಕರ್ತರೂ ಆದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಸಿದ್ದಲಿಂಗಯ್ಯ ಅವರಿಗೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಅವರ ವಿಶ್ವಾಸಪೂರ್ಣಕ ವಿನಂತಿಯೇ ಈ ಬರವಣಿಗೆಗೆ ಒತ್ತಾಸೆಯಾಗಿದೆ.

ಅದಕ್ಕಾಗಿ ಅವರಿಗೆ ಮತ್ತು ಪ್ರಾಧಿಕಾರದ ಎಲ್ಲಾ ನನ್ನ ಆತ್ಮೀಯ ಸದಸ್ಯರಿಗೆ ಮತ್ತೊಮ್ಮೆ ವಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಯವರ ಆತ್ಮೀಯತೆಯನ್ನು ನೆನೆಯದಿರಲು ಹೇಗೆ ಸಾಧ್ಯ. ಅವರಿಗೆ ನನ್ನ ಪ್ರೀತಿಯ ನಮನಗಳು.

ಈ ಪುಸ್ತಕವನ್ನು ಸಿದ್ಧಪಡಿಸುವಲ್ಲಿ ಕೆಲವು ಉಪಯುಕ್ತ ಸಲಹೆಗಳನ್ನು ನೀಡಿದ ನಾಡಿನ ಹಿರಿಯ ಸಾಹಿತಿಗಳೂ ಶ್ರೇಷ್ಠ ವಿಮರ್ಶಕರೂ ಆದ ಡಾ. ಸಿ.ಎನ್.ರಾಮಚಂದ್ರನ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಪುಸ್ತಕದ ಕರಡನ್ನು ತಿದ್ದುವಲ್ಲಿ ನೆರವಾದ ಶ್ರೀಮತಿ ಸೀತಾ ಗುಡೂರ್ ಅವರಿಗೆ ನನ್ನ ನಮನಗಳನ್ನು ಸಲ್ಲಿಸುತ್ತೇನೆ.

**ಟಿ.ಎಸ್.ದಕ್ಷಿಣಾಮೂರ್ತಿ**

## ಪರಿವಿಡಿ

**ಅಧ್ಯಾಯ ಒಂದು : ಬದುಕು**

೧. ಬಾಲ್ಯ-ವಿದ್ಯಾಭ್ಯಾಸ

೨. ಅಧ್ಯಾಪಕ ವೃತ್ತಿ

೩. ಕನ್ನಡ ಸಾಹಿತ್ಯ ಪರಿಷತ್ತಿಗೆ ಉಪಾಧ್ಯಕ್ಷರಾಗಿ ಆಯ್ಕೆ

೪. ಧಾರವಾಡದ ಕೆ.ಇ. ಬೋರ್ಡ್ ಕಾಲೇಜಿನ ಪ್ರಿನ್ಸಿಪಾಲರಾಗಿ

೫. ವೃತ್ತಿ ಜೀವನದಲ್ಲಿ ಪಡೆದ ನೆಮ್ಮದಿ, ವೈಯಕ್ತಿಕ ಬದುಕಿನಲ್ಲಿ ಇರಲಿಲ್ಲ

**ಅಧ್ಯಾಯ ಎರಡು : ಕನ್ನಡಕ್ಕಾಗಿ ಹೋರಾಟ**

೧. ದೇಶ-ಕಾಲ-ಜೀವನ

೨. ಸೃಜನಶೀಲ ಸಾಹಿತ್ಯ ನಿರ್ಮಾಣ

೩. ಕನ್ನಡ ಬಗೆಗಿನ ಅಪಾರ ಕಾಳಜಿ

೪. ಶ್ರೀಯವರ ಕಾಲದಲ್ಲಿನ ನಾಡು-ನುಡಿ

೫. ಅಖಂಡ ಕರ್ನಾಟಕದ ಕಲ್ಪನೆ

**೩ ಅಧ್ಯಾಯ ಮೂರು : ಕೃತಿಗಳು**

೧. ಇಂಗ್ಲಿಷ್ ಗೀತಗಳು

೨. ಹೊಂಗನಸುಗಳು

೩. ಶ್ರೀಕೃಷ್ಣರಾಜ ರಜತಮಹೋತ್ಸವ ಪ್ರಗಾಥ

೪. ಕನ್ನಡ ತಾಯನೋಟ. ಶುಕ್ರಗೀತೆ

**ಅಧ್ಯಾಯ ನಾಲ್ಕು : ನಾಟಕ**

೧. ಗದಾಯುದ್ಧ ನಾಟಕಂ

೨. ಅಶ್ವತ್ಥಾಮನ್

**ಅಧ್ಯಾಯ ಐದು : ಇತರ ಕ್ಷೇತ್ರಗಳಲ್ಲಿಯ ಸಾಧನೆ**

೧. ಭಾಷಾ ಪ್ರಾಯೋಜಕರಾಗಿ

೨. ಲಿಪಿ ಸಂಸ್ಕರಣಕಾರರಾಗಿ

೩. ಸಂಶೋಧಕರಾಗಿ-ವಿಮರ್ಶಕರಾಗಿ

೪. ಕನ್ನಡದ ಬಗೆಗಿನ ಒಲವು, ಕರ್ನಾಟಕ ಕುರಿತ ವಿಚಾರಗಳು, ಕನ್ನಡ ಸೇನಾನಿ, ಕನ್ನಡ ಬಾವುಟ, ಕನ್ನಡ ನುಡಿ, ಕನ್ನಡ ಸಾಹಿತ್ಯ ಪರೀಕ್ಷೆಗಳು, ಬಿ.ಎಂ.ಶ್ರೀ ಅಚ್ಚುಕೂಟ

**ಅಧ್ಯಾಯ ಆರು : ಉಪಸಂಹಾರ**

೧. ಬಿ.ಎಂ.ಶ್ರೀಯವರ ಭಾಷಾಪಾಂಡಿತ್ಯ

೨. ಕನ್ನಡದ ಸರ್ವಾಂಗೀಣ ಪ್ರಗತಿಗೆ ಅವರು ನೀಡಿದ ಸಲಹೆಗಳು. - ಬಿ.ಎಂ.ಶ್ರೀಯವರ ಮಾರ್ಗದರ್ಶಕ ಕೃತಿಗಳು, ಯುಗಪ್ರವರ್ತಕರು

**ಅನುಬಂಧ : ೧**

ಶ್ರೀಯವರು ಧಾರವಾಡದಲ್ಲಿ ಮಾಡಿದ ಭಾಷಣ

**ಅನುಬಂಧ :೨**

ಬಿ.ಎಂ.ಶ್ರೀ. : ಜೀವನ ಮತ್ತು ಸಾಧನೆ

**ಅನುಬಂಧ :೩**

ಆಧಾರ ಗ್ರಂಥಗಳು

**ಅನುಬಂಧ : ೪**

ಬಿ.ಎಂ.ಶ್ರೀಕಂಠಯ್ಯ ವ್ಯಕ್ತಿತ್ವ-ಸಾಹಿತ್ಯ ಕುರಿತ ಪ್ರಮುಖ ಕೃತಿಗಳು

...

## ಅಧ್ಯಾಯ ಒಂದು : ಬದುಕು

'ಶ್ರೀ' ಎನ್ನುವ ಕಾವ್ಯನಾಮದಿಂದ ಪ್ರಖ್ಯಾತರಾದ ಪ್ರೊಫೆಸರ್ ಬಿ.ಎಂ.(ಬೆಳ್ಳೂರು ಮೈಲಾರಪ್ಪ)ಶ್ರೀಕಂಠಯ್ಯನವರು ಪ್ರಾತಃಸ್ಮರಣೀಯರು. ತಮ್ಮ ಕಾಲದ ಕನ್ನಡಿಗರಲ್ಲಿ ಅಗ್ರಗಣ್ಯರು. ಶ್ರೀಕಂಠಯ್ಯನವರಿಗೆ ಅವರ ಕಾಲದ ಹಿರಿಯ ಅಥವಾ ಕಿರಿಯರಲ್ಲಿ ಸರಿಸಾಟಿಯಾಗಿ ನಿಲ್ಲುವವರು ಅತಿವಿರಳ. ಪ್ರಾಧ್ಯಾಪಕರಾಗಿ ಇಂಗ್ಲಿಷ್ ಹಾಗೂ ಕನ್ನಡ ಸಾಹಿತ್ಯವನ್ನು ಭಾವನಾತ್ಮಕವಾಗಿ, ಹೃದಯಸ್ಪರ್ಶಿಯಾಗಿ ಬೋಧಿಸುವುದರ ಮೂಲಕ ಮೇಧಾವಿ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಮ್ಮ ಕಡೆ ಆಕರ್ಷಿಸಿದವರು. ಕವಿಯಾಗಿ ಹೊಸ ರೀತಿಯ ಕವಿತೆಗಳನ್ನು ರಚಿಸಿ ಕನ್ನಡ ಸಾಹಿತ್ಯದಲ್ಲಿ ಹೊಸಗನ್ನಡ ಕಾವ್ಯ ರಚನೆಗೆ ನಾಂದಿ ಹಾಡಿದವರು. ನಾಟಕಕಾರರಾಗಿ ಕನ್ನಡ ಸಾಹಿತ್ಯಕ್ಕೆ ಹೊಸದೆನ್ನುವ ರುದ್ರನಾಟಕಗಳನ್ನು ಪರಿಚಯಿಸಿದವರು. ಕನ್ನಡ ಸಾಹಿತ್ಯಕ್ಕೆ ಹೊಸ ಛಂದಸ್ಸನ್ನು ಪರಿಚಯಿಸಿದವರು. ಕನ್ನಡದ ಲಿಪಿಯಲ್ಲಿ ಬದಲಾವಣೆಯನ್ನು ತರಲು ಶ್ರಮಿಸಿದವರು. ಈ ರೀತಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವುದರ ಜೊತೆಗೆ, ಕಾವ್ಯಾಸಕ್ತರ ಕೂಟಗಳನ್ನು ಹಾಗೂ ಸಾಹಿತ್ಯಕ ಸಂಘಟನೆಗಳನ್ನು ಸ್ಥಾಪಿಸಿ ತರುಣರಿಗೆ ಬರೆಯುವ ದೀಕ್ಷೆಯನ್ನು ನೀಡಿದವರು. 'ಕನ್ನಡ ಬಾವುಟ'ವು ಎಲ್ಲಕಡೆ ಹಾರಾಡುವಂತೆ ಮಾಡಿದವರು. ತಮ್ಮ ಪ್ರೌಢ ಶಿಕ್ಷಣ ನಂತರ ಮೈಸೂರು ವಿಶ್ವವಿದ್ಯಾನಿಲಯವನ್ನು ಸೇರಿ ಕನ್ನಡವನ್ನು ಕಟ್ಟುವ ಕೆಲಸವನ್ನು ಮಾಡಿದವರು. ತಮ್ಮ ನಾಡು ನುಡಿಯ ಬಗ್ಗೆ ಕನ್ನಡಿಗರಲ್ಲಿ ಅಭಿಮಾನ, ಉತ್ಸಾಹ, ಪ್ರೀತಿ ಮೂಡುವಂತೆ ಪ್ರೋತ್ಸಾಹಿಸಿದವರು. ಕರ್ನಾಟಕದ ಏಕೀಕರಣ ಕಾರ್ಯದಲ್ಲಿ ಶ್ರೀಯವರು ಮಾಡಿರುವಷ್ಟು ಸೇವೆಯನ್ನು ಮತ್ತೆ ಯಾರೂ ಮಾಡಿದ ಉದಾಹರಣೆಗಳಿಲ್ಲ. ಅಕ್ಷರಶಃ ತನುಮನಧನಗಳನ್ನು ನಿರ್ವಂಚನೆಯಿಂದ ಕನ್ನಡಕ್ಕೆ ಧಾರೆ ಎರೆದವರು. ಶ್ರೀಕಂಠಯ್ಯನವರು ತಾವು ಬದುಕಿರುವುದು ಮತ್ತು ತಮ್ಮ ಸರ್ವಸ್ವವೂ ಕನ್ನಡ ಸೇವೆಗಾಗಿ ಎಂದು ತಮ್ಮ ಕಾರ್ಯಗಳಿಂದ ಖಚಿತವಾಗಿ ಎಲ್ಲರಿಗೂ ತೋರಿಸಿದವರು. ಶ್ರೀಯವರನ್ನು ಪಡೆದ ಕನ್ನಡಿಗರು ಭಾಗ್ಯಶಾಲಿಗಳು.

ಶ್ರೀಯವರು 'ಕನ್ನಡ ಕಣ್ವ' ರೆಂದು 'ಆಚಾರ್ಯ' 'ಯುಗಪುರುಷ', 'ಯುಗಪ್ರವರ್ತಕ' ಎಂದೆಲ್ಲಾ ಖ್ಯಾತಿ ಪಡೆದಿದ್ದಾರೆ. ಅವರನ್ನು ನವೋದಯದ ಆಚಾರ್ಯರೆಂದು ಗುರುತಿಸಿ ಗೌರವಿಸಲಾಗಿದೆ. ಅಗಾಧವಾದ ವಿದ್ವತ್ತು, ಬಹುಭಾಷಾ ಪಾಂಡಿತ್ಯ, ಹೊಸ ಕಾವ್ಯದ ಹೆದ್ದಾರಿಯನ್ನು ತೆರೆದಂಥ ಸೃಜನಶೀಲ ಹಾಗೂ ಪ್ರಯೋಗಪರಿಣತಿ, ಅಪ್ರತಿಮ ಬೋಧನಾ ಪ್ರಾವೀಣ್ಯತೆ ಮತ್ತು ಪರಿಣಾಮಕಾರಿಯಾದ ಮಾತುಗಾರಿಕೆ, ಕನ್ನಡದ ಮೇಲಿನ ಅನನ್ಯವಾದ ಪ್ರೀತಿ, ಕನ್ನಡದ ಎಚ್ಚರಕ್ಕೆ ಹಾಗೂ ಏಕೀಕರಣಕ್ಕೆ ಅವರು ಪಟ್ಟ ಶ್ರಮ; ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ನಿರ್ಮಿಸಿದ ಹೊಸಗನ್ನಡ ಲೇಖಕರ ಒಂದು ಪರಂಪರೆ, ಛಂದಸ್ಸು, ಗ್ರಂಥ ಸಂಪಾದನೆ. ಲಿಪಿ ಸುಧಾರಣೆ, ಸಾಹಿತ್ಯ ಚರಿತ್ರೆ, ಸಾಹಿತ್ಯ ವಿಮರ್ಶೆ, ಜಾನಪದ ಮುಂತಾದ ಕ್ಷೇತ್ರದಲ್ಲಿ ಅವರು ಹಾಕಿಕೊಟ್ಟ ಹೊಸ ಮಾರ್ಗಗಳು - ಈ ಎಲ್ಲವನ್ನೂ ಗಮನಿಸಿದರೆ, ಅವರನ್ನು ಹೊಸಗನ್ನಡ ಆಚಾರ್ಯ ಪುರುಷರೆಂದು ಕರೆದಿರುವುದು ಉತ್ತೇಕ್ಷೆಯಲ್ಲ ಎಂದು ಯಾರಿಗಾದರೂ ಅನ್ನಿಸುತ್ತದೆ.

ಶ್ರೀಯವರು ಮಹಾಕಾವ್ಯವನ್ನು ಬರೆಯಲಿಲ್ಲ. ಆದರೆ ಮಹಾಕಾವ್ಯ ಬರೆಯುವವರಿಗೆ ಪ್ರೇರಕರಾಗಿದ್ದಾರೆ. ಇಂಗ್ಲಿಷ್ ಛಂದಸ್ಸು ಮತ್ತು ಕನ್ನಡ ಛಂದಸ್ಸುಗಳ ಹದವಾದ ಬೆರಕೆಯಿಂದ ಹೊಸ ಫಸಲನ್ನು ಪಡೆಯಬಹುದೆಂದು ತೋರಿಸಿ ಕೊಟ್ಟಿದ್ದಾರೆ. ಹಳಗನ್ನಡ ಕಾವ್ಯಶೈಲಿಯನ್ನು ಸುಧಾರಿಸಿ ಹೊಸ ಅಭಿವ್ಯಕ್ತಿಗೆ ಬಳಸಿಕೊಳ್ಳುವ ರೀತಿಯನ್ನು ತಿಳಿಸಿದ್ದಾರೆ. ಹೊಸಗನ್ನಡ ಛಂದಸ್ಸಿಗೆ ಹಾಗೂ ಭಾವಗೀತೆಗಳ ಸೃಷ್ಟಿಗೆ ಕಾರಣರಾಗಿದ್ದಾರೆ. ಕನ್ನಡ ಮಾತು ತಲೆಯೆತ್ತುವ ಬಗೆಯನ್ನು ತೋರಿಸಿಕೊಟ್ಟಿದ್ದಾರೆ. ಕನ್ನಡಿಗರು ಹೇಗೆ ಕನ್ನಡವನ್ನು ಉಳಿಸಿಕೊಳ್ಳಬಹುದು ಹಾಗೂ ಬೆಳೆಸಬಹುದು ಎನ್ನುವುದನ್ನು ತಿಳಿಸಿದ್ದಾರೆ.

## ಬಾಲ್ಯ - ವಿದ್ಯಾಭ್ಯಾಸ

ಶ್ರೀಕಂಠಯ್ಯನವರು ಜನಿಸಿದ್ದು ೧೮೮೪ರ ಜನವರಿ ೩ ರಂದು. ಕಲ್ಪತರು ನಾಡಾದ ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಸಂಪಿಗೆ ಗ್ರಾಮದಲ್ಲಿ. ತಂದೆ ಬೆಳ್ಳೂರು ಮೈಲಾರಯ್ಯ, ತಾಯಿ ಭಾಗೀರಥಮ್ಮ. 'ಬಿ.ಎಂ.ಶ್ರೀ'ಯವರ ತಂದೆಯವರು ಮಂಡ್ಯ ಜಿಲ್ಲೆಯ ಬೆಳ್ಳೂರಿನವರು. ಈ ದಂಪತಿಗಳಿಗೆ ಐದು ಜನ ಮಕ್ಕಳು. ಬಿ.ಎಂ. ಶ್ರೀಕಂಠಯ್ಯ, ಕಾವೇರಮ್ಮ, ಬಿ. ನಂಜಮ್ಮ, ಬಿ.ಎಂ. ಶಿವರಾಮಯ್ಯ, ಮತ್ತು ಬಿ.ಎಂ. ಕೃಷ್ಣಸ್ವಾಮಿ, ಮೈಲಾರಯ್ಯನವರು ಶ್ರೀರಂಗಪಟ್ಟಣದ ವಕೀಲಿ ವೃತ್ತಿಯಲ್ಲಿ ನಿರತರಾಗಿದ್ದರು. ಶ್ರೀಕಂಠಯ್ಯನವರು ಮೈಲಾರಯ್ಯ ದಂಪತಿಗಳ ಮೊದಲನೆ ಮಗ. ಚಿಕ್ಕಂದಿನಲ್ಲಿ ತುಂಟ ಹಾಗೂ ಚುರುಕು ಸ್ವಭಾವದವರಾಗಿದ್ದರು. ಪ್ರಾಥಮಿಕ ಶಾಲೆಯನ್ನು ಶ್ರೀರಂಗಪಟ್ಟಣದಲ್ಲಿ ಮುಗಿಸಿದ ಶ್ರೀಕಂಠಯ್ಯನವರು ಪ್ರೌಢಶಾಲೆಗೆ ಮೈಸೂರಿಗೆ ಹೋದರು. ಅಲ್ಲಿ ಶ್ರೀರಂಗಪಟ್ಟಣದ ಹುಡುಗರ ಒಂದು ದೊಡ್ಡ ಗುಂಪು. ಈ ಗುಂಪಿನಲ್ಲಿ ಮುಂದೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಎನ್.ಎಸ್. ಸುಬ್ಬರಾವ್, ಪ್ರಸಿದ್ಧ ವಕೀಲರಾಗಿದ್ದ ಎಂ.ಜಿ. ವರದಾಚಾರ್ಯರು, ಪ್ರೊ. ಅಣ್ಣಾಜಿ ರಾಯರು, ಎಂಜಿನಿಯರ್ ಆಗಿದ್ದ ವೆಂಕಟಸುಬ್ಬರಾಯರು ಇದ್ದರು. ಇವರೆಲ್ಲರೂ ಶ್ರೀರಂಗಪಟ್ಟಣದ ಗುಂಪಿಗೆ ಸೇರಿದ್ದರು.

ಶ್ರೀಕಂಠಯ್ಯನವರು ಮೈಸೂರಿನಲ್ಲಿ ಮ್ಯಾಟ್ರಿಕ್ಯುಲೇಶನ್ ಮತ್ತು ಎಫ್.ಎ. ಪರೀಕ್ಷೆಯನ್ನು ಪಾಸು ಮಾಡಿದರು. ಆಮೇಲೆ ಕಾಲೇಜು ಶಿಕ್ಷಣಕ್ಕಾಗಿ ಬೆಂಗಳೂರಿನ ಸೆಂಟ್ರಲ್ ಕಾಲೇಜನ್ನು ಸೇರಿದರು. ಇಲ್ಲಿ ಐಚ್ಛಿಕ ಕಲಾ ವಿಷಯದೊಂದಿಗೆ ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳನ್ನು ಕಲಿತು ೧೯೦೩ರಲ್ಲಿ ಬಿ.ಎ. ಪದವೀಧರರಾದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬೆಳ್ಳಾವೆ ವೆಂಕಟನಾರಣಪ್ಪ ಅವರ ಗುರುಗಳು. ಕರ್ನಾಟಕ (ಕನ್ನಡ) ಸಾಹಿತ್ಯ ಪರಿಷತ್ತನ್ನು ಕಟ್ಟಿಬೆಳೆಸಿದವರಲ್ಲಿ ಇವರು ಪ್ರಮುಖರು. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯವನ್ನು ಪರಿಚಯಿಸಿದವರು. ವೆಂಕಟನಾರಣಪ್ಪನವರ ಕನ್ನಡ ಪ್ರೇಮ ಅವರ ಶಿಷ್ಯರಾದ ಶ್ರೀಕಂಠಯ್ಯನವರಿಗೂ ಅಂದೆ ಸೋಂಕಿರಬಹುದು. ಇದಕ್ಕೂ ಮುನ್ನ, ಉಭಯಭಾಷಾ ವಿಶಾರದರೂ, ವ್ಯಾಕರಣ ಪಂಡಿತರೂ, ಕಾವ್ಯ ರಸಿಕರೂ ಆದ ಕಾನಕಾನಹಳ್ಳಿ ವರದಾಚಾರ್ಯರು ಶ್ರೀಯವರ ಇನ್ನೊಬ್ಬ ಗುರುಗಳಾಗಿದ್ದರು. ಶ್ರೀಯವರಿಗೆ 'ಹಳಗನ್ನಡ ಕಾವ್ಯದಲ್ಲಿ ಆಸಕ್ತಿಮೂಡಲು ವರದಾಚಾರ್ಯರ ಬೋಧನೆಯೂ ಒಂದು ಮುಖ್ಯ ಪ್ರೇರಕ ಶಕ್ತಿಯಾಗಿತ್ತು' ಎಂದು

ಎಂ.ವಿ. ಸೀತಾರಾಮಯ್ಯನವರು ಒಂದು ಕಡೆ ದಾಖಲಿಸಿದ್ದಾರೆ. ಶ್ರೀಯವರಲ್ಲಿ ಸಹಜವಾಗಿಯೇ ಸುಪ್ತವಾಗಿ ಅಡಗಿದ್ದ ಕನ್ನಡ ಪ್ರೀತಿ ಗುರುಗಳ ಪ್ರಭಾವದಿಂದ ಜಾಗೃತವಾಯಿತು.

ಶ್ರೀಕಂಠಯ್ಯನವರಿಗೆ ಬಿ.ಎಲ್. ಓದಬೇಕು, ಹಾಗೆಯೇ ಎಂ.ಎ. ಪಾಸುಮಾಡಬೇಕು ಎನ್ನುವ ಆಸೆಯಿತ್ತು. ಆಗ ಬೆಂಗಳೂರಿನಲ್ಲಿ ಅವಕಾಶವಿರಲಿಲ್ಲ. ತಮ್ಮಂತೆಯೇ ಮಗನೂ ವಕೀಲನಾಗಬೇಕೆಂದು ಮೈಲಾರಯ್ಯನವರು ಬಯಸಿದ್ದರು. ಅದಕ್ಕಾಗಿಯೆ ಮದರಾಸಿಗೆ ಹೋಗಿ ೧೯೦೬ರಲ್ಲಿ ಬಿ.ಎಲ್. ಪಾಸು ಮಾಡಿದರು. ಆದರೆ ಶ್ರೀಕಂಠಯ್ಯನವರಿಗೆ ವಕೀಲರಾಗುವುದು ಇಷ್ಟವಿರಲಿಲ್ಲ. ಮುಂದುವರೆದು ೧೯೦೯ರಲ್ಲಿ ಇಂಗ್ಲಿಷ್ ಎಂ.ಎ. ಪದವಿಯನ್ನು ಪಡೆದರು. ಮದರಾಸಿನಲ್ಲಿ ಓದುತ್ತಿದ್ದ ಸಮಯದಲ್ಲಿ ಕನ್ನಡನಾಡು-ನುಡಿಯ ಬಗೆಗೆ ಚಿಂತಿಸುತ್ತಾ, ಸ್ನೇಹಿತರೊಂದಿಗೆ ಚರ್ಚಿಸುತ್ತಾ ಕನ್ನಡದತ್ತ ಹೊರಳಿದರು. ಇಂಗ್ಲಿಷ್ ಸಾಹಿತ್ಯವನ್ನು ಅಧ್ಯಯನ ವಿಷಯವನ್ನಾಗಿ ಆರಿಸಿಕೊಂಡು ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿಯೇ ಪ್ರಾಚೀನ ಕನ್ನಡ ಸಾಹಿತ್ಯದ ಪಕ್ಕದಲ್ಲಿ ಇಂಗ್ಲಿಷ್ ಸಾಹಿತ್ಯವನ್ನು ಇಟ್ಟು ಪರಸ್ಪರ ಹೋಲಿಸಿ ತುಲನೆಮಾಡುವ, ಪರೀಕ್ಷಿಸಿ ನೋಡುವ ಪ್ರವೃತ್ತಿ ಶ್ರೀಯವರಿಗೆ ಆಗಲೇ ಆರಂಭವಾಗಿರಬೇಕೆಂದು ತೋರುತ್ತದೆ.

ಆಗಿನ ಕಾಲದಲ್ಲಿ ಹಿಂದಿನ ಮೈಸೂರು ಸಂಸ್ಥಾನ ಸರ್ಕಾರದ ಸಿವಿಲ್ ಸೇವೆಗೆ ಪರೀಕ್ಷೆಯನ್ನು ನಡೆಸುತ್ತಿತ್ತು. ಅಮಲ್ದಾರರಾಗಿ ಡೆಪ್ಯೂಟಿ ಕಮೀಷನರ್ ಪದವಿಗೆ ಏರಬೇಕೆಂಬುದು ಆಗಿನ ಕಾಲದ ಮೇಧಾವಿ ಪದವೀಧರರಿಗೆ ಇದ್ದ ಆಸೆ. ಶ್ರೀಕಂಠಯ್ಯನವರು ಮೈಸೂರು ಸಂಸ್ಥಾನದ ಸಿವಿಲ್ ಸರ್ವಿಸ್ ಪರೀಕ್ಷೆಗೆ (ಎಂ.ಸಿ.ಎಸ್) ಹಾಜರಾಗಿ ಅಸಿಸ್ಟೆಂಟ್ ಕಮೀಷನರ್ ಆಗಲು ಬಯಸಿದರು. ಸಿವಿಲ್ ಪರೀಕ್ಷೆಯಲ್ಲಿ ನಿರೀಕ್ಷಿಸಿದ 'ರ್‍ಯಾಂಕ್' ಬಾರದೆ ಆ ಹುದ್ದೆ ತಪ್ಪಿಹೋಯಿತು. ಅದರಲ್ಲಿ ಅವರು ಯಶಸ್ವಿಯಾಗಲಿಲ್ಲ. ಅವರೇ ಹೇಳಿಕೊಂಡಿರುವಂತೆ 'ಇವರಿಬ್ಬರೂ (ಮಾಧವರಾವ್ ಮತ್ತು ಎ.ವಿ. ರಾಮನಾಥನ್) ನನ್ನನ್ನು ಮೈಸೂರು ಸಿವಿಲ್ ಪರೀಕ್ಷೆಯಲ್ಲಿ ಅದುಮಿ ತಾವು ಮೇಲಕ್ಕೇರಿದರು; ಹೀಗಾಗಿ ನನ್ನ ಕಾರ್ಯಕ್ಷೇತ್ರ ಬೇರೆಯಾಯಿತು. ಕನ್ನಡಿಗರ ಅದೃಷ್ಟ ಚೆನ್ನಾಗಿತ್ತು. ಅವರ ಸೇವೆ ಕನ್ನಡ ಸಾಹಿತ್ಯಕ್ಕೆ ದೊರೆಯುವಂತಾಯಿತು. ಶ್ರೀಯವರೇ ಹೇಳುವಂತೆ 'ನಾನು ಕಡೆಗೆ ಉಪಾಧ್ಯಾಯನಾದೆ. ಕರುಣಾಳು ಬೆಳಕು ನನ್ನನ್ನು ನನ್ನ ಹೃದಯಕ್ಕೆ ಒಗ್ಗಿದ ಕೆಲಸಕ್ಕೇ ತಂದುಬಿಟ್ಟಿತು. ಆ ಕಾಲದಲ್ಲಿ ಇಂಗ್ಲಿಷ್ ಮೇಲುಗೈ ಸಾಧಿಸಿತ್ತು. ಇಂಗ್ಲಿಷ್ ಬಲ್ಲವರಿಗೆ ಕೆಲಸ ಕೈಬೀಸಿ ಕರೆಯುತ್ತಿತ್ತು. ೧೯೦೯ ರಲ್ಲಿ ಮೈಸೂರು ಸರ್ಕಾರದ ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಉಪನ್ಯಾಸಕರಾಗಿ ಸೇವೆಯನ್ನು ಆರಂಭಿಸಿದರು. ಆಗ ಶ್ರೀಕಂಠಯ್ಯನವರಿಗೆ ೨೫ ವರ್ಷದ ಪ್ರಾಯ. ಅವರು ಇಂಗ್ಲೀಷ್ ಮತ್ತು ಕನ್ನಡ ಎರಡು ವಿಷಯಗಳನ್ನು ಬೋಧಿಸಬೇಕಿತ್ತು. ಬಿ.ಎಂ.ಶ್ರೀಯವರು ಇಂಗ್ಲಿಷ್‌ಅನ್ನು ಕರತಲಾಮಲಕ ಮಾಡಿಕೊಂಡಿರುವಂತೆಯೆ ಹಳಗನ್ನಡ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು. ಪ್ರಾಚೀನ ಸಾಹಿತ್ಯವನ್ನು ಸ್ವತಃ ಓದಿ ಅರಗಿಸಿಕೊಂಡಿದ್ದರು. ಕನ್ನಡವನ್ನು ಆಗಿನ ಕಾಲದಲ್ಲಿ ಕೇಳುವವರೆ ಇರಲಿಲ್ಲ. ಆಡಳಿತ, ಶಿಕ್ಷಣ ಕ್ಷೇತ್ರದಲ್ಲಿ ಇಂಗ್ಲಿಷ್ ತನ್ನ ಅಧಿಪತ್ಯವನ್ನು ಸ್ಥಾಪಿಸಿತ್ತು. ಸ್ವಾತಂತ್ರ್ಯ

ಹೋರಾಟಕ್ಕೆ ಹಿಂದಿ, ಸಂಸ್ಕೃತಿ-ಧರ್ಮ-ಸಾಹಿತ್ಯ ಮುಂತಾದವುಗಳಿಗೆ ಸಂಸ್ಕೃತ ಬಳಕೆಯಾಗಿ ಕನ್ನಡವನ್ನು ಕೇಳುವವರೆ ಇರಲಿಲ್ಲ. ಇದನ್ನು ಚೆನ್ನಾಗಿ ಮನಗಂಡ ಶ್ರೀಯವರು ಕನ್ನಡಕ್ಕಾಗಿ ಕಂಕಣ ಕಟ್ಟಿದರು.

'ಬಿ.ಎಂ.ಶ್ರೀ'ಯವರು ಮದ್ರಾಸಿನಲ್ಲಿ ಬಿ.ಎಲ್.ಪದವಿಗಾಗಿ ಓದುತ್ತಿರುವ ಸಮಯದಲ್ಲಿ ಅಲ್ಲಿಯೇ ಓದುತ್ತಿದ್ದ ಕನ್ನಡದ ಮತ್ತೊಬ್ಬ ಸಾಹಿತಿ ಟಿ.ಪಿ. ಕೈಲಾಸಂ ಅವರ ಪರಿಚಯವಾಯಿತು. ಶ್ರೀರಂಗಪಟ್ಟಣದ ಪ್ರಾಥಮಿಕ ಶಾಲೆಯಲ್ಲಿ ಸಹಪಾಠಿಯಾಗಿದ್ದು ಆನಂತರದ ದಿನಗಳಲ್ಲಿ ಮೈಸೂರು, ಬೆಂಗಳೂರು ಮದರಾಸುಗಳಲ್ಲಿ ಸಹಪಾಠಿಯೂ, ಸ್ನೇಹಿತರೂ, ಮುಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಹೋದ್ಯೋಗಿಯೂ ಆದ ಎನ್.ಎಸ್.ಸುಬ್ಬರಾಯರು ಮತ್ತು ಇತರ ಕೆಲವು ಮಿತ್ರರು ಸೇರಿ ಸಂಜೆಯ ಹೊತ್ತು ಸಮುದ್ರ ತೀರದಲ್ಲಿ ಕುಳಿತು ಕನ್ನಡದ ಬಗೆಗೆ ಚರ್ಚಿಸುತ್ತಿದ್ದರು. ಶ್ರೀಯವರೇ ಹೇಳಿಕೊಂಡಿರುವಂತೆ "ಈಗಲೂ ನನಗೆ ಜ್ಞಾಪಕವಿದೆ - ಮದರಾಸಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ, ನನ್ನ ಸ್ನೇಹಿತರೂ ನಾನೂ ಸಾಯಂಕಾಲ ಸಮುದ್ರ ತೀರದಲ್ಲಿ ಮರಳಿನ ಮೇಲೆ ಕುಳಿತು ಸಮಾಜ ಮತ್ತು ಸಾಹಿತ್ಯದ ವಿಷಯಗಳನ್ನು ಚರ್ಚಿಸುತ್ತ, ಹೀಗೆ ಮಾಡಬೇಕು, ಹಾಗೆ ಮಾಡಬೇಕು, ಕನ್ನಡ ನಾಡಿಗೆ, ಕನ್ನಡ ನುಡಿಗೆ, ನಮ್ಮ ಬಾಳಿಕೆಯನ್ನೇ ಕಾಣಿಕೆಯಾಗಿ ಒಪ್ಪಿಸಿಕೊಳ್ಳಬೇಕು ಎಂಬ ಪೌರುಷವನ್ನು ಕೊಚ್ಚಿಕೊಳ್ಳುತ್ತಿದ್ದುದು; ಕನ್ನಡ ಕಾವ್ಯಗಳನ್ನೆಲ್ಲ ಓದಬೇಕು, ಜನರಲ್ಲಿ ಬಳಕೆಗೆ ತರಬೇಕು, ಉಪಾಧ್ಯಾಯನಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಪ್ರೇಮವನ್ನು ಬಿತ್ತಬೇಕು. ಜನಸಾಮಾನ್ಯಕ್ಕೆ ತಿಳುವಳಿಕೆಯೂ ಹೊಸನಡೆವಳಿಕೆಯೂ ಹುಟ್ಟುವಂತೆ ಕಾಲಕ್ಕೆ ತಕ್ಕ ಪುಸ್ತಕಗಳನ್ನು ಬರೆಯಬೇಕು, ಷೇಕ್ಸ್ಪಿಯರನ ನಾಟಕಗಳನ್ನೂ ಗ್ರೀಕರ ರುದ್ರ ನಾಟಕಗಳನ್ನೂ, ಪ್ಲೇಟೋವಿನ ಸಂವಾದವನ್ನೂ ಕಾರ್ಲೈಲಿನ ಧೀರೋಪದೇಶಗಳನ್ನು ಕನ್ನಡಕ್ಕೆ ತರಬೇಕು' ಇತ್ಯಾದಿ.

ಬಿ.ಎಂ.ಶ್ರೀಯವರು ವಿದ್ಯಾರ್ಥಿಯಾಗಿದ್ದಾಗ ಕನ್ನಡ ಬಹಳ ಶೋಚನೀಯವಾದ ಸ್ಥಿತಿಯಲ್ಲಿ ಇತ್ತು. ಅದಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ದೊರಕಿಸಿಕೊಳ್ಳಬೇಕು; ಅದರ ಸಾಹಿತ್ಯ ಸಂಪತ್ತನ್ನು ಹೆಚ್ಚಿಸಬೇಕು; ಷೇಕ್ಸ್ಪಿಯರ್, ಪ್ಲೇಟೋ ಮುಂತಾದವರ ಕೃತಿಗಳನ್ನು ಕನ್ನಡಕ್ಕೆ ತರಬೇಕು ಇತ್ಯಾದಿ ವಿಚಾರಗಳ ಚರ್ಚೆಯನ್ನು ನಡೆಸುತ್ತಿದ್ದರಂತೆ. ಶ್ರೀಯವರು ವಿದ್ಯಾರ್ಥಿಯಾಗಿದ್ದ ಸಮಯದಲ್ಲಿಯೇ ಭಾಷಾಭಿಮಾನಿಗಳಾಗಿದ್ದರು. ಅವರ ಕನ್ನಡದ ಅಭಿಮಾನವನ್ನು ಕುರಿತು 'ಕನ್ನಡದ 'ಹುಚ್ಚು' ಅವರಿಗೆ ಹಿಡಿದಿರುವಷ್ಟು ಹಿಂದೆ ಯಾರಿಗೂ ಹಿಡಿದಿರಲಿಲ್ಲ' ಎಂದು ಬೆಳ್ಳಾವೆ ವೆಂಕಟನಾರಣಪ್ಪನವರು ಹೇಳಿದ್ದಾರೆ. ಕನ್ನಡ ನುಡಿಯ ಮುನ್ನಡೆ, ಕನ್ನಡ ನಾಡಿನ ಸಾಂಸ್ಕೃತಿಕ ಏಕೀಕರಣ ಈ ಬಗ್ಗೆ ಅವರು ಮಾಡಿದ ನಿಃಸ್ವಾರ್ಥ ಸೇವೆಯನ್ನು ಎಲ್ಲರೂ ಬಲ್ಲರು' ಎಂದು ಮಿರ್ಜಾ ಎಂ. ಇಸ್ಮಾಯಿಲ್ ತಿಳಿಸಿದ್ದಾರೆ. ಮದರಾಸಿನ ಸಮುದ್ರ ತೀರದಲ್ಲಿ ಹಲವು ಸಂಜೆಯ ಸಮಯದಲ್ಲಿ ಅವರು ಮತ್ತು ಅವರ ಸ್ನೇಹಿತರ ಮನಸ್ಸಿನಲ್ಲಿ ಸುಳಿದಾಡುತ್ತಿದ್ದ ಅನೇಕ ಯೋಚನೆಗಳು/ಯೋಜನೆಗಳು ಬಹಳ ಬೇಗ ನಿರ್ದಿಷ್ಟವಾದ ರೂಪವನ್ನು ತಳೆಯುವಂತಾಯಿತು. "ಬಿ.ಎಂ.ಶ್ರೀ' ಯವರು ಎಂ.ಎ. ಪದವಿಯನ್ನು ಮುಗಿಸಿದ ನಾಲ್ಕು ವರ್ಷಗಳ ನಂತರದಲ್ಲಿ ೧೯೧೧ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ "ಕನ್ನಡ ಮಾತು ತಲೆಯೆತ್ತುವ ಬಗೆ'

ಕುರಿತು ಉಪನ್ಯಾಸ ಮಾಡಿದರು. ಇಂದಿಗೂ ಆ ಉಪನ್ಯಾಸವನ್ನು ಓದಿದರೆ ಶ್ರೀಯವರು ಕನ್ನಡದ ಸ್ಥಿತಿಯನ್ನು ಕುರಿತು ಎಷ್ಟು ಆಳವಾಗಿ ಯೋಚಿಸಿದ್ದರು, ಎಷ್ಟೊಂದು ಮುಖಗಳನ್ನು ಗುರುತಿಸಿದ್ದರು ಎನ್ನುವ ಆಶ್ಚರ್ಯ ಮೂಡುತ್ತದೆ. ಈ ಉಪನ್ಯಾಸದಲ್ಲಿ ಕನ್ನಡ -ಸಂಸ್ಕೃತದ ಸಂಬಂಧ. ಕನ್ನಡ-ಇಂಗ್ಲಿಷ್ ಸಂಬಂಧ, ಹಿಂದಿನ ಸಾಹಿತ್ಯ ಕುರಿತು ವಿಮರ್ಶೆ, ಕನ್ನಡ ಭಾಷೆಯನ್ನು ಆಧುನಿಕ ಕಾಲದ ಅಗತ್ಯಗಳಿಗೆ ಹೊಂದಿಕೊಳ್ಳುವಂತೆ ಬೆಳೆಸುವ ಮಾರ್ಗ - ಕುರಿತು ತಮ್ಮ ಸ್ಪಷ್ಟವಾದ ಮಾತುಗಳನ್ನು ಹೇಳಿದ್ದಾರೆ. ಕನ್ನಡದ ಉದ್ದಾರವಾಗಬೇಕು" ಎಂದು ಅಭಿಮಾನದಿಂದ ಹೇಳುವುದು ಅಷ್ಟೇ ಅಲ್ಲ, ಖಚಿತವಾದ ವಿಧಾನವನ್ನೂ ಸೂಚಿಸುತ್ತಾರೆ. ಇದೆಲ್ಲ ಕೇವಲ ನಾಲ್ಕು ದಿನಗಳಲ್ಲಿ ಹೊಳೆದ ಆಲೋಚನೆಗಳಾಗಿರದೆ ಹಲವಾರು ವರ್ಷಗಳ ಚಿಂತನೆಯ, ವಿಚಾರ ವಿನಿಮಯ ಹಾಗೂ ಚರ್ಚೆಯ ಫಲ ಎನ್ನುವುದು ಯಾರಿಗಾದರೂ ತಿಳಿಯುತ್ತದೆ. ವಿದ್ಯಾರ್ಥಿಯಾಗಿದ್ದ ಸಮಯದಲ್ಲಿಯೇ ಶ್ರೀಯವರು ಕನ್ನಡದ ಸಮಸ್ಯೆಯನ್ನು ಕುರಿತು ಚಿಂತಿಸಿದ್ದರು. ಅತ್ಯಂತ ಕಳಕಳಿಯಿಂದ ಯೋಚಿಸಿದ್ದರು ಎನ್ನುವುದು ಸ್ಪಷ್ಟ.

## ಅಧ್ಯಾಪಕ ವೃತ್ತಿ

ಬಿ.ಎಂ.ಶ್ರೀ'ಯವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕರಾಗಿದ್ದರು. ಅವರ ವಿದ್ವತ್ತನ್ನು ಪ್ರತಿಭೆಯನ್ನು ವಿದ್ಯಾರ್ಥಿಗಳು ಪಾಠಪ್ರವಚನಗಳ ಮೂಲಕ ಗ್ರಹಿಸಿ ಜ್ಞಾನಗಂಗೆಯಲ್ಲಿ ಮಿಂದು ಧನ್ಯರಾಗಿದ್ದಾರೆ. ಇವರ ಅಧ್ಯಾಪನ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಓದಿ ಪಾಸುಮಾಡುವುದಷ್ಟೇ ಸೀಮಿತವಾಗಿರಲಿಲ್ಲ. ಮುಂದೆ ಕವಿಗಳಾಗಲು, ಕನ್ನಡದ ಕಟ್ಟಾಳುಗಳಾಗಲು ಬೇಕಾದ ಮಾರ್ಗದರ್ಶನವನ್ನು, ಕನ್ನಡವನ್ನು ಬೆಳೆಸಲು ಬೇಕಾದ ಶಕ್ತಿಯನ್ನು ನೀಡುವುದೇ ಆಗಿತ್ತು. ಶ್ರೀಯವರ ಆಪ್ತ ಶಿಷ್ಯ ವರ್ಗಕ್ಕೆ ಸೇರಿದ್ದ ಶ್ರೀ ವಿ.ಸೀತಾರಾಮಯ್ಯನವರು ತಮ್ಮ ಗುರುಗಳ ಬಗ್ಗೆ ಹೇಳಿರುವ ಮಾತುಗಳು: 'ನಾವು ಕಾಲೇಜು ಪ್ರವೇಶ ಮಾಡುವುದಕ್ಕೆ ಮುಂಚಿತವಾಗಿಯೇ ಅವರದು ಅದ್ಭುತ ಪಾಂಡಿತ್ಯ. ಅವರನ್ನು ಎದುರಿಸಿ ಮಾತನಾಡುವವರು ಯಾರೂ ಇರಲಿಲ್ಲ. ಬಹಳ ಕಟ್ಟುನಿಟ್ಟು, ಸುಳ್ಳು ಪೊಳ್ಳು ಹೇಳಿ ಅವರಿಂದ ತಪ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಯಾರ ತಲೆಹೋಕತನವನ್ನೂ ಒಂದು ಮಾತಿನಲ್ಲಿ ಮುರಿದು ಬಿಡುತ್ತಾರೆ; ಪರೀಕ್ಷೆಯಲ್ಲಿ ಸೊನ್ನೆ ಹಾಕಿ ಬಿಡುತ್ತಾರೆ ಎನ್ನುವ ಭಯದಿಂದ ಅವರ ಕ್ಲಾಸನ್ನು ಪ್ರವೇಶ ಮಾಡುತ್ತಿದ್ದೆವು'. 'ಶ್ರೀಯವರು ಪ್ರಾಮಾಣಿಕ ಅಧ್ಯಾಪಕರು. ಅವರು ತರಗತಿಗೆ ಎಂದೂ ಹೊತ್ತು ಮೀರಿ ಬಂದವರಲ್ಲ. ತಮ್ಮ ಕೆಲಸದಲ್ಲಿ ಅಸಡ್ಡೆ ತೋರಿದವರಲ್ಲ.'

ಶ್ರೀಯವರು ತಮ್ಮ ಶಿಷ್ಯರ ಪ್ರತಿಭೆಯನ್ನು ಸದಾ ಪ್ರೋತ್ಸಾಹಿಸುತ್ತಿದ್ದರು. ಬಿಚ್ಚು ಮನಸ್ಸಿನಿಂದ ಹೊಗಳಿ ಉತ್ತೇಜನ ನೀಡುತ್ತಿದ್ದರು. ಉತ್ತಮ ಪ್ರಬಂಧಕಾರರಾದ ಪ್ರೊ. ಎ.ಎನ್ ಮೂರ್ತಿರಾಯರು ಶ್ರೀಯವರ ಶಿಷ್ಯರು. ಅವರು ಬಿ.ಎ. ವಿದ್ಯಾರ್ಥಿಯಾಗಿದ್ದಾಗ ಉತ್ತಮವಾದ ಒಂದು ಇಂಗ್ಲಿಷ್ ಪ್ರಬಂಧವನ್ನು ರಚಿಸಿದ್ದರಂತೆ. ಶ್ರೀಯವರು ಅದನ್ನು ಮೆಚ್ಚಿಕೊಂಡು ತರಗತಿಗೆ ತಂದು ಓದುವುದರ ಜೊತೆಗೆ " ನಾನು ಇದಕ್ಕಿಂತ ಉತ್ತಮವಾಗಿ ಬರೆಯುತ್ತೇನೆ ಎಂದು ತಿಳಿದುಕೊಂಡಿಲ್ಲ" ಎಂದು ಹೇಳಿ ಶಿಷ್ಯನನ್ನು ಪ್ರಶಂಸಿಸಿದರು.

ರಾಷ್ಟ್ರಕವಿ ಕುವೆಂಪು ಕೂಡ ಶ್ರೀಯವರ ಶಿಷ್ಯರು. ಅವರು ರಚಿಸಿದ 'ಕೊಳಲು' ಎನ್ನುವ ಕವನ ಸಂಕಲನಕ್ಕೆ ಶ್ರೀಯವರು ಮುನ್ನುಡಿ ಬರೆದಿದ್ದಾರೆ. ಶ್ರೀಯವರು ಕಲಬುರ್ಗಿಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಆ ಸಮಯದಲ್ಲಿ ಶ್ರೀಯವರ 'ಗದಾಯುದ್ಧ' ನಾಟಕ ಹಾಗೂ ಕುವೆಂಪು ಅವರ 'ಯಮನ ಸೋಲು' ನಾಟಕಗಳನ್ನು ಅಭಿನಯಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀಯವರಿಗೆ ಮಾಲೆಯನ್ನು ಅರ್ಪಿಸಲಾಯಿತು. ಅಲ್ಲಿ ಶ್ರೀಯವರಿಗೆ ಅರ್ಪಿಸಲಾದ ಪುಷ್ಪಮಾಲಿಕೆಯನ್ನ ವೇದಿಕೆಯಲ್ಲಿದ್ದ ಕುವೆಂಪು ಅವರ ಕೊರಳಿಗೆ ಹಾಕಿದರು. ಇದು ಇವರಿಗೆ ಸಲ್ಲಬೇಕೆಂದು ಸಂತೋಷವನ್ನು ವ್ಯಕ್ತಪಡಿಸಿದರು. ಇದು ಶ್ರೀಯವರ ಶಿಷ್ಯ ವಾತ್ಸಲ್ಯ.

೧೯೦೯ರಲ್ಲಿ ಉಪನ್ಯಾಸಕರಾಗಿ ನೇಮಕಗೊಂಡ ಶ್ರೀಯವರು ೧೯೧೪ರಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಪದೋನ್ನತಿಯನ್ನು ಪಡೆದರು. ಕೆಲವು ವರ್ಷಗಳ ನಂತರ ಇಂಗ್ಲಿಷ್ ಪ್ರೊಫೆಸರ್ ಮತ್ತು ಗೌರವ ಕನ್ನಡ ಪ್ರೊಫೆಸರ್ ಆಗಿ ನೇಮಕವಾದರು. ಕೆಲ ಕಾಲ ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆಗಿಯೂ ಕೆಲಸ ಮಾಡಿದರು. ಇಂಗ್ಲಿಷ್ ಎಂ.ಎ. ತರಗತಿಗಳಿಗೆ ಮಾತ್ರವಲ್ಲದೆ ಕನ್ನಡ ಎಂ.ಎ. ತರಗತಿಗೂ ಪಾಠ ಹೇಳುತ್ತಿದ್ದರು. ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ಮೇಲೆ ಅವರದು ವಿಶಿಷ್ಟವಾದ ಪ್ರಭುತ್ವ, ಇಂಗ್ಲಿಷ್ ಮೂಲಕ ಯೂರೋಪಿನ ಅನೇಕ ಸಾಹಿತ್ಯ ಕೃತಿಗಳನ್ನು ಅಭ್ಯಾಸ ಮಾಡಿದ್ದರು. ಬಿ.ಎಂ.ಶ್ರೀಕಂಠಯ್ಯನವರು ಒಳ್ಳೆಯ ಕುಟುಂಬದಲ್ಲಿ ಜನಿಸಿದವರು. ಉನ್ನತ ಶಿಕ್ಷಣವನ್ನು ಪಡೆದರು. ಕನ್ನಡ ಇಂಗ್ಲೀಷ್ ತಮಿಳು ಹಾಗೂ ಗ್ರೀಕ್ ಸಾಹಿತ್ಯದಲ್ಲಿ ಉದ್ದಾಮ ಪಂಡಿತರು. ಪೂರ್ವ ಸಿದ್ಧತೆ ಇಲ್ಲದೆ ಎಂದಿಗೂ ತರಗತಿಗೆ ಕಾಲಿಡುತ್ತಿರಲಿಲ್ಲ. ಮೂವತ್ತೈದು ವರ್ಷಗಳ ಕಾಲ ಷೇಕ್ಸ್ಪಿಯರ್ ಅವರ 'ಹ್ಯಾಮ್ಲೆಟ್' ಕೃತಿಯನ್ನು ಪಾಠಮಾಡಿದ್ದರೂ, ನಾಟಕದ ಪ್ರತಿ ಪಂಕ್ತಿಯೂ ನೆನಪಿನಲ್ಲಿದ್ದರೂ ಪ್ರತಿ ಸಾರಿ ತರಗತಿಗೆ ಹೋಗುವ ಮುನ್ನ ಮತ್ತೆ ಮನನ ಮಾಡದೆ ತರಗತಿಯನ್ನು ಪ್ರವೇಶಿಸುತ್ತಿರಲಿಲ್ಲ. ಶ್ರೀಯವರು ಷೇಕ್ಸ್ಪಿಯರ್‌ನ ಎಲ್ಲ ನಾಟಕಗಳನ್ನು ವ್ಯಾಸಂಗಮಾಡಿ ಮುಖ್ಯವಾದುವುಗಳನ್ನು ಪಾಠ ಹೇಳಿದ್ದರೂ ಅವರ ಒಲವು ಮಾತ್ರ ಆತನ ದುರಂತ ನಾಟಕಗಳಲ್ಲಿ. ಅವರು ನಾಟಕಗಳನ್ನು ಬೋಧಿಸುತ್ತಿದ್ದ ರೀತಿ ಅದ್ಭುತ, ಅಸದೃಶ ಎಂದು ಅವರ ಶಿಷ್ಯರು ಕೊಂಡಾಡಿದ್ದಾರೆ. ಇವರ ಬೋಧನಾ ಕ್ರಮ ವಿದೇಶೀಯ ಆಂಗ್ಲ ಪ್ರಾಧ್ಯಾಪಕರೂ ಅಸೂಯೆಪಡುವಂತೆ ಇರುತ್ತಿತ್ತು. ಶ್ರೀಯವರು ಸಾಹಿತ್ಯವನ್ನು ಸವಿದು ಅದರ ಸಂತೋಷವನ್ನು ವಿದ್ಯಾರ್ಥಿಗಳಿಗೆ ಹಂಚುತ್ತಿದ್ದರು. ಪಾಠದ ಜೊತೆಜೊತೆಯಲ್ಲಿಯೇ ಶಾಸ್ತ್ರ ಭಾಗವನ್ನೂ ವಿವರಿಸುತ್ತಿದ್ದರು. ವ್ಯಾಕರಣ, ಅಲಂಕಾರ, ಛಂದಸ್ಸು, ಇವುಗಳ ಅಂಶವನ್ನೂ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡುತ್ತಿದ್ದರು.

ಶ್ರೀಕಂಠಯ್ಯನವರು ಕಾಲೇಜಿನ ಉಪಾಧ್ಯಾಯರಾಗಿ ಸೇರುವ ವೇಳೆಗೆ ಹೊಸ ಬಗೆಯ ವಿದ್ವಾಂಸರ ತಂಡವೊಂದು ಬೆಳೆದು ಮನ್ನಣೆ ಪಡೆದಿತ್ತು. ಇವರು ಆಕ್ಸ್‌ಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಪಡೆದಿದ್ದರು. ಆಂಗ್ಲರ ಸಂಸ್ಕೃತಿಯ ಎದುರಿಗೆ ನಮ್ಮ ಸಂಸ್ಕೃತಿಯು ದುಸ್ಥಿತಿಗೆ ಇಳಿದಿದೆ ಎನ್ನುವುದನ್ನು ಅವರು ಮನಗಂಡಿದ್ದರು. ಆದರೆ ಅವರ ಅಸಹನೆ 'ನಾವು ಯಾರಿಗೇನು ಕಡಿಮೆ ಎಂದು ಏರಿದ ಧ್ವನಿಯಲ್ಲಿ ಕೂಗಾಡಿ

ಅಷ್ಟರಲ್ಲೇ ತೃಪ್ತಿ ಪಡೆಯಲಿಲ್ಲ. ಭಾರತದ ಆತ್ಮಗೌರವಕ್ಕೆ ಭದ್ರವಾದ ತಳಹದಿಯನ್ನು ಹುಡುಕಬೇಕಿತ್ತು. ಇದು ಪುರಾತನ ಭಾರತದ ಸಾಧನೆಗಳಲ್ಲಿ ಇರುವುದು ಅವರಿಗೆ ಆ ವೇಳೆಗಾಗಲೆ ಮನವರಿಕೆಯಾಗಿತ್ತು. ಇವರೆಲ್ಲರೂ ದೇಶಾಭಿಮಾನಿಗಳು, ನಿಷ್ಪಕ್ಷಪಾತಿಗಳು, ಸತ್ಯವಂತರೂ, ದೂರ ದೃಷ್ಟಿಯುಳ್ಳವರೂ ಆಗಿದ್ದರು. 'ತಮ್ಮ ಕುಂದುಕೊರತೆಗಳನ್ನು ತಿದ್ದಿಕೊಂಡು ಹೊಸಮಾರ್ಗವನ್ನು ಕಂಡುಕೊಳ್ಳೋಣ' ಎನ್ನುವುದು ಈ ವಿದ್ವಾಂಸರೆಲ್ಲರ ಉದ್ದೇಶವಾಗಿತ್ತು. ಜಾಗತಿಕ ಇತಿಹಾಸ, ಸಂಸ್ಕೃತಿಗಳ ಪರಿಚಯ ಹೊಸ ಹೊಸ ಜ್ಞಾನ-ವಿಜ್ಞಾನಗಳ ಪರಿಚಯ ಮಾಡಿಕೊಳ್ಳುವುದು, ವಿಮರ್ಶಾ ಪ್ರಜ್ಞೆಯನ್ನು ರೂಢಿಸಿಕೊಳ್ಳುವುದು- ಇವೆಲ್ಲದರ ಸಂಸ್ಕಾರಪಡೆದು ವಿಶಾಲ ಮನೋಭಾವವನ್ನು ಬೆಳೆಸಿಕೊಳ್ಳುವುದು ಇವರ ಮನೋಧರ್ಮವಾಗಿತ್ತು. ಆದರೆ ಹಳೆಯದೆಲ್ಲವನ್ನೂ ಕಡೆಗಣಿಸಬೇಕೆನ್ನುವ ಅಥವಾ ಹೊಸದನ್ನು ಕಣ್ಣುಮುಚ್ಚಿ ಸ್ವಾಗತಿಸಬೇಕು ಎನ್ನುವವರೂ ಆಗಿರಲಿಲ್ಲ. ಶ್ರೀಕಂಠಯ್ಯನವರೂ ಕೂಡ ಇಂಥ ಗುಂಪಿಗೆ ಸೇರಿದ್ದವರಾಗಿದ್ದರು. ಅವರ ಆಸಕ್ತಿಯಿದ್ದುದು ಭವಿಷ್ಯದಲ್ಲಿ, ಹೊಸಜೀವನವನ್ನು ರೂಪಿಸುವುದರಲ್ಲಿ. ಇತಿಹಾಸವನ್ನು ನಿರ್ಮಿಸುವವರು ಇತಿಹಾಸವನ್ನು ತಿಳಿದಿರಬೇಕು ಎನ್ನುವಂತೆ ಹೊಸ ಸೃಷ್ಠಿ ಹಳೆಯ ತಳಹದಿಯ ಆಧಾರದ ಮೇಲೆ ಸಿದ್ಧವಾಗಬೇಕು ಎಂದು ನಂಬಿದವರು. ಹಳೆಯದನ್ನು ಅರಗಿಸಿಕೊಂಡು, ಅಧ್ಯಯನ ಮಾಡಿ, ವಿಮರ್ಶಿಸಿ ಅದರಿಂದ ಪಡೆಯಬೇಕಾದುದನ್ನು ಪಡೆಯದಿದ್ದರೆ ಭವಿಷ್ಯವನ್ನು ಸಮರ್ಪಕವಾಗಿ ರೂಪಿಸಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿಯೆ ಶ್ರೀಯವರು ಸಂಸ್ಕೃತಕ್ಕೂ ಸ್ವಲ್ಪಗಮನವನ್ನು ನೀಡಿದರೂ ಅಗ್ರ ಸ್ಥಾನವನ್ನು ಕೊಟ್ಟದ್ದು ಕನ್ನಡಕ್ಕೆ, ಆಗಿನಕಾಲದ ಸಂಸ್ಕೃತ ಪ್ರೇಮಿಗಳು/ಪಂಡಿತರು ನಿರೀಕ್ಷಿಸಿದ ಗೌರವವನ್ನು ಕನ್ನಡಕ್ಕೆ ನೀಡುತ್ತಿರಲಿಲ್ಲ. ಕನ್ನಡವನ್ನು ಕಲಿಸಲು ಸಂಸ್ಕೃತ ಪಂಡಿತರನ್ನು ನೇಮಿಸಲಾಗುತ್ತಿತ್ತು.

ಕನ್ನಡವು ಪಾಮರರ, ಶೂದ್ರರ ಭಾಷೆ ಎನ್ನುವ ಭಾವನೆ ಅನೇಕರಲ್ಲಿ ಮನೆಮಾಡಿತ್ತು. ಕನ್ನಡ ಲಿಪಿಯನ್ನು ಬಲ್ಲ ಕೆಲವರು ತಮ್ಮ ಬಂಧುಗಳಿಗೆ ಪತ್ರ ಬರೆಯುವಾಗ ಕನ್ನಡ ಭಾಷೆಯಲ್ಲಿ ಬರೆದರೂ ದೇವನಾಗರಿ ಲಿಪಿಯನ್ನು ಬಳಸುತ್ತಿದ್ದರು. ಮನೆಗಳಲ್ಲಿ ಪವಿತ್ರವಾದ ಕೆಲಸವನ್ನು ಮಾಡುವಾಗ ಯಜಮಾನರಾದವರು ಕನ್ನಡಕ್ಕೆ ಬದಲಾಗಿ ಸಂಸ್ಕೃತದಲ್ಲಿ ಅಥವಾ ಮಾತೃ ಭಾಷೆಯಲ್ಲಿ ಮಾತನಾಡುವ ಪದ್ಧತಿ ಇತ್ತು. ಇದನ್ನು ತಿಳಿದಿದ್ದ ಶ್ರೀಕಂಠಯ್ಯನವರು ಕೆಲವು ವೇಳೆ ಸಂಸ್ಕೃತವನ್ನು ಕುರಿತು ಲಘುವಾಗಿ ಮಾತನ್ನಾಡಿರುವುದು ಮೇಲೆ ಹೇಳಿದ ಹಿನ್ನೆಲೆಯಲ್ಲಿ. ಇದರಿಂದ ಅವರ ಸಂಸ್ಕೃತ ಪ್ರೇಮ ಕಡಿಮೆ ಎನ್ನುವ ಬದಲು ಕನ್ನಡಿಗನಿಗೆ ಅಗತ್ಯವಾಗಿ ಇರಬೇಕಾದ ಕನ್ನಡ ಪ್ರೇಮವೆಂದು ತಿಳಿಯುವುದು ಉತ್ತಮ. ೧೯೧೧ರಲ್ಲಿ ಶ್ರೀಯವರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ 'ಕನ್ನಡ ಮಾತು ತಲೆಯೆತ್ತುವ ಬಗೆ' ಎನ್ನುವ ವಿಷಯವಾಗಿ ಮಾಡಿದ ಭಾಷಣದಲ್ಲಿ ಈ ಭಾಷಾಸಮಸ್ಯೆಯನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿದ್ದಾರೆ. ಭಾಷಣದ ಶೀರ್ಷಿಕೆಯೇ ಅರ್ಥಪೂರ್ಣವಾದುದು. ಕನ್ನಡ ಭಾಷೆ ಆಗ ತಲೆಯೆತ್ತುವುದು ಕಷ್ಟದ ಕೆಲಸವಾಗಿತ್ತು. ತನ್ನ ಮನೆಯಲ್ಲಿಯೇ ಅದಕ್ಕೆ ದೊರೆತ ಸ್ಥಾನ ಬಡಬಂಧುವಿನ ಸ್ಥಾನ. ಒಂದುಕಡೆ ಸಂಸ್ಕೃತ, ಮತ್ತೊಂದು ಕಡೆ ಇಂಗ್ಲಿಷ್-ಇವೆರಡರ ಅಬ್ಬರ ಆಡಂಬರಗಳಲ್ಲಿ ಕನ್ನಡ ಯಾರಿಗೂ ಕೇಳುತ್ತಿರಲಿಲ್ಲ. ಸಂಸ್ಕೃತ ದೇವಭಾಷೆ, ನಮ್ಮ ಧರ್ಮಗ್ರಂಥಗಳೆಲ್ಲ ಇರುವುದು ಅದರಲ್ಲಿ, ನಮ್ಮ ಪುರಾತನ

ಸಂಸ್ಕೃತಿ ಇರುವುದು ಸಂಸ್ಕೃತದಲ್ಲಿ, ಆದ್ದರಿಂದ ಪುರಾತನ ಸಂಸ್ಕೃತಿಯನ್ನು ಕರಗತಮಾಡಿಕೊಳ್ಳಬೇಕಾದರೆ ಸಂಸ್ಕೃತವನ್ನು ತಿಳಿದರೆ ಮಾತ್ರ ಎಲ್ಲವನ್ನೂ ತಿಳಿದಂತೆ ಎಂದು ಸಂಪ್ರದಾಯಸ್ಥರ ನಂಬಿಕೆಯಾಗಿತ್ತು.

ಶ್ರೀಯವರು ಅಪಾರ ವಿದ್ವತ್ತಿನಿಂದ ಕೂಡಿದ್ದರೂ, ಅವರದು ಒಣ ಪಾಂಡಿತ್ಯವಾಗಿರಲಿಲ್ಲ. ಸಾಹಿತ್ಯದ ಆಸ್ವಾದನೆಗೆ ನೆರವಾಗುವ ಪಾಂಡಿತ್ಯ, ಬೆಳಕಿಗೆ ಪರಿಮಳ ಸೇರಿದಂತೆ. ಅವರದು ಒಳ್ಳೆಯ ಕಂಠ. ಓದುವ ರೀತಿ ಗಂಭೀರ, ಮತ್ತೆ ಮತ್ತೆ ಕೇಳಬೇಕು ಎನ್ನುವಷ್ಟು ಮಧುರ, ಗಂಭೀರ, ಭಾವಪೂರ್ಣ ಶ್ರೀಯವರ ಮಾತುಗಾರಿಕೆಯನ್ನು ಕೇಳಿದ್ದ ಪ್ರೊ.ಮ್ಯಾಕಿಂಟಾಷ್ ಎನ್ನುವ ವಿದ್ವಾಂಸರು ಈ ರೀತಿ ಹೇಳಿದ್ದಾರೆ. 'ನಾನು ಪೂರ್ವಜನ್ಮಗಳನ್ನು ನಂಬುವುದಾದರೆ, ಪ್ರೊ. ಶ್ರೀಕಂಠಯ್ಯನವರು ಹಿಂದಿನ ಜನ್ಮದಲ್ಲಿ ಆಕ್ಸಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಆಂಗ್ಲ ಸಾಹಿತ್ಯದ ಪ್ರೊಫೆಸರ್ ಆಗಿರಬೇಕು. ಇನ್ನೊಬ್ಬ ಆಂಗ್ಲ ಪ್ರಾಧ್ಯಾಪಕರು `ಶ್ರೀಕಂಠಯ್ಯನವರು ಇಂಗ್ಲೆಂಡಿಗೆ ಹೋದರೆ, ಅಲ್ಲಿಂದ ವಾಪಸ್ಸು ಬರುವುದು ಆಸಾಧ್ಯವಾಗುತ್ತದೆ. ಆಕ್ಸಫರ್ಡ್ ವಿಶ್ವವಿದ್ಯಾಲಯ ಅವರನ್ನು ಬಿಟ್ಟುಕೊಡುವುದಿಲ್ಲ' ಎಂದು ಹೇಳಿದ್ದಾರೆ. ಅಂದರೆ ಶ್ರೀಯವರ ಪಾಂಡಿತ್ಯ ಮೇರು ಮಟ್ಟದ್ದಾಗಿತ್ತು ಎನ್ನುವುದನ್ನು ಇದರಿಂದ ಅರ್ಥಮಾಡಿಕೊಳ್ಳಬಹುದು.

ಬಿ.ಎಂ.ಶ್ರೀಯವರ ಶಿಷ್ಯವರ್ಗ ಅಪಾರ. ಇವರಿಂದ ಪಾಠಕಲಿತ ಅನೇಕ ಶಿಷ್ಯರು ಮುಂದೆ ಅಪೂರ್ವ ಸಾಧನೆಮಾಡಿ ಕೀರ್ತಿವಂತರಾಗಿದ್ದಾರೆ. ಅವರ ಶಿಷ್ಯ ಸಮೂಹದಲ್ಲಿ ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರೀ, ಕುವೆಂಪು, ಕ.ವೆಂ. ರಾಘವಾಚಾರ್, ಎನ್. ಅನಂತರಂಗಾಚಾರ್, ಕೆ. ವೆಂಕಟರಾಮಪ್ಪ, ಡಿ.ಕೆ. ಭೀಮಸೇನರಾವ್, ಜಿ. ವೆಂಕಟಸುಬ್ಬಯ್ಯ, ಎಚ್.ಎಂ.ಶಂಕರನಾರಾಯಣರಾವ್, ಎಸ್.ವಿ. ಪರಮೇಶ್ವರಭಟ್ಟ, ಎಲ್.ಎಸ್. ಶೇಷಗಿರಿರಾವ್, ಎಂ.ವಿ. ಸೀತಾರಾಮಯ್ಯ, ಎಚ್.ಎಸ್. ದೊರೆಸ್ವಾಮಿ ಮೊದಲಾದವರು ಸೇರಿದ್ದರು.

ಶ್ರೀಯವರ ವೃತ್ತಿ ಇಂಗ್ಲಿಷ್ ಸಾಹಿತ್ಯವನ್ನು ಬೋಧಿಸುವುದು. ಇಂಗ್ಲಿಷ್ ಸಾಹಿತ್ಯದ ಸೊಬಗನ್ನು ಚೆನ್ನಾಗಿ ಅನುಭವಿಸಬೇಕಾದರೆ ಯೂರೋಪಿಯನ್ ಸಾಹಿತ್ಯವನ್ನು, ಪ್ರಮುಖವಾಗಿ ಪುರಾತನ ಗ್ರೀಕ್ ಸಾಹಿತ್ಯವನ್ನು ಪರಿಚಯ ಮಾಡಿಕೊಳ್ಳಬೇಕು. ಅದರ ಅಧ್ಯಯನವೆಂದರೆ ಪುರಾತನ ಋಷಿಗಳ ತಪಸ್ಸಿನಂತೆ. ವರ್ಡ್ಸ್‌ವರ್ತ್ ಕವಿಯ ದಿ ಸ್ರೈಡ್ (The Prelude) ಮತ್ತು ಎಕ್ಸ್‌ಕರ್ಷನ್ (Excursion) ಎನ್ನುವ ದೀರ್ಘ ಕವನಗಳನ್ನು ಅಧ್ಯಯನ ಮಾಡುವುದಕ್ಕಾಗಿ ಶ್ರೀರಂಗಪಟ್ಟಣದಿಂದ ನಾಲ್ಕು ಮೈಲಿ ನಡೆದು ತಮ್ಮ ಅಧ್ಯಯನಕ್ಕೆ ಯಾವ ಭಂಗವೂ ಬಾರದಿರಲೆಂದು ಹಿರೋಡೆ ಬೆಟ್ಟದ ಒಂದು ಬಂಡೆಯ ಮೇಲೆ ಕುಳಿತುಕೊಳ್ಳುತ್ತಿದ್ದರಂತೆ. ಈ ರೀತಿ ಅಧ್ಯಯನ ಮಾಡಿ ಒಂದು ತಿಂಗಳಲ್ಲಿ ಆ ಎರಡೂ ಕವಿತೆಗಳನ್ನು ಮುಗಿಸಿದರೆಂದು ಡಿವಿಜಿ ಅವರು ತಮ್ಮ 'ಕಲೋಪಾಸಕರು' ಎನ್ನುವ ಕೃತಿಯಲ್ಲಿ ತಿಳಿಸಿದ್ದಾರೆ.

ಒಂದು ಬಾರಿ ಡಿವಿಜಿ(ಡಿ.ವಿ.ಗುಂಡಪ್ಪನವರು)ಯವರು ಶ್ರೀಕಂಠಯ್ಯನವರನ್ನು ನೋಡಲು ಅವರ ಮನೆಗೆ ಹೋಗಿ ಮನೆಯ ಬಾಗಿಲನ್ನು ತಟ್ಟಿದಾಗ ಉತ್ತರ ಬರಲಿಲ್ಲ. ಒಳಗೆ ಯಾರೋ ಏನನ್ನೋ ಹಾಡಿಕೊಳ್ಳುತ್ತಿರುವುದು ಕೇಳಿಸುತ್ತಿತ್ತು. ಉತ್ತರ ಬಾರದಿರುವುದನ್ನು ಕಂಡು ಮತ್ತೆರಡು ಬಾರಿ ಗಟ್ಟಿಯಾಗಿ ತಟ್ಟಿದ ಮೇಲೆ ಶ್ರೀಕಂಠಯ್ಯನವರೆ ಬಾಗಿಲು ತೆಗೆದರಂತೆ. ಆಗ ಶ್ರೀಕಂಠಯ್ಯನವರು ಡಾಂಟೆಯ 'ಡಿವೈನ್ ಕಾಮಿಡಿ'ಯನ್ನು ಬಾಯಿಗೆ ಬರುವಂತೆ ಗಟ್ಟಿಮಾಡಲು ಒಂದೊಂದು ಸಾಲನ್ನೂ ಹೇಳಿಕೊಳ್ಳುತ್ತಾ ರೂಮಿನಲ್ಲಿ ಶತಪಥಿಸುತ್ತಿದ್ದರಂತೆ. ಶ್ರೀಕಂಠಯ್ಯನವರು ಪುರಾತನ ಗ್ರೀಕ್ ಭಾಷೆಯನ್ನು ಕಲಿತು ಈಸ್ಕಲಸ್ ಮತ್ತು ಸೋಫೋಕ್ಲೀಸನ ನಾಟಕವನ್ನು ಮೂಲದಲ್ಲಿಯೆ ಓದುವ ಪರಿಣತಿಯನ್ನು ಪಡೆದಿದ್ದರು. ಶ್ರೀಯವರು ಪಾಶ್ಚಾತ್ಯ ಸಾಹಿತ್ಯವನ್ನು ಸಾಹಿತ್ಯ ಪ್ರೀತಿಯಿಂದ ಓದಿದುದು ಎಷ್ಟು ಸತ್ಯವೋ, ಆ ಓದು ಕನ್ನಡ ಸಾಹಿತ್ಯದಲ್ಲಿ ತಾವು ಮಾಡಬೇಕಾದ ಕೆಲಸಕ್ಕೆ ಪೂರ್ವಸಿದ್ಧತೆ ಎನ್ನುವ ಪರಿಜ್ಞಾನದಿಂದ ಓದುತ್ತಿದ್ದರು ಎನ್ನುವುದು ಅಷ್ಟೇ ನಿಜ. ಅವರು ತಮಿಳು, ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿದ್ದು ಇದೇ ಕಾರಣದಿಂದ, ಶ್ರೀಯವರ ಸಾಹಿತ್ಯ ಸೇವೆಯನ್ನು ನೆನೆಯುತ್ತಾ ಎ.ಎನ್.ಮೂರ್ತಿರಾಯರು ತೀ.ನಂ. ಶ್ರೀಕಂಠಯ್ಯನವರೊಂದಿಗೆ 'ಕನ್ನಡ ಸಾಹಿತ್ಯ ವಾಹಿನಿ ಮರುಭೂಮಿಯ ಕಡೆಗೆ ಸಾಗಿ ಅಲ್ಲಿ ಇಂಗಿಹೋಗುತ್ತಿದೆಯೇನೋ ಎನ್ನುವಂತಿತ್ತು. ಶ್ರೀಕಂಠಯ್ಯನವರು ಅದನ್ನು ಉಳಿಸಿದರು' ಎಂದಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸುತ್ತಾ ತೀ.ನಂ. ಶ್ರೀಕಂಠಯ್ಯನವರು 'ಕನ್ನಡವೂ ಅವರನ್ನು ಉಳಿಸಿತು. ಅವರು ಆತ್ಮಾನುಕಂಪದ ಮರುಭೂಮಿಯ ಕಡೆಗೆ ತಿರುಗಿ ಅವರ ಜೀವ ವಿಫಲವಾಗುವ ಸಾಧ್ಯತೆಯಿತ್ತು' ಎಂದಿದ್ದಾರೆ. ಶ್ರೀಕಂಠಯ್ಯನವರಿಂದ ಕನ್ನಡ ಉಳಿಯಿತು. ಕನ್ನಡದಿಂದ ಶ್ರೀಕಂಠಯ್ಯನವರು ಬೆಳೆದರು.

ಶ್ರೀಕಂಠಯ್ಯನವರು ಮೊದಲು ಕೆಲಸಕ್ಕೆ ಸೇರಿದ್ದು ಇಂಗ್ಲಿಷ್ ಅಧ್ಯಾಪಕರಾಗಿ, ಇದರ ಜೊತೆಗೆ ಕನ್ನಡವನ್ನೂ ಬೋಧಿಸುತ್ತಿದ್ದರು. ಆಗಿನ ಕಾಲದಲ್ಲಿ ಕನ್ನಡ ಅಧ್ಯಾಪಕರಿಗೆ ಹೆಚ್ಚು ಮನ್ನಣೆ ಇರಲಿಲ್ಲ. ಸಮಾಜದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಅಂತಸ್ತು ಕಡಿಮೆ. ಆಗಿನ ಕಾಲದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಿಗೆ ಸಲ್ಲುತ್ತಿದ್ದ ಮನ್ನಣೆ ಕನ್ನಡದವರಿಗೆ ಸಲ್ಲುತ್ತಿರಲಿಲ್ಲ. ಆಗ ಕನ್ನಡ ಇಲಾಖೆಯಲ್ಲಿ ಪ್ರಾಧ್ಯಾಪಕರೆ ಇರಲಿಲ್ಲ! ಆಗ ಇಂಗ್ಲಿಷ್ ಆಡಳಿತ ಭಾಷೆಯಾಗಿತ್ತು. ಇದನ್ನು ಅರಿತ ಶ್ರೀಕಂಠಯ್ಯನವರು 'ನಾನು ಇಂಗ್ಲಿಷ್ ಪ್ರಾಧ್ಯಾಪಕನಾದರೆ ಹೆಚ್ಚು ಪ್ರಯೋಜನವಾದೀತು' ಎಂದು. ಉತ್ತಮ ಅಧ್ಯಾಪಕರಾದ ಇವರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ (೧೯೨೬) ಪದವಿಯನ್ನು ಒಪ್ಪಿಕೊಂಡದ್ದು ಇದೇ ಕಾರಣದಿಂದ ಅವರು ರಿಜಿಸ್ಟ್ರಾರ್ ಆಗಿದ್ದ ಸಮಯದಲ್ಲಿ ಅವರ ಪ್ರಯತ್ನದಿಂದ ಕನ್ನಡ ಎಂ.ಎ. ತರಗತಿಗಳನ್ನು ತೆರೆಯಲಾಯಿತು. ಕನ್ನಡಕ್ಕೆ ಒಬ್ಬ ಪ್ರಾಧ್ಯಾಪಕರನ್ನು ನೇಮಿಸುವಂತಾಯಿತು. ಅದುವರೆಗೆ ಕನ್ನಡಕ್ಕೆ ಪ್ರಾಧ್ಯಾಪಕರೆ ಇರಲಿಲ್ಲ. ಶ್ರೀಕಂಠಯ್ಯನವರು ತಮ್ಮ ರಿಜಿಸ್ಟ್ರಾರ್ ಹುದ್ದೆಯ ಜೊತೆಗೆ ಕೆಲವು ಕಾಲ ಕನ್ನಡದ ಗೌರವ ಪ್ರಾಧ್ಯಾಪಕರಾಗಿ ಕೆಲಸ ಮಾಡಿದರು. 'ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥ ಮಾಲೆ' ಆರಂಭವಾದುದು ಶ್ರೀಯವರ ಪ್ರಯತ್ನದಿಂದ. ಈ ಗ್ರಂಥಮಾಲೆಯಲ್ಲಿ ಸಾಹಿತ್ಯ ವಿಮರ್ಶೆಯೂ ಸೇರಿದಂತೆ ಸಮಾಜ ಶಾಸ್ತ್ರ, ತತ್ವಶಾಸ್ತ್ರ, ಅರ್ಥಶಾಸ್ತ್ರ ಇತ್ಯಾದಿ ವಿಷಯಗಳನ್ನು ಕುರಿತು ಅನೇಕ ಮೌಲಿಕ ಕೃತಿಗಳು ಪ್ರಕಟವಾಗಿವೆ.

ಶ್ರೀಕಂಠಯ್ಯನವರು ತಮ್ಮ ವೃತ್ತಿಯಲ್ಲಿ ವೇಗವಾಗಿ ಮೇಲೆ ಮೇಲೆ ಏರಿ ಕೀರ್ತಿ ಗಳಿಸಿದರು. ಇವರ ಸಹೋದ್ಯೋಗಿಗಳಾಗಿ ಟಿ.ಎಸ್. ವೆಂಕಣ್ಣಯ್ಯ, ಕೆ.ರಾಘವಾಚಾರ್, ಡಿ. ಶ್ರೀನಿವಾಸಾಚಾರ್, ಟಿ.ಎನ್. ಸುಬ್ಬರಾಯಶಾಸ್ತ್ರಿ, ಸಿ.ಆರ್. ನರಸಿಂಹಶಾಸ್ತ್ರಿ, ಆರ್. ಅನಂತಕೃಷ್ಣ ಶರ್ಮ ಮುಂತಾದವರು ಇದ್ದರು. ಶ್ರೀಯವರು ಬಹಳ ಬೇಗ ಜನಸಾಮಾನ್ಯರಿಂದ ಮೆಚ್ಚುಗೆ ಪಡೆದರು. ಅವರು ಅಧ್ಯಾಪಕರಾಗಿ ವಿದ್ಯಾರ್ಥಿಗಳಿಗೆ, ಸಾಹಿತಿಯಾಗಿ ಸಾಹಿತಿಗಳಿಗೆ, ನಾಡು ನುಡಿ ಭಕ್ತರಾಗಿ ಕನ್ನಡಿಗರಿಗೆ ಸ್ಫೂರ್ತಿ ನೀಡಿದರು. ಮೈಸೂರು ಮಹಾರಾಜರಿಂದ 'ರಾಜ ಸೇವಾಸಕ್ತ' ಎನ್ನುವ ಬಿರುದನ್ನು ೧೯೩೮ ರಲ್ಲಿ ಪಡೆದರು. ಬಿ.ಎಂ.ಶ್ರೀಯವರಿಗೆ ಇದ್ದ ರಾಜ ನಿಷ್ಠೆ, ಸಾರ್ವಭೌಮತ್ವ, ಹೊಗಳಿಕೆಯ ಮಾತುಗಳು ಅನೇಕ ವೇಳೆ ವಿವಾದಕ್ಕೆ ಅವಕಾಶ ನೀಡಿವೆ. ಮೈಸೂರು ಮಹಾರಾಜರಿಗಿದ್ದ ಜನಪ್ರಿಯತೆ, ಸಾಹಿತ್ಯ, ಸಂಗೀತ, ಸಂಸ್ಕೃತಿ ಕಲೆಗಳ ಪೋಷಿಸುವ ಗುಣವನ್ನು ಕಣ್ಣಾರೆ ನೋಡಿದ ಶ್ರೀಯವರು ಮೈಸೂರು ಮಹಾರಾಜರನ್ನು ಹೊಗಳುವುದರ ಮೂಲಕ ತಮ್ಮ ರಾಜ ಭಕ್ತಿಯನ್ನು ಮೆರೆದಿದ್ದಾರೆ.

## ಕನ್ನಡ ಸಾಹಿತ್ಯ ಪರಿಷತ್ತಿಗೆ ಉಪಾಧ್ಯಕ್ಷರಾಗಿ,

ಕನ್ನಡ ಸಾಹಿತ್ಯ ಪರಿಷತ್ತಿಗೆ ಉಪಾಧ್ಯಕ್ಷರಾಗಿ ಆಯ್ಕೆಯಾಗಿ ೧೯೩೮ ರಿಂದ ೧೯೪೨ ರವರೆಗೆ ಸೇವೆಸಲ್ಲಿಸಿದರು. ಪರಿಷತ್ತಿನ ಉಪಾಧ್ಯಕ್ಷರಾಗಿ ಆಯ್ಕೆಯಾದಮೇಲೆ ಶ್ರೀಯವರು ಸಂಪೂರ್ಣ ಕನ್ನಡ ನಾಡಿನ ಸ್ವತ್ತಾದರು. ಇದೇ ಸಮಯದಲ್ಲಿ ಅವರ ವ್ಯಕ್ತಿತ್ವದಲ್ಲಿಯೂ ಒಂದು ಬಹು ಮುಖ್ಯ ಬದಲಾವಣೆಯಾಯಿತು. ಆವರೆಗೆ ಅಂತರ್ಮುಖಿಯಾಗಿದ್ದ ಶ್ರೀಯವರು ಒಮ್ಮಿಂದೊಮ್ಮೆಲೆ ಬಹಿರ್ಮುಖಿಯಾದರು. ಕನ್ನಡವೇ ಉಸಿರೆಂಬಂತೆ ಆ ನಾಲ್ಕು ವರ್ಷಗಳನ್ನು ಅವರು ಕಳೆದರು. ಕನ್ನಡ ನಾಡಿನ ಮೂಲೆಮೂಲೆಯನ್ನು ಬೇಸರವಿಲ್ಲದೆ ಸುತ್ತಿ ಜನತೆಯ ಹೃದಯದಲ್ಲಿ ಕನ್ನಡದ ಅಭಿಮಾನವನ್ನು, ಪ್ರೀತಿಯನ್ನು ಉಕ್ಕಿಸಿದರು. ಅನೇಕ ರೀತಿಯ ಸಾಹಿತ್ಯ ಚಟುವಟಿಕೆಗಳನ್ನು ಆರಂಭಿಸಿದರು. ಪರಿಷತ್ತಿನ ಹೆಸರು ಎಲ್ಲ ಕಡೆ ಪಸರಿಸುವಂತೆ, ಕೇಳಿಬರುವಂತೆ ಮಾಡಿದರು. ಎಲ್ಲರ ಗಮನವನ್ನು ಸೆಳೆದರು, ಮನಸೂರೆಗೊಂಡರು. ಕನ್ನಡ ಬಾವುಟವನ್ನು ಎತ್ತಿಹಿಡಿದರು. ಕನ್ನಡಿಗರ ಕಣ್ಮಣಿಯೆನಿಸಿಕೊಂಡರು. ಆದರೆ ಮುಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಹುದ್ದೆ ಬರುಬರುತ್ತಾ ಮುಳ್ಳಿನ ಹಾಸಿಗೆಯಾಗಿ, ಸಣ್ಣ ಪುಟ್ಟ ವಿಷಯಗಳಿಗೂ ತೀವ್ರ ವಿರೋಧವನ್ನು ಶ್ರೀಯವರು ಎದುರಿಸಬೇಕಾಗಿ ಬಂದಿತು. ಇದರಿಂದ ಶ್ರೀಯವರು ಬೇಸರಪಟ್ಟುಕೊಂಡರು, ಬಹಳಷ್ಟು ನೊಂದರು.

ಶ್ರೀಯವರು ಉಪಾಧ್ಯಕ್ಷರಾದ ಸಮಯದಲ್ಲಿ ಅಚ್ಚುಕೂಟವಿರಲಿಲ್ಲ. ಇದನ್ನು ಅರಿತ ಶ್ರೀಯವರು ಪರಿಷತ್ತಿಗೆ ತನ್ನದೆ ಆದ ಅಚ್ಚುಕೂಟವಿರಬೇಕೆನ್ನುವ ಉದ್ದೇಶದಿಂದ ಅದನ್ನು ಸ್ಥಾಪಿಸಲು ಮೊದಲು ೧,೦೦೦ ರೂಪಾಯಿಗಳನ್ನು ಆನಂತರ ೫,೦೦೦ ರೂಪಾಯಿಗಳನ್ನು ದಾನ ಮಾಡಿದರು. ಇದು 'ಬಿ.ಎಂ.ಶ್ರೀಕಂಠಯ್ಯ ಅಚ್ಚುಕೂಟ' ಎನ್ನುವ ಹೆಸರಿನಲ್ಲಿ ಈಗಲೂ ಕೆಲಸಮಾಡುತ್ತಿದೆ. 'ಕನ್ನಡ ಬಾವುಟ' ಎನ್ನುವ ಕವನ ಸಂಕಲನವನ್ನು ಸಂಪಾದಿಸಿ ಪ್ರಕಟಿಸಿದರು. ಪರಿಷತ್ತಿನ ಪರವಾಗಿ ಪ್ರವಾಸ ಮಾಡಿ ಸದಸ್ಯರನ್ನು ಸೇರಿಸಿದರು. ಉತ್ಸವಗಳನ್ನು ಸಮ್ಮೇಳನಗಳನ್ನು ನಡೆಸಿದರು. "ಕನ್ನಡ ನುಡಿ' ಎನ್ನುವ ಕನ್ನಡ ಸಾಹಿತ್ಯ ಪರಿಷತ್ತಿನ ಮಾಸ ಪತ್ರಿಕೆ

ಪ್ರಾರಂಭವಾದುದು ಇದೇ ಅವಧಿಯಲ್ಲಿ, ಕನ್ನಡ ಸಾಹಿತ್ಯ ಪರೀಕ್ಷೆಗಳನ್ನು ಏರ್ಪಾಟು ಮಾಡಿದರು. ತಮ್ಮ ಅಗಾಧ ಪಾಂಡಿತ್ಯ ಹಾಗೂ ವೈಯಕ್ತಿಕ ವರ್ಚಸ್ಸಿನಿಂದ, ತಿರುಪತಿಯಲ್ಲಿ ನಡೆದ ಪ್ರಾಚ್ಯ ವಿದ್ಯಾ ಸಮ್ಮೇಳನದ ಕನ್ನಡ ವಿಭಾಗದ ಅಧ್ಯಕ್ಷರಾಗಿ(೧೯೪೦) ಸೇವೆ ಸಲ್ಲಿಸಿದರು. ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿದ್ದ ಪ್ರಸಿದ್ಧ ಸಾಹಿತ್ಯ ಪತ್ರಿಕೆಯಾದ 'ಪ್ರಬುದ್ಧ ಕರ್ನಾಟಕ'ದ ಸಂಪಾದಕ ಮಂಡಲಿಯ ಸದಸ್ಯರಾಗಿ; ಮೈಸೂರು ಮಹಾರಾಜ ಕಾಲೇಜಿನ ಕರ್ನಾಟಕ ಸಂಘ ಮತ್ತು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಅಧ್ಯಕ್ಷರಾಗಿ ವಿದ್ಯಾರ್ಥಿ ಸಮೂಹದಲ್ಲಿ, ಅಧ್ಯಾಪಕ ವೃಂದದಲ್ಲಿ ಕನ್ನಡ ಜಾಗೃತಿಯನ್ನುಂಟು ಮಾಡಿದರು. ಶಿಕ್ಷಕರು, ಅಭಿಮಾನಿಗಳು 'ಬಿ.ಎಂ.ಶ್ರೀ. ಅವರಿಗೆ ೧೯೪೦ ರಲ್ಲಿ 'ಸಂಭಾವನೆ' ಗೌರವಗ್ರಂಥವನ್ನು ಸಮರ್ಪಿಸಿದರು. ೧೯೪೨ ರಲ್ಲಿ ತಮ್ಮ ೩೨ ವರ್ಷಗಳ ಬಿಡುವಿಲ್ಲದ ದುಡುಮೆಯ ನಂತರ ಸರ್ಕಾರಿ ಸೇವೆಯಿಂದ ನಿವೃತ್ತರಾದರು.

## ಧಾರವಾಡದ ಕೆ.ಇ. ಬೋರ್ಡ್ ಕಾಲೇಜಿನ ಪ್ರಿನ್ಸಿಪಾಲರಾಗಿ,

ಇವರ ನಿವೃತ್ತಿಯ ನಂತರ ಸರ್ಕಾರ ಇವರನ್ನು ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು. ಆ ಹುದ್ದೆಯಿಂದ ಇವರು ಬಿಡುಗಡೆಯನ್ನು ಪಡೆದು ೧೯೪೪ ರಲ್ಲಿ ಧಾರವಾಡದ ಕೆ.ಇ. ಬೋರ್ಡ್ ಸಂಸ್ಥೆಯ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ಸ್ನೇಹಿತರ ವಿರೋಧದ ನಡುವೆಯೂ ಕೆಲಸಕ್ಕೆ ಹಾಜರಾಗುತ್ತಾರೆ. ಆರೋಗ್ಯ ಉತ್ತಮವಾಗಿಲ್ಲದಿದ್ದರೂ ಧಾರವಾಡದ ಆಹ್ವಾನವನ್ನು ಒಪ್ಪಿ ಸೇವೆಗೆ ಹಾಜರಾದರು. ೧೯೪೬ರ ಜನವರಿ ೫ ರಂದು ಅವರ ೬೨ ನೇ ವಯಸ್ಸಿನಲ್ಲಿ ಧಾರವಾಡದಲ್ಲಿ ನಿಧನರಾದರು. ಧಾರವಾಡದ ಕಾಲೇಜಿನಲ್ಲಿ ಎರಡು ವರ್ಷಗಳ ಕಾಲ ಪ್ರಿನ್ಸಿಪಾಲರಾಗಿದ್ದಾಗ ಕನ್ನಡ ಸಾಹಿತ್ಯದ ಆಚಾರ್ಯರೆನಿಸಿದ ಶ್ರೀಕಂಠಯ್ಯನವರು ಅಂಥ ಅಸಾಧಾರಣವಾದುದೇನನ್ನು ಸಾಧಿಸಲಾಗಲಿಲ್ಲ. ಅವರು ಅಲ್ಲಿ ಪಡೆದುದಾದರೂ ಕಡಿಮೆಯೇ. ಆತ್ಮೀಯರ ಅನಾದರ, ಕಾಲೇಜಿನ ವ್ಯವಸ್ಥಾಪಕ ಮಂಡಳಿಯ ಅವಜ್ಞೆ: ಸಾಹಿತಿಗಳ ಒಂದು ರೀತಿಯ ನಿರ್ಲಕ್ಷ್ಯಮನೋಭಾವ ಮುಂತಾದವುಗಳ ಕಾರಣವಾಗಿ ಶ್ರೀಯವರು ಸೋಲನುಭವಿಸಬೇಕಾಯಿತು. ಈ ಸಂದರ್ಭದಲ್ಲಿ ಅವರು ಮೌನಕ್ಕೆ ಶರಣಾದರು. ಆದರೂ ಧಾರವಾಡದಲ್ಲಿ ಅವರ ಮನಸ್ಸಿನಲ್ಲಿ ನೆಲೆಸಿರಬಹುದಾದ ನಿರಾಸೆಯನ್ನು ತೆಗೆಯಲು ಬಹಳವಾಗಿ ಪ್ರಯತ್ನ ಪಟ್ಟರು. ಅದೇ ತಾನೇ ಹೊಸದಾಗಿ ಧಾರವಾಡದಲ್ಲಿ ನೆಲೆಸಲು ಬಂದ ಶ್ರೀಯವರನ್ನು ಉತ್ತರ ಕರ್ನಾಟಕಕ್ಕೊಂದು ವಿಶ್ವವಿದ್ಯಾನಿಲಯಬೇಕೆನ್ನುವ ಬೇಡಿಕೆಯನ್ನು ಮಂಡಿಸಲು ಸ್ಥಾಪಿತವಾದ ಕರ್ನಾಟಕ ವಿದ್ಯಾಪೀಠ ಸಮಿತಿಯ ಮುಖ್ಯಸ್ಥರನ್ನಾಗಿ ಮಾಡಿತು. ಅವರ ಜೊತೆಗೆ ಅನೇಕ ಪ್ರಮುಖರು ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದರು.

ಶ್ರೀಕಂಠಯ್ಯನವರು ಮೈಸೂರ ಅರಸರ ಮೇಲೆ ವಿಶೇಷ ಅಭಿಮಾನವನ್ನ, ಪ್ರೀತಿಯನ್ನು ಹೊಂದಿದ್ದ ವ್ಯಕ್ತಿಯೆನ್ನುವುದು ಮೊದಲಿಂದಲು ಎಲ್ಲರಿಗೂ ಗೊತ್ತಿರುವ ಸಂಗತಿ. ಇದನ್ನು ಅನೇಕ ಸಾಹಿತಿಗಳು ಪ್ರಶ್ನಿಸಿದ ಸಂದರ್ಭಗಳೂ ಉಂಟು. ಒಂದು ಸಲ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನಿತರಾಗಿದ್ದರು. ವಿದ್ಯಾವರ್ಧಕ ಸಂಘ ಹಳೆಯ ಸಾಹಿತ್ಯಕ ಹಾಗೂ

ಸಾಂಸ್ಕೃತಿಕ ಸಂಘ, ಶ್ರೀಯವರಿಗೆ ಈ ಸಂಘದ ಮೇಲೆ ವಿಶೇಷ ಅಭಿಮಾನ, ಶ್ರೀಯವರು ಧಾರವಾಡಕ್ಕೆ ಪ್ರಿನ್ಸಿಪಾಲರಾಗಿ ಬಂದ ಮೇಲೆ ಧಾರವಾಡದಲ್ಲಿ ಮೊದಲ ಕಾರ್ಯಕ್ರಮ, ಸಭಾಂಗಣ ಕಿಕ್ಕಿರಿದು ತುಂಬಿಹೋಗಿತ್ತು. ಶ್ರೀಯವರನ್ನು ಸಭಿಕರಿಗೆ ಪರಿಚಯಿಸಿದ ನಂತರ ಶ್ರೀಯವರು ಎದ್ದು ನಿಂತರು. ಪ್ರಚಂಡ ಕರತಾಡನ, ಪುರಸ್ಕಾರ. ಗ್ರೀಕ್ ಮೂರ್ತಿಯಂತೆ ನಿಂತ ಶ್ರೀಯವರಿಗೆ ತುಂಬಾ ಅಭಿಮಾನವೆನಿಸಿತು. ಅವರು ಪ್ರಾಸ್ತಾವಿಕ ಮಾತನಾಡಿ, 'ನನಗೆ ಈವರೆಗೆ ಹೊರಗೆ ಬಂದು ನಿಮ್ಮನೆಲ್ಲ ಸಂದರ್ಶಿಸುವ ಅನುಕೂಲವಿರಲಿಲ್ಲ. ಕನ್ನಡ ಸಾಹಿತ್ಯದ ಸ್ವತಂತ್ರ ಒಲವುಗಳ ಬಗ್ಗೆ ಈಗ ನಿಮ್ಮ ಕೂಡ ಮಾತನಾಡುವ ಅವಕಾಶ ದೊರೆತಿದೆ......' ಎನ್ನುತ್ತಿದ್ದಂತೆ ಸಭಿಕರಲ್ಲಿ ಒಬ್ಬರು ಎದ್ದುನಿಂತು ಸಭಾ ಮರ್ಯಾದೆಗೆ ಭಂಗತರುವ ರೀತಿಯಲ್ಲಿ 'ಇದಕ್ಕೆಲ್ಲಾ ನೀವೆ ಕಾರಣ. ನೀವೇ ಬಂದಿಯಾಗಿ ನಾಲ್ಕು ಗೋಡೆಗಳ ನಡುವೆ ಕುಳಿತಿದ್ದೀರಿ. ಸ್ವಾತಂತ್ರದ ಬಗ್ಗೆ ನಿಮಗೆ ಮಾತನಾಡಲು ಅಧಿಕಾರವಿಲ್ಲ. ನೀವು ದಾಸರು, ಗುಲಾಮರು, ಮೈಸೂರರಸರ ಸೇವಕರು' ಎಂದು ಮೊದಲಾಗಿ ಕೂಗಿದರು. ಇಡೀ ಸಭಾಗೃಹ ತಲ್ಲಣಿಸಿತು. ಶ್ರೀಯವರೂ ಸಹ ಕ್ಷಣಕಾಲ ವಿಚಲಿತರಾದರು. ನಂತರ ಮಾತನಾಡಿದ ಶ್ರೀಯವರು ಹೇಳಿದರು, 'ದಾಸನೆ? ಹೌದು ನಾನು ದಾಸ. ನಾವೆಲ್ಲರೂ ದೇವರ ದಾಸರು, ಇದರಲ್ಲಿ ಅವಮಾನ ಪಡುವ ವಿಷಯ ಏನಿದೆ? ದೇವರ ದಾಸರಾದ ಈ ಕವಿಗಳ ಒಂದು ಸಾಹಿತ್ಯ ಪರಂಪರೆಯೇ ಕನ್ನಡದಲ್ಲಿ ಪ್ರಾರಂಭವಾಯಿತು. ಅವರು 'ದಾಸನ ಮಾಡಿಕೊ ಎನ್ನ ಸಾಸಿರ ನಾಮದ ವೆಂಕಟರಮಣ' ಎಂದು ಪ್ರಾರ್ಥಿಸಿಕೊಂಡರು. ಇನ್ನೂ ಹಲವರು ಹೀಗೆ ದೇವರ ದಾಸರಾಗಿ, ಅವನಿಗೆ ಶರಣಾಗಿ ಶರಣರೆನಿಸಿಕೊಂಡು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು. ಪ್ರಾತಃಸ್ಮರಣೀಯರು. ಇವರ ಬಗ್ಗೆ ನಾಚಿಗೆ ಪಡಬೇಕಾದುದು ಏನಿದೆ? ನನ್ನ ಬಗ್ಗೆ ನನಗೆ ನಾಚಿಕೆ ಇಲ್ಲ. ನನ್ನ ವಿಚಾರಗಳಿವೆ. ನಂಬುಗೆಗಳಿವೆ. ತತ್ವಗಳಿವೆ. ಅವು ನಿಮಗೆ ಸರಿ ಕಾಣಲಿಕ್ಕಿಲ್ಲ. ಆದರೆ ಅದನ್ನು ಇಟ್ಟುಕೊಳ್ಳುವ ಸ್ವಾತಂತ್ರ ನನಗಿದೆ.....' ಎನ್ನುವ ಧಾಟಿಯಲ್ಲಿ ಮಾತನಾಡಿದರು. ಭಾಷಣವನ್ನು ಅಡ್ಡಿಪಡಿಸಲು ಪ್ರಯತ್ನಿಸಿದವರು ಸುಮ್ಮನೆ ಕುಳಿತರು. ಸಭಿಕರಿಗೆ ಶ್ರೀಯವರ ಮಾತುಗಳು ಸಮಾಧಾನತಂದವು. ಆದರೆ ಶ್ರೀಯವರ ರಕ್ತದ ಒತ್ತಡ ಮಾತ್ರ ಹೆಚ್ಚಾಯಿತು.

ಶ್ರೀಯವರಿಗೆ ಕನ್ನಡ ನಾಡು ನುಡಿಯ ಬಗೆಗೆ ಮಾತಿಗೆ ಮೀರಿದ ಅಭಿಮಾನ. ಯಾರಾದರೂ ಇವುಗಳ ವಿರುದ್ಧ ಏನಾದರೂ ಹೇಳಿದರೆ ಕೆಂಡಾ ಮಂಡಲವಾಗುತ್ತಿದ್ದರು. ೧೯೪೫ ರ ಅಕ್ಟೋಬರ್ ತಿಂಗಳಲ್ಲಿ ಮೇಲೆ ತಿಳಿಸಿದ ಮಾದರಿಯ ಒಂದು ಘಟನೆ ನಡೆಯಿತು. ಅಖಿಲ ಭಾರತ ಮುಂದಾಳುಗಳಲ್ಲಿ ಒಬ್ಬರಾದ ಡಾ.ಪಟ್ಟಾಭಿ ಸೀತಾರಾಮಯ್ಯನವರು ಕಾಲೇಜಿಗೆ ಭೇಟಿ ನೀಡಿದರು. ಪ್ರಿನ್ಸಿಪಾಲರಾದ ಬಿ.ಎಂ.ಶ್ರೀಕಂಠಯ್ಯನವರು ಅವರನ್ನು ಪ್ರೀತಿಯಿಂದ ಸ್ವಾಗತಿಸಿದರು. ಕಾಲೇಜಿನಲ್ಲಿ ಡಾ.ಪಟ್ಟಾಭಿಯವರ ಭಾಷಣವನ್ನು ಏರ್ಪಡಿಸಲಾಗಿತ್ತು. ಅವರು ತಮ್ಮ ಭಾಷಣದಲ್ಲಿ ಭಾಷಾವಾರು ವಿಷಯವಾಗಿ ಏನೋ ಅಸಮಾಧಾನದ ಮಾತನಾಡಿದರು. ಆಂಧ್ರ ಮೊದಲಾಗಲಿ. ಉಳಿದ ಪ್ರಾಂತ್ಯಗಳ ಬಗ್ಗೆ ಆಮೇಲೆ ನೋಡೋಣ ಎನ್ನುವುದು ಅವರ ಅಭಿಪ್ರಾಯವಿದ್ದಂತೆ ಕಾಣುತ್ತದೆ. ಪಟ್ಟಾಭಿಯವರ ಮಾತುಗಳನ್ನ ಕೇಳುತ್ತಿದ್ದಂತೆಯೆ ಶ್ರೀಯವರ ಮುಖ ಕೆಂಪಾಯಿತು. ಪಟ್ಟಾಭಿಯವರ ಭಾಷಣ ಮುಗಿಯುತ್ತಿದ್ದಂತೆಯೆ ಶ್ರೀಯವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಪಟ್ಟಾಭಿಯವರ ಅಭಿಪ್ರಾಯವನ್ನು ಕಟುವಾಗಿ

ವಿರೋಧಿಸಿದರು. ಅವರ ಧ್ವನಿಯಲ್ಲಿ ಗುಡುಗಿತ್ತು. ರೋಷವಿತ್ತು. ಅಸಮಾಧಾನವಿತ್ತು. ಪಟ್ಟಾಭಿಯವರು ಮಧ್ಯದಲ್ಲಿ ಏನೋ ಸಮಾಧಾನಪಡಿಸುವ ರೀತಿಯಲ್ಲಿ ಮಾತನ್ನಾಡಲು ಹೋದರು. ಆಗ ಶ್ರೀಯವರು ಮತ್ತಷ್ಟೂ ಕೆರಳಿ 'A Seasond Teacher need not Learn Any thing FromaPoliticion' ಎಂದು ಆರ್ಭಟಿಸಿದರು. ಸಭೆ ಮುಗಿಯಿತು, ಆದರೆ ಸಭೆಯ ಕಾವು ಮಾತ್ರ ಮುಗಿದಿರಲಿಲ್ಲ. ಅಲ್ಲಿಯೇ ಇದ್ದ ಡಾ. ಕಲ್ಲೂರ್ ಅವರು 'ಶ್ರೀಕಂಠಯ್ಯನವರೆ ಇಷ್ಟೇಕೆ ಕೆರಳಿದಿರಿ, ಆಮೇಲೆ ಅವರನ್ನು ಕೇಳಬಹುದಿತ್ತಲ್ಲಾ ' ಎಂದರು ಆದರೆ ಶ್ರೀಕಂಠಯ್ಯನವರು ಅದೇ ಗಡಸು ದನಿಯಲ್ಲಿ 'Dr. Kabbar I do not want any interference from these politicions in a cultural and vital subject like the linguistic provinces. If these provinces do not come up ನಮ್ಮ ಏಳಿಗೆಯೇ ಇಲ್ಲ' ಎಂದು ನುಡಿದರಂತೆ. ಶ್ರೀಯವರ ದೃಢ ನಿರ್ಧಾರ ಅಂತಹುದು. ಅವರ ಅಭಿಪ್ರಾಯದ ವಿರುದ್ಧ ದನಿಯೆತ್ತುವ ಯಾರನ್ನೂ, ಯಾವುದನ್ನೂ ಅವರು ಸಹಿಸುತ್ತಿರಲಿಲ್ಲ.

ಶ್ರೀಯವರು ಘನ ವಿದ್ವಾಂಸರು, ಪ್ರಸಿದ್ಧ ವಾಗ್ಮಿಗಳು, ಉತ್ತಮ ಶಿಕ್ಷಕರು, ಶಿಷ್ಯ ವತ್ಸಲರು, ಹಿರಿಯ ಸಾಹಿತಿಗಳು, ಭಾಷಾವಾರು ಪ್ರಾಂತ ರಚನೆಯಲ್ಲಿ ಮುಂಚೂಣಿಯಲ್ಲಿದ್ದವರು. ಉತ್ತರ ಕರ್ನಾಟಕ ಮತ್ತು ಮೈಸೂರು ನಡುವಿನ ಸಾಂಸ್ಕೃತಿಕ ಸೇತುವಾಗಿದ್ದವರು. ಏಕೀಕೃತ ಕರ್ನಾಟಕವನ್ನು ನೋಡುವ ಭಾಗ್ಯ ಅವರಿಗೆ ಲಭಿಸಲಿಲ್ಲ. ಸಾಹಿತ್ಯ ಕ್ಷೇತ್ರವಲ್ಲದೆ ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಅತ್ಯಂತ ಪ್ರತಿಭಾಶಾಲಿ ಎಂದು ಕರ್ನಾಟಕ ಅವರನ್ನು ಗುರುತಿಸಿ ಗೌರವಿಸುತ್ತದೆ.

## ವೃತ್ತಿಯಲ್ಲಿ ಪಡೆದ ನೆಮ್ಮದಿ, ವೈಯಕ್ತಿಕ ಬದುಕಿನಲ್ಲಿ ಇರಲಿಲ್ಲ.

ಶ್ರೀಕಂಠಯ್ಯನವರು ವೃತ್ತಿಯಲ್ಲಿ ಪಡೆದ ನೆಮ್ಮದಿಯನ್ನು, ಸಂತೋಷವನ್ನು ವೈಯಕ್ತಿಕ ಬದುಕಿನಲ್ಲಿ ಪಡೆಯಲಿಲ್ಲ! 'ನಂಜನಗೂಡಿನ ಶ್ರೀಕಂಠೇಶ್ವರ ನಂಜುಂಡನೆಂದೇ ನಾಡಿನಲ್ಲಿ ಪ್ರಸಿದ್ಧಿ, ಕನ್ನಡದ ಶ್ರೀಕಂಠಯ್ಯನವರೂ ನಂಜುಂಡನೇ ಆಗಿಬಿಟ್ಟರು. ಅವರ ಒಬ್ಬನೆ ಮಗ ಶ್ರೀ ತಮ್ಮಯ್ಯ ಬುದ್ಧಿವಂತ, ಆದರೆ ಚಿಕ್ಕವಯಸ್ಸಿನಲ್ಲಿಯೇ ಕಣ್ಣು ಕಳೆದುಕೊಂಡ. ಅರ್ಧಾಂಗಿಯ ಅಕಾಲಿಕ ಮರಣ. ಹೆಂಡತಿ ತೀರಿಹೋದಾಗ (೧೯೧೫) ಶ್ರೀಕಂಠಯ್ಯನವರಿಗೆ ಕೇವಲ ೩೩ ವರ್ಷ. ಮತ್ತೆ ಮದುವೆಯಾಗಲಿಲ್ಲ. ಶ್ರೀಯವರು ರಚಿಸಿರುವ "ಇಂಗ್ಲಿಷ್ ಗೀತೆಗಳು" ಮುನ್ನುಡಿಯ ಮೊದಲನೆಯ ಸಾಲು ಈ ರೀತಿ ಇದೆ "ಯಾರ ಸಂತೋಷಕ್ಕಾಗಿ ಮೊದಲು ನಾನು ಈ ಗೀತೆಗಳನ್ನು ಬರೆದೆನೋ, ಆ ಕಣ್ಣುಗಳು ಬೇಗ ಮುಚ್ಚಿಹೋಗಿ ಕೆಲವು ವರ್ಷಗಳು ಗ್ರಂಥ ನನ್ನಲ್ಲಿಯೇ ಉಳಿದುಕೊಂಡಿತು" ಬೇಗ ಮುಚ್ಚಿ ಹೋಗಿದ್ದ ಕಣ್ಣುಗಳು, ದೇವಮ್ಮನವರ (ಶ್ರೀಯವರ ಮಡದಿ) ಕಣ್ಣುಗಳು ಎನ್ನುವ ಅಭಿಪ್ರಾಯವೂ ಇದೆ. ಅಲ್ಲದೆ ಲ್ಯಾಂಬನ Old Familiar Face ಎನ್ನುವ ಪದ್ಯದಲ್ಲಿ ಬರುವ :

ಹರಸಿ ಪಡೆದನು ಹೆಣ್ಣನೊಂದನು-ಕೇಳಲರಿಯೆನು ಹಿತವನು;
ಉರಿದು ಹೋದಳು, ಬೂದಿಯಾದಳು ಹಿಡಿವುದನೆಲ್ಲವಳನು;

ಎಲ್ಲ ಎಲ್ಲಾ ಮಾಯವಾದುವು ಹಳೆಯ ಪಳಕೆಯ ಮುಖಗಳು,

ಈ ಮಾತುಗಳು ಶ್ರೀಯವರ ಪತ್ನಿಯನ್ನೆ ಕುರಿತ ಮಾತುಗಳು ಯಾಕಾಗಿರಬಾರದು? ಈ ಸಂಕಟಗಳನ್ನು ಶ್ರೀಕಂಠಯ್ಯನವರು ಧೈರ್ಯದಿಂದ ಎದುರಿಸಿದರು ಎನ್ನಬಹುದು. ಇದಾದ ಎರಡೇ ವರ್ಷದಲ್ಲಿ ವಿಧಿ ಅವರಿಗೆ ಮತ್ತೆರಡು ಪೆಟ್ಟನ್ನು ಕೊಟ್ಟಿತು. ಅವರ ಅಳಿಯಂದಿರಾದ ಎಸ್.ಆರ್. ಗುಂಡಪ್ಪನವರು ಯುವಕರು, ಮೇಧಾವಿಗಳೆಂದು ಹೆಸರು ಪಡೆದಿದ್ದರು ಹಠಾತ್ತಾಗಿ ವಿಷಮಸೀತ ಜ್ವರದಿಂದ ಕಾಲವಾದರು. ಚಿಕ್ಕವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡ ಮಗಳು, ಅಳಿಯನ ಉತ್ತರ ಕ್ರಿಯೆಯನ್ನು ಮುಗಿಸಿ ಮನೆಗೆ ಬರುವ ವೇಳೆಗೆ ಅವರ ತಾಯಿಯವರು ಅದೇ ಕಾಯಿಲೆಗೆ ತುತ್ತಾದರು. ಈ ಎಲ್ಲಾ ನೋವನ್ನು ಮರೆಯಲು ಅವರು ಕನ್ನಡ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೌಟುಂಬಿಕ ನೋವನ್ನು ಮರೆತರು. ಎಲ್ಲವೂ ದೇವರ ಇಚ್ಛೆಯೆಂದು ಬದುಕಿದರು. ಶ್ರೀಯವರು ತಮ್ಮ ವೈಯಕ್ತಿಕ ಸಂಕಟಗಳನ್ನು ಸಹಿಸಿಕೊಂಡು ಕನ್ನಡ ನಾಡು ನುಡಿ ಸಂಸ್ಕೃತಿಯ ಸರ್ವತೋಮುಖ ಏಳಿಗೆಗಾಗಿ ಮುಡಿಪಿಟ್ಟರು. ಶಕ್ತಿ ಮೀರಿ ಶ್ರಮಿಸಿದರು. ಅವರ ಬದುಕು ಬರಹಗಳು ಉದಾತ್ತವಾದುವುಗಳು, ಉಜ್ವಲವಾದುವುಗಳು, ಆದರ್ಶ ಪ್ರಾಯವಾದುವುಗಳು. ಬಿ.ಎಂ. ಶ್ರೀಯವರು ಯಾವುದೇ ಬಿರುದು ವಿಶೇಷಣಗಳಿಗೆ ಪಾತ್ರರಾಗುವಂತೆ ಬದುಕಿದರು. ರಾಷ್ಟ್ರಕವಿ ಕುವೆಂಪು ಅವರು ಶ್ರೀಯವರನ್ನು 'ಕನ್ನಡದ ಅಮೃತ ಪುತ್ರ' ಎಂದು ಅಂತಃಕರಣಪೂರ್ವಕವಾಗಿ ಕೊಂಡಾಡಿದ್ದಾರೆ.

ಅವರ ವಿದ್ಯಾರ್ಥಿಗಳಾದ ಶ್ರೀ ಎ.ಎನ್. ಮೂರ್ತಿರಾಯರು ತರಗತಿಯಲ್ಲಿ ನಡೆದ ಒಂದು ಪ್ರಸಂಗವನ್ನು ಸ್ಮರಿಸಿಕೊಂಡಿದ್ದಾರೆ. ಮ್ಯಾಥ್ಯ ಆರಾಲ್‌ನ ಒಂದು ಪ್ರಬಂಧದಲ್ಲಿ ಇಟಲಿಯ ಮಹಾಕವಿ ಡಾಂಟೆಯ 'In his will is our Peace' (ಭಗವಂತನ ಸಂಕಲ್ಪದಲ್ಲಿ ನಮ್ಮ ಮನಃಶಾಂತಿ) ಎಂಬ ಪಂಕ್ತಿಯನ್ನು ಉದ್ಧರಿಸುತ್ತಾನೆ. ತರಗತಿಯಲ್ಲಿ 'ಶ್ರೀ'ಯವರು ಪಾಠ ಮಾಡುವಾಗ ಈ ವಾಕ್ಯವನ್ನು ಓದಿ ಕಣ್ಮುಚ್ಚಿಕೊಂಡು ಪದೇಪದೇ ತಾವೇ ಹೇಳಿಕೊಂಡರಂತೆ.

ಶ್ರೀಕಂಠಯ್ಯನವರನ್ನು ನೋಡಿದರೆ ಗೌರವ ಮೂಡುವಂಥ ವ್ಯಕ್ತಿತ್ವವುಳ್ಳವರಾಗಿದ್ದರು. ಅಗಲವಾದ ಮುಖ. ಮೃದುವಾದ ಮಾತುಗಳು. ಸುಂದರವಾದ ಉಡುಪು, ವೇಷಭೂಷಣದಲ್ಲಿಯೂ 'ಶ್ರೀ' ಅವರು ವಿದೇಶಿಯರನ್ನು ಅನುಸರಿಸಿದಂತೆ ಕಾಣುತ್ತಿದ್ದರು. ಹಿಂದಿನ ಜನ್ಮದಲ್ಲಿ ಶ್ರೀಕಂಠಯ್ಯನವರು ಆಕ್ಸ್‌ಫರ್ಡ್‌ನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು ಎನ್ನುವಷ್ಟು ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದ ಪ್ರೌಢಿಮೆಯನ್ನು ಗಳಿಸಿದ್ದರು'.

ಶ್ರೀಕಂಠಯ್ಯನವರು ಸತ್ಯಪ್ರಿಯರು, ವಿದ್ಯಾಭಿಮಾನಿಗಳು, ಜಗತ್ತನ್ನು ಯಾವುದೋ ಒಂದು ದಿವ್ಯಶಕ್ತಿ ನಡೆಸಿಕೊಂಡು ಹೋಗುತ್ತದೆ ಎಂದು ಗಾಢವಾಗಿ ನಂಬಿದ್ದವರು. ಇದೇ ಭಾವನೆಗಳನ್ನು ಮಾನವನಿಗಾಗಿ ಮಾಡಿದ ಪ್ರಾರ್ಥನೆಯಲ್ಲಿ ಕಾಣಬಹುದು.

ಋತಮೊಂದೆ ಗೆಲ್ಲುವುದು, ಅನೃತವಲ್ತು
ಅಮೃತವೆನೆ ವಿದ್ಯೆಯೆ, ಅವಿದ್ಯೆಯಯ್ತು
ವಿಶ್ವಭಾರತಿ ಶರಣು: ಕಿರುತೀರ್ಥಮಲ್ತು

(ಸತ್ಯವೇ ಗೆಲ್ಲುತ್ತದೆ ಸುಳ್ಳಲ್ಲ. ವಿದ್ಯೆಯೇ ಅಮೃತ ಅವಿದ್ಯೆಯಲ್ಲ. ಕಾಪಾಡಲು ನಮಸ್ಕರಿಸಬೇಕಾದುದು ವಿಶ್ವಭಾರತಿಗೆ, ಸಣ್ಣ ಹೊಳೆಗಲ್ಲ.)

ಶ್ರೀ' ಅವರು ಬದುಕಿನಲ್ಲಿ ಬಹಳ ದೊಡ್ಡ ಆದರ್ಶಗಳನ್ನು ಉಳ್ಳವರಾಗಿದ್ದರು. ಅವರಿಗೆ ಕನ್ನಡದ ಬಗೆಗೆ ನೂರಾರು ಬಯಕೆಗಳು ಇದ್ದವು. ಅವುಗಳನ್ನು ಕುರಿತು ಅವರದೇ ಮಾತುಗಳಲ್ಲಿ ನೋಡೋಣ.

"ಡಿಳ್ಳಿ (ದಿಲ್ಲಿ)ನನಗೆ ಬಲು ದೂರ, ಕನ್ನಡ ನಾಡಿನ ಹಳ್ಳಿ ನನಗೆ ಸಾಕೆಂದು ನನ್ನ ವಿದ್ಯಾಭ್ಯಾಸ ಮುಗಿಯುವುದರೊಳಗೆ ನಿರ್ಧರಿಸಿಕೊಂಡಿದ್ದೆನು"

"ಕನ್ನಡ ನಾಡನ್ನು ಸುತ್ತುವುದು ನನಗೆ ಪವಿತ್ರಯಾತ್ರೆಯಾಗಿತ್ತು. ಮೈಸೂರಿನಲ್ಲಿ, ಹೊರಗೆ-ಮಡಿಕೇರಿ ಮೊದಲು ಬೆಳವಡಿ ಕಡೆಯಾಗಿ-ಯಾರ ಹೆಸರನ್ನು ಹೇಳಲಿ ಯಾರನ್ನು ಬಿಡಲಿ? ಜೈನರಲ್ಲಿ, ವೀರಶೈವರಲ್ಲಿ, ಮಾಧ್ವರಲ್ಲಿ, ಶ್ರೀವೈಷ್ಣವರಲ್ಲಿ, ಸ್ಮಾರ್ಥರಲ್ಲಿ, ಒಕ್ಕಲಿಗರಲ್ಲಿ, ಮುಸಲ್ಮಾನರಲ್ಲಿ, ಕ್ರೈಸ್ತರಲ್ಲಿ-ಗಂಡಸರು, ಹೆಂಗಸರು, ಶಾಲೆಯ ಮಕ್ಕಳು-ಎಲ್ಲರೂ ನನಗೆ ಒಳ್ಳೆಯ ಮಾತು ಆಡಿದ್ದೀರಿ. ನಲುಮೆಯ ನಡತೆಯನ್ನು ನಡೆದಿದ್ದೀರಿ, ಬೆನ್ನುತಟ್ಟಿ ಮುಂದೆ ಬಿಟ್ಟಿದ್ದೀರಿ-ಕನ್ನಡದ ಅಣುಗನೆಂದು. ಏನು ಚೆಲುವು ಕನ್ನಡ ನಾಡಿನದು, ಏನು ನಯ ಕನ್ನಡ ಮಕ್ಕಳದು! ನಿಮ್ಮ ಪ್ರೇಮವನ್ನೆಲ್ಲ ನನ್ನ ಹೃದಯದಲ್ಲಿ ತುಂಬಿಕೊಂಡಿದ್ದೇನೆ-ಹಿಡಿಯಲಾರದೆ ಅದು ಬಿರಿಯುತ್ತಿದೆ ದಾಳಿಂಬೆಯ ಹಣ್ಣಿನಂತೆ! ನಾನು ಇದರಲ್ಲಿ ಧನ್ಯ", ಶ್ರೀಯವರು ಕನ್ನಡ ನಾಡೆಲ್ಲವನ್ನು ಸುತ್ತಾಡಿ, ನಿರರ್ಗಳವಾಗಿ ಮಾತನಾಡಿ, ಕನ್ನಡ ನಾಡು ನುಡಿ ಸಂಸ್ಕೃತಿಯ ಪ್ರಚಾರ ಮಾಡಿದರು. ಕನ್ನಡಿಗರ ಎದೆಯಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿದರು. ಅವರು ತಮ್ಮನ್ನು 'ಕನ್ನಡದ ಕಾವಲು ನಾಯಿ' ಎಂದೂ, 'ಕನ್ನಡ ತಾಯಿಗಾಗಿ ಭಿಕ್ಷೆ ಬೇಡುವ ದಾಸಯ್ಯ ನಾನು' ಎಂದು ಕರೆದುಕೊಂಡಿದ್ದಾರೆ. 'ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ, ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ. ಕನ್ನಡ.' ಎಂದು ಘೋಷಿಸಿ ಕನ್ನಡ ಜನರನ್ನು ಬಡಿದೆಬ್ಬಿಸಿದರು.

"ಒಲುಮೆಗಿಂತ ಗೆಲುವಿಲ್ಲ, ಒಕ್ಕೂಟಕ್ಕಿಂತ ಬಲವಿಲ್ಲ. ಸಣ್ಣದನ್ನು ದೊಡ್ಡದು ಮಾಡದೆ, ದೊಡ್ಡದನ್ನು ಸಣ್ಣದು ಮಾಡದೆ, ತಾಳ್ಮೆ, ಶಿಸ್ತು, ಅಚ್ಚುಕಟ್ಟು, ಒಕ್ಕೂಟ, ಒಲುಮೆ ಇವು ಕಲೆತರೆ ಕನ್ನಡ ನಾಡಿನ ಮಣ್ಣು ಹೊನ್ನಾಗುವುದು, ಬಾಳು ಬಾನಾಗುವುದು".

"ಧರ್ಮದ ಹೊಸ ಹುಟ್ಟು, ಭಾರತದ ಬಿಡುಗಡೆ, ಕರ್ನಾಟಕದ ಒಕ್ಕೂಟ, ಕನ್ನಡದಲ್ಲಿ ವಿಶ್ವಸಂಸ್ಕೃತಿ ಇವು ಎಲ್ಲೆಲ್ಲಿ ಮಿಡಿಯುತ್ತಿವೆ ಅಲ್ಲಿ ನಾನೂ ಮಿಡಿಯುತ್ತಿದ್ದೇನೆ."

'ಶ್ರೀ' ಅವರು ಈ ರೀತಿ ಕನ್ನಡಕ್ಕಾಗಿ ಮಿಡಿದರು, ಕನ್ನಡಕ್ಕಾಗಿ ದುಡಿದರು ಹಾಗೂ ಕನ್ನಡಕ್ಕಾಗಿ ಮಡಿದರು.

ಶ್ರೀಯವರು ತೀರಿಕೊಂಡದ್ದು ೧೯೪೬ ರ ಜನವರಿ ೫ನೇ ತಾರೀಕು. ಆ ಸಂದರ್ಭದಲ್ಲಿ ಅಲ್ಲಿಯೇ ಇದ್ದ ರಂ.ಶ್ರೀ.ಮುಗಳಿ ಹಾಗೂ ಧಾರವಾಡಕರ ಶ್ರೀಯವರ ಸಾವಿಗೆ ಪ್ರತ್ಯಕ್ಷ ಸಾಕ್ಷಿಗಳಾಗಿದ್ದರು. ಅಂದು ಶ್ರೀಯವರನ್ನು

ಭೇಟಿಮಾಡಲು ಅವರ ಮನೆಗೆ ಈ ಇಬ್ಬರು ಸಾಹಿತಿಗಳು ಹೋಗಿದ್ದರು. ಸುಮಾರು ಮುಕ್ಕಾಲು ಗಂಟೆ ಮಾತನಾಡಿದರು. ಆ ಸಂದರ್ಭದಲ್ಲಿ ಹೆಚ್ಚು ಮಾತನ್ನಾಡಿದವರು ಶ್ರೀಯವರೆ. ಅವರಿಗೆ ಹೆಚ್ಚು ಆಯಾಸವಾಗುತ್ತಿದೆ ಎಂದು ಅರಿತು 'ನಾವು ಇನ್ನು ಬರುತ್ತೇವೆ' ಎಂದು ತಿಳಿಸಿದ ಮುಗಳಿ ಮತ್ತು ಧಾರವಾಡಕರ ಅವರು ಮನೆಯಿಂದ ಹೊರಡಲು ಮುಂದಾದಾಗ 'ಇರಲಿ ಮಾತನ್ನಾಡದೆ ಏನು ಮಾಡುವುದು' ಎಂದು ಹೇಳಿ ಮಾತನ್ನು ಮುಂದುವರೆಸಿದರು. ಮುಗಳಿಯವರು ಹಾಗೂ ಧಾರವಾಡಕರ ಅವರು ಶ್ರೀಯವರನ್ನು ಬೀಳ್ಕೊಂಡು ಮನೆಯಿಂದ ಬಾಗಿಲನ್ನು ದಾಟಿ ಹೊರಗೆ ಕಾಲಿಡುತ್ತಿದ್ದಂತೆ ಶ್ರೀಕಂಠಯ್ಯನವರ ಮಗಳು ಶಾರದಮ್ಮ ಮುಗಳಿ ಹಾಗೂ ಧಾರವಾಡಕರ ಅವರನ್ನು ಗಟ್ಟಿಯಾಗಿ ಕೂಗತೊಡಗಿದರು. ಆಗ ಅವರಿಬ್ಬರೂ ಒಳಗೆ ಹೋಗಿ ನೋಡುವುದರಲ್ಲಿಯೇ ಶ್ರೀಯವರು ಒರಗಿಕೊಂಡಿದ್ದರು. ಅದೇ ಪ್ರಸನ್ನ ಮುಖಮುದ್ರೆ, ಅದೇ ಭಾವ, ಅದೇ ಎಳೆನಗು, ಇನ್ನೂ ಮಾತನ್ನಾಡುತ್ತಿರುವರೇನೋ ಎಂಬ ಭಾವ ಅವರ ಮುಖದಲ್ಲಿ ಕಾಣುತ್ತಿತ್ತು ಎಂದು ಧಾರವಾಡಕರ ಅವರು ಒಂದು ಕಡೆ ಹೇಳಿದ್ದಾರೆ. ಆದರೆ ಮಾತಾಡುತ್ತಿರಲಿಲ್ಲ. ಆಗ ಅವರಿಬ್ಬರೂ ಕೈಕಾಲು ಉಜ್ಜಿದರು. ಯಾವ ಪ್ರತಿಕ್ರಿಯೆಯೂ ಇಲ್ಲ. ಸಮೀಪದಲ್ಲಿಯೇ ಇದ್ದ ಡಾ.ಕಮಲಾಕರ ಅವರನ್ನು ಕರೆಸಿ ಪರೀಕ್ಷಿಸಿ ನೋಡಿದರೆ ಶ್ರೀಯವರ ಪ್ರಾಣಪಕ್ಷಿ ಹಾರಿಹೋಗಿತ್ತು. ಶ್ರೀಯವರ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕಾಗಿ ಅವರ ಮನೆಯಲ್ಲಿ ಇಡಲಾಗಿತ್ತು. ಸಾವಿನ ಸುದ್ದಿ ತಿಳಿದ ಸಾವಿರಾರು ಅಭಿಮಾನಿಗಳು, ವಿದ್ಯಾರ್ಥಿಗಳು, ನಗರದ ಪ್ರಮುಖರು, ಅಧ್ಯಾಪಕರು ಹುಬ್ಬಳ್ಳಿ, ಹಾವೇರಿ, ಲಕ್ಷ್ಮೀಶ್ವರ, ಶಿರಹಟ್ಟಿ ಮೊದಲಾದ ಊರುಗಳಿಂದ ಸಾವಿರಾರು ಸಂಖ್ಯೆಯಲ್ಲಿ ಬಂದು ಅಂತಿಮ ದರ್ಶನ ಪಡೆದು, ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವನ್ನಿರಿಸಿ ಗೌರವವನ್ನು ಸಲ್ಲಿಸಿದರು. ಈ ಸಂದರ್ಭವನ್ನು ನೆನಪುಮಾಡುತ್ತಾ ಧಾರವಾಡಕರ ಅವರು ಈ ರೀತಿ ಹೇಳಿದ್ದಾರೆ. 'ಶ್ರೀಯವರು ಕೇವಲ ಅವರ ಮನೆಯ ಸ್ವತ್ತಾಗಿರಲಿಲ್ಲ; ಸಮಗ್ರ ಧಾರವಾಡದ, ನಾಡಿನ ಸ್ವತ್ತಾಗಿದ್ದರು' ಎಂದು. ಶ್ರೀಯವರು ಮಾನಸಿಕವಾಗಿ ಉತ್ತರ ಕರ್ನಾಟಕದ ಸಾಮರಸ್ಯವನ್ನು ಅಪೇಕ್ಷಿಸಿದ್ದರು. ಈ ಸಾಮರಸ್ಯದ ಪ್ರತೀಕವಾಗಿ, ಸಾಂಸ್ಕೃತಿಕ ರಾಯಭಾರಿಯಾಗಿ, ಹಳೆಯ ಮೈಸೂರಿನಲ್ಲಿ ಮೂಡಿ ಉತ್ತರ ಕರ್ನಾಟಕದವರೆಗೆ ಕೈ ಚಾಚಿದ ಕಾಮನ ಬಿಲ್ಲಿನಂತೆ ಕಾಣುತ್ತಾರೆ.

## ಅಧ್ಯಾಯ ಎರಡು: ಕನ್ನಡಕ್ಕಾಗಿ ಹೋರಾಟ

“ಹತ್ತೊಂಬತ್ತನೆಯ ಶತಮಾನದ ಕೊನೆಯ ಮೂರು ದಶಕಗಳು ಮತ್ತು ಇಪ್ಪತ್ತನೆಯ ಶತಮಾನದ ಮೊದಲ ಒಂದು ದಶಕ-ಈ ನಾಲ್ಕು ದಶಕಗಳು (೧೮೭೦-೧೯೧೦) ಹೊಸಗನ್ನಡ ಸಾಹಿತ್ಯ ದೃಷ್ಟಿಯಿಂದ, ಅದರಲ್ಲಿಯೂ ನವೋದಯವೆಂದು ಗುರುತಿಸುವ ಸಾಹಿತ್ಯ ಸಂದರ್ಭದಲ್ಲಿ, ಅತ್ಯಂತ ಮಹತ್ವದ ಸಾಹಿತಿಗಳಿಗೆ ಜನ್ಮಕೊಟ್ಟ ಒಂದು ಮಹತ್ವಪೂರ್ವ ಕಾಲವಾಗಿದೆ. ಪಂಜೆ, ಪೈ, ಬಿ.ಎಂ.ಶ್ರೀ., ಕೈಲಾಸಂ, ಡಿ.ವಿ.ಜಿ., ಎ.ಆರ್.ಕೃ., ಮಾಸ್ತಿ, ಬೇಂದ್ರೆ, ಕಾರಂತ, ಕುವೆಂಪು, ಶ್ರೀರಂಗ, ಪು.ತಿ.ನ., ಅ.ನ.ಕೃ. ಗೋಕಾಕ್ ಇನ್ನೂ ಮುಂತಾದವರು ಹುಟ್ಟಿದ್ದು ಈ ನಾಲ್ಕು ದಶಕದಲ್ಲಿಯೆ. ಈ ಇವರೆಲ್ಲರ ಸಾಧನೆಯಿಂದ ಆಧುನಿಕ ಸಾಹಿತ್ಯ ಹಿಂದೆಂದೂ ಕಾಣದ ಸಮೃದ್ಧಿಯನ್ನು, ವೈವಿಧ್ಯತೆಯನ್ನು ಕಂಡಿದೆ. ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿರುವ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ನಿಜದ ಅರ್ಥದಲ್ಲಿ ಸುವರ್ಣಯುಗವೆಂದು ಕರೆಯಬಹುದಾದ ಕಾಲ. ಯಾಕೆಂದರೆ ಹಿಂದೆ ಎಂದೂ ಹೀಗೆ ಏಕಕಾಲಕ್ಕೆ ಈ ಎತ್ತರದ ಇಷ್ಟೊಂದು ಸಾಹಿತಿಗಳು ಇದ್ದುದಾಗಲಿ, ಈ ವೈವಿಧ್ಯಮಯವಾದ ಸಾಹಿತ್ಯವನ್ನು ನಿರ್ಮಾಣ ಮಾಡಿದ್ದಾಗಲಿ ಹಾಗೂ ಬಹುಮುಖಿಯಾಗಿ ಶ್ರೀಮಂತಗೊಳಿಸಿದ್ದಾಗಲಿ ಕಂಡುಬರುವುದಿಲ್ಲ. ಇಂಥ ಮಹನೀಯರಲ್ಲಿ ಹೆಚ್ಚು ಗೌರವಕ್ಕೆ ಪಾತ್ರರಾದವರಲ್ಲಿ ಪ್ರಮುಖರೆಂದರೆ ಬಿ.ಎಂ.ಶ್ರೀಕಂಠಯ್ಯನವರು.

## ದೇಶ, ಕಾಲ, ಜೀವನ

ಒಂದು ಕಾಲದಲ್ಲಿ ಕರ್ನಾಟಕದಲ್ಲಿಯೆ ಕನ್ನಡದಲ್ಲಿ ಮಾತನಾಡಲು ಸಂಕೋಚಪಡುತ್ತಿದ್ದರು. ಗೊತ್ತಿರುವ ಕನ್ನಡಕ್ಕಿಂತಲೂ ತಪ್ಪುತಪ್ಪು ಇಂಗ್ಲಿಷ್‌ನಲ್ಲಿ ಮಾತನಾಡಲು ಅಭಿಮಾನಪಡುತ್ತಿದ್ದ ಕಾಲ ಅದಾಗಿತ್ತು. 'ಆಳುವವರ ಭಾಷೆ ಹೆಚ್ಚು ನಮ್ಮದು ಕೀಳು' ಎನ್ನುವ ಸ್ವಭಾಷಾ ಪ್ರೇಮರಹಿತ ಭಾವನೆ ಇದ್ದ ಕಾಲ. ಸರ್ಕಾರಿ ಕಚೇರಿಗಳಲ್ಲಿ ವ್ಯವಹಾರವೆಲ್ಲವೂ ಇಂಗ್ಲಿಷ್‌ನಲ್ಲಿಯೆ ನಡೆಯುತ್ತಿತ್ತು. ಪ್ರೌಢಶಾಲೆ ಹಾಗೂ ಕಾಲೇಜುಗಳಲ್ಲಿ ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿತ್ತು. ತುಂಗಭದ್ರೆಯನ್ನು ದಾಟಿದರೆ ಉತ್ತರ ಕರ್ನಾಟಕದಲ್ಲಿ ಮರಾಠಿಗೆ ಮನ್ನಣೆ, ಹೈದರಾಬಾದ್ ಕರ್ನಾಟಕದಲ್ಲಿ ಉರ್ದುವಿನ ಪ್ರಾಬಲ್ಯ, ಕನ್ನಡಕ್ಕೆ ಎಲ್ಲೂ ಜಾಗವೇ ಇರಲಿಲ್ಲ!

ಇದು ಬಹಳ ದೂರದ ಮಾತಲ್ಲ. ಸುಮಾರು ಒಂದು ಶತಮಾನದ ಹಿಂದಿನ ಮಾತು. ಕರ್ನಾಟಕದಲ್ಲಿಯೇ ಕನ್ನಡಕ್ಕೆ ಈ ಸ್ಥಿತಿಯೆ? ಎಂದು ಯೋಚಿಸಿದ ಹಲವು ಮಹನೀಯರು ಕನ್ನಡಕ್ಕೆ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಡುವುದಕ್ಕೆ, ಕನ್ನಡಿಗರಿಗೆ ಉತ್ತಮ ಸ್ಥಿತಿಯನ್ನು ಗಳಿಸಿಕೊಡುವುದಕ್ಕೆ ಅಭಿಮಾನದಿಂದ ಶಕ್ತಿಮೀರಿ ದುಡಿದಿದ್ದಾರೆ. ಅವರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು, ಆಲೂರು ವೆಂಕಟರಾಯರು, ಎಂ. ಗೋವಿಂದ ಪೈ, ಪಂಜೆ ಮಂಗೇಶರಾಯರು, ಮುದವೀಡು ಕೃಷ್ಣರಾಯರು, ಬಿ.ಎಂ.ಶ್ರೀ. ಮುಂತಾದವರು ಪ್ರಮುಖರು. ಒಂದು ದೃಷ್ಟಿಯಲ್ಲಿ ಬಿ.ಎಂ.ಶ್ರೀಯವರು ಕನ್ನಡ ಪರವಾಗಿ ಕೆಲಸಮಾಡಲು ಪ್ರಾರಂಭಿಸಿದ ಕಾಲ ಕನ್ನಡದ ಸುವರ್ಣಯುಗದ ಆರಂಭವೆನ್ನಬಹುದು. ವಿಶ್ವವಿದ್ಯಾನಿಲಯಗಳಲ್ಲಿ ಕನ್ನಡದ ಪ್ರಾಧ್ಯಾಪಕ ಹುದ್ದೆಯನ್ನು ನೀಡದೆ ಕೇವಲ ಪಂಡಿತರೆ ಸಾಕು ಎನ್ನುವುದು ಸರ್ಕಾರದ ತೀರ್ಮಾನವಾಗಿತ್ತು. ಆಗ ಶ್ರೀಯವರು ಕನ್ನಡಕ್ಕೆ ಹೇಗಾದರೂ ಪ್ರೊಫೆಸರ್ ಸ್ಥಾನ ದೊರೆಯಲಿ ಎಂದು ತಾವೇ ಕನ್ನಡಕ್ಕೂ ಗೌರವಾನ್ವಿತ ಪ್ರೊಫೆಸರ್ ಆಗಿ ದುಡಿದರು. ಅನೇಕ ದೃಷ್ಟಿಯಲ್ಲಿ 'ಬಿ.ಎಂ.ಶ್ರೀ'ಯವರು ಈ ನಾಡು ಹೆಮ್ಮೆಪಡಬೇಕಾದ ಭಾಗ್ಯಶಿಲ್ಪಿ.

ನಾಡಿನುದ್ದಕ್ಕೂ ಕಿರಣವ ಹರಡಿತು
ಬೆಳೂರಿನ ಬೆಳಗು,
'ಶ್ರೀ' ಪ್ರಭೆಯಲಿ ಕರೆದವು ಕೋಟಿ ಕಂಠಗಳು
ನವೋದಯದ ಮೊಳಗು!

-ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ

ಹತ್ತೊಂಬತ್ತನೆಯ ಶತಮಾನವು ಕನ್ನಡಸಾಹಿತ್ಯ ಇತಿಹಾಸದಲ್ಲಿ ಚಿನ್ನದ ಬೆಳಸು' ಎನ್ನುವಂತಾಯಿತು. ಆಧುನಿಕ ಸಾಹಿತ್ಯ ಸಮೃದ್ಧವಾಗಿ ಬೆಳೆದು ನವೋದಯ ಸಾಹಿತ್ಯ ಮೊಳಗಿದ ಕಾಲ.

ಬಿ.ಎಂ.ಶ್ರೀ. ಅವರು ಕನ್ನಡ, ಇಂಗ್ಲಿಷ್, ಸಂಸ್ಕೃತ ಸೇರಿದಂತೆ ಅನೇಕ ಭಾಷೆಗಳಲ್ಲಿ ಬಹಳ ದೊಡ್ಡ ವಿದ್ವಾಂಸರಾಗಿದ್ದರು. ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಇವರು ಕನ್ನಡ ನಾಡು ಮತ್ತು ನುಡಿಯ ಏಳಿಗೆಗಾಗಿ ಕಂಕಣಬದ್ಧರಾಗಿದ್ದರು. ಕನ್ನಡ ನಾಡಿನ ಮೂಲೆ ಮೂಲೆಗಳನ್ನ ಸುತ್ತಿ ಜನತೆಯೊಡನೆ ಬೆರೆತ ರೀತಿ ಶ್ರೀಕಂಠಯ್ಯನವರ ಸರಳತೆಗೆ ಸಾಕ್ಷಿಯಾಗಿದೆ. ಕನ್ನಡದ ಪುನರುಜ್ಜೀವನ ಅನ್ಯಭಾಷೆಗಳ ಅನುಕರಣೆ ಅಥವಾ ಅನುಸರಣೆಯಿಂದ ಸಾಧ್ಯವಿಲ್ಲ, ಅದು ಕನ್ನಡದಿಂದಲೇ ಸಾಧ್ಯ ಎಂದು ತಿಳಿದುಕೊಂಡಿದ್ದರು. ಕಷ್ಟಪಟ್ಟು ಕಲಿತ ಭಾಷೆಯಿಂದ ನಮ್ಮ ಅಭಿವೃದ್ಧಿ ಸಾಧ್ಯವಿಲ್ಲ, ನಮ್ಮೊಡನೆ ಬಂದ ಭಾಷೆಯಿಂದ ಮಾತ್ರ ಸಾಧ್ಯ ಎಂದು ನಂಬಿದ್ದರು.

ಸೃಜನಶೀಲ ಸಾಹಿತ್ಯ ನಿರ್ಮಾಣ.

ಬಿ.ಎಂ.ಶ್ರೀಯವರು ಸೃಜನಶೀಲ ಸಾಹಿತ್ಯ ನಿರ್ಮಾಣಕ್ಕಿಂತ ಹೆಚ್ಚಾಗಿ, ಜಗತ್ತಿನ ಉತ್ತಮ ಸಾಹಿತ್ಯವನ್ನು ಕನ್ನಡ ಭಾಷೆಗೆ ಅನುವಾದಿಸಿ ಪರಿಚಯಿಸುವುದರ ಮೂಲಕ, ಕನ್ನಡ ಸರಸ್ವತಿಯನ್ನು ಶ್ರೀಮಂತಗೊಳಿಸಿದರು. ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಿದರು. ಕನ್ನಡ ಜಾಯಮಾನಕ್ಕೆ ಒಗ್ಗುವ ಸಾಹಿತ್ಯವನ್ನು ಅನುವಾದಿಸುವುದೂ ಪವಿತ್ರ ಕಾರ್ಯವೆಂದು ಭಾವಿಸಿದ್ದರು. ಆ ಮೂಲಕ ಕನ್ನಡ ನವೋದಯ ಕಾವ್ಯ ಪ್ರವರ್ತಕರಾದರು. ಭಾರತದ ವಿದ್ಯೆ ಹಾಗೂ ಪಶ್ಚಿಮದ ವಿದ್ಯೆಯನ್ನು ಕೂಡಿಸಿ ಕನ್ನಡ ಸಾರಸ್ವತ ಲೋಕವನ್ನು ಬೆಳೆಸಬೇಕೆಂಬುದು ಬಿ.ಎಂ.ಶ್ರೀಯವರ ಮಹತ್ವಾಕಾಂಕ್ಷೆಯಾಗಿತ್ತು. ಬಿ.ಎಂ.ಶ್ರೀಯವರ ಅಗಾಧವಾದ ವಿದ್ವತ್ತಿಗೆ, ಬಹುಭಾಷಾ ಪಾಂಡಿತ್ಯಕ್ಕೆ, ಹೊಸಗನ್ನಡ ಛಂದಸ್ಸಿನ ಪರಿಕಲ್ಪನೆಗೆ, ಸಾಹಿತ್ಯ ಚರಿತ್ರೆಯ ರೀತಿಗೆ, ಭಾಷಣ ವೈಖರಿಗೆ, ಕನ್ನಡ ನಾಡು ನುಡಿಯ ನಿಷ್ಠೆಗೆ, ಗ್ರಂಥ ಸಂಪಾದನೆಯ ಶಿಸ್ತಿಗೆ, ರಸಮಯ ಕಾವ್ಯ ಮೀಮಾಂಸೆಗೆ, ಜನಪದ ಗೀತೆಯ ರಸಾಸ್ವಾದನೆಗೆ, ಕನ್ನಡ ಲಿಪಿ ಸುಧಾರಣೆಗೆ ಅವರ ಬರಹಗಳು ಸಾಕ್ಷಿಯಾಗಿವೆ. ಕನ್ನಡ ಪುನರುಜ್ಜೀವನ, ಹೊಸ ಸಾಹಿತ್ಯ ಸೃಷ್ಟಿಯ ಚಿಂತನ ಅವರ ಬರಹಗಳಲ್ಲಿ ವಿಶೇಷವಾಗಿ ಗೋಚರಿಸುತ್ತವೆ. ಬಿ.ಎಂ.ಶ್ರೀಯವರ ಬದುಕು ಬರಹವನ್ನು ಕುರಿತು ಡಾ. ಹಾ.ಮಾ.ನಾಯಕರು ಈ ರೀತಿ ವ್ಯಾಖ್ಯಾನಿಸಿದ್ದಾರೆ: "ಕನ್ನಡದಲ್ಲಿ ಕೆಲಸ ಮಾಡುವ ಯಾರಿಗಾದರೂ ಬಿ.ಎಂ. ಶ್ರೀಯವರ ನೆನಪು ಬತ್ತದ ಕಾರಂಜಿ, ಮುಗಿಯದ ಗಣಿ: ಸ್ಫೂರ್ತಿಯಸ್ತೋತ್ರ; ಶಕ್ತಿಯ ಆಗರ" "ಯುಗಪ್ರವರ್ತಕ ಎಂಬ ಹೆಸರಿಗೆ ಮಾಡಿಟ್ಟ ವ್ಯಕ್ತಿ. ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯಕ್ಕೆ ಅವರು ಅಡಿಗಲ್ಲು; ಸ್ತಂಭ, ದೀಪ, ಕೈಮರ".

**ಕನ್ನಡದ ಬಗೆಗಿನ ಕಾಳಜಿ.**

ಶ್ರೀಕಂಠಯ್ಯನವರು ಕನ್ನಡದ ಬಗೆಗೆ ಅಪಾರ ಕಾಳಜಿ ಇದ್ದವರು. ಹಗಲು ರಾತ್ರಿಗಳೆನ್ನದೆ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಕನ್ನಡಿಗರನ್ನ ಹುರಿದುಂಬಿಸಿದರು. ನಿರಂತರವಾಗಿ ಅವರು ಭಾಗವಹಿಸುತ್ತಿದ್ದ ಸಭೆ ಸಮಾರಂಭಗಳನ್ನು ಕುರಿತು ಬಿ. ಜಿ.ಎಲ್. ಸ್ವಾಮಿಯವರು 'ರೈಲ್ವೆ ನಿಲ್ದಾಣದಿಂದ ಯಾವುದೋ ಒಂದು ಛತ್ರವೋ ಅಥವಾ ಯಾರದೋ ಮನೆಯೋ (ಸರಿಯಾಗಿ ಜ್ಞಾಪಕವಿಲ್ಲ) ಸೇರಿ ಸ್ನಾನ ಊಟಗಳನ್ನು ಮುಗಿಸಿದೆವು. ಮಧ್ಯಾಹ್ನ ಮೂರು ಗಂಟೆಗೆ ಶ್ರೀಯವರ 'ಸಣ್ಣ ಕೆಲಸಗಳು ಆರಂಭವಾದವು. ಮೂರುವರೆ ಗಂಟೆಯಿಂದ ನಾಲ್ಕೂವರೆಯವರೆಗೂ ಅಲ್ಲಿಯ ಪ್ರೌಢಶಾಲೆಯಲ್ಲಿ ರಗಳೆಯ ಕವಿಗಳನ್ನು ಕುರಿತು ಕನ್ನಡದಲ್ಲಿ ಭಾಷಣ ಮಾಡಿದರು. ಐದರಿಂದ ಆರೂವರೆವರೆಗೂ ಇನ್ನಾವುದೋ ಸಂಘದ ಆಶ್ರಯದಲ್ಲಿ ವರ್ಡ್‌ವರ್ತ್ ಕವಿಯನ್ನು ಕುರಿತು ಇಂಗ್ಲಿಷ್‌ನಲ್ಲಿ ಭಾಷಣಮಾಡಿದರು. ಆರೂಕಾಲರಿಂದ ಆರೂ ಮುಕ್ಕಾಲರವರೆಗೆ ಊರಿನ ಗಣ್ಯರೂ ಕನ್ನಡಾಭಿಮಾನಿಗಳೂ ಸೇರಿದ್ದ ಖಾಸಗಿಸಭೆಯಲ್ಲಿ ಕನ್ನಡದ ಏಳಿಗೆಯ ಬಗ್ಗೆ ಮಾತುಕತೆ ನಡೆಸಿದರು. ಸ್ವಲ್ಪ ಉಪಹಾರವಾಯಿತು. ಏಳೂವರೆ ಗಂಟೆಗೆ ಯಾವುದೋ ನಾಟಕ ಶಾಲೆಯಲ್ಲಿ ನಡೆಯುತ್ತಿದ್ದ ಯಾವುದೋ ಬಳಗದ ವಾರ್ಷಿಕೋತ್ಸವದಲ್ಲಿ ಭಾಗಿಯಾಗಿ, ಎಂಟೂವರೆ ಗಂಟೆಯವರೆಗೂ ಗ್ರೀಕ್ ರುದ್ರನಾಟಕಗಳ ಪರಿಚಯವನ್ನು ಕನ್ನಡದಲ್ಲಿ ಮಾಡಿದರು. ಎಂಟೂವರೆಯಿಂದ ಒಂಬತ್ತೂ ಕಾಲುವರೆಗೂ ಬಯಲೊಂದರಲ್ಲಿ ನೆರೆದಿದ್ದ ೧೦೦-೧೫೦ ಸಭಿಕರಿಗೆ ಕನ್ನಡತಾಯಿಯ ಗಾತ್ರ ವಿಸ್ತೀರ್ಣಗಳನ್ನು ಇಂಗ್ಲಿಷ್‌ನಲ್ಲಿ ವರ್ಣಿಸಿದರು. ಒಂದರ್ಧ ಗಂಟೆಯಲ್ಲಿ ಯಾರದೋ ಮನೆಯಲ್ಲಿ ಊಟಮಾಡಿ, ಇನ್ನಾರದೋ ಮನೆಯಲ್ಲಿ ನೆರೆದಿದ್ದ ಆಂಧ್ರ-ಕನ್ನಡಿಗರನ್ನು ಉದ್ದೇಶಿಸಿ ಆಂಧ್ರದಿಂದ ಕನ್ನಡಕ್ಕೆ ಆಗಬೇಕಾಗಿರುವುದು ಬಹಳವಿದೆಯೆಂದು ನಾಲ್ಕು ಮಾತನ್ನಾಡಿ, ಅವರನ್ನು ಅಟ್ಟಕ್ಕೇರಿಸಿದರು....ಇಷ್ಟರಲ್ಲಿ ವೀರಶೈವ ವಿದ್ಯಾರ್ಥಿನಿಲಯದ ಗುಂಪೊಂದು ಬಂದು ಶ್ರೀಯವರನ್ನು ಆಹ್ವಾನಿಸಿದರು. ಒಡನೆಯೇ ಒಪ್ಪಿಕೊಂಡು ಅಲ್ಲಿಗೆ ಹೋದರು. ಅಲ್ಲಿ ನೂರೆಂಟೂ ಸಾವಿರದೆಂಟೂ ಸ್ವಾಮಿಗಳೊಬ್ಬರ ಅಧ್ಯಕ್ಷತೆಯಲ್ಲಿ ರಾತ್ರಿ ಹನ್ನೊಂದು ಮುಕ್ಕಾಲು ಗಂಟೆಯವರೆಗೆ ಕನ್ನಡ ಸಾಹಿತ್ಯದಲ್ಲಿ ವಚನಕಾರರ ಕಾಣಿಕೆ" ಎಂಬ ವಿಷಯವನ್ನೆತ್ತಿಕೊಂಡು ವಿಶದೀಕರಿಸಿ ಸಭಿಕರ ಮನಸ್ಸಂತೋಷಕ್ಕೆ ಪಾತ್ರರಾದರು. ನಮ್ಮ ಅಭ್ಯಾಗತರು "ಹನ್ನೆರಡು ಹೊಡೀತ್ರಿ ತುಸು ಆರಾಮು ತೊಗೋಬಹುದಲ್ಲ!" ಎಂದು ಎಚ್ಚರಿಸಿದರು. "ಓಹೋ, ಹಾಗೇನು! ಮುಂದಿನ ಕೆಲಸವನ್ನು ನಾಳೆ ನೋಡಿಕೊಳ್ಳೋಣ"ಎಂದು ಶ್ರೀಯವರು ಒಪ್ಪಿಕೊಂಡರು.

ಒಂದು ಉಪನ್ಯಾಸವನ್ನು ಐದು ಗಂಟೆಗಳ ಕಾಲ (ಅಸಂಪೂರ್ಣವಾಗಿ) ಕೊಟ್ಟದ್ದು ಶ್ರೀಯವರ ವಾಗ್ಮಿತೆಯ ಒಂದು ಮುಖ; ಏಳು ಗಂಟೆಗಳಲ್ಲಿ ಆರು ಇಂಗ್ಲಿಷ್- ಕನ್ನಡ ಉಪನ್ಯಾಸ ಮಾಲೆಯನ್ನು ಆಗಗೊಳಿಸಿದ್ದು ಇನ್ನೊಂದು ಮುಖ. ಮರುದಿನ....ಹತ್ತು ಗಂಟೆಗೆ ಅಲ್ಲಿಯ ಹೆಣ್ಣು ಮಕ್ಕಳ ಶಾಲೆಯೊಂದರಲ್ಲಿ ಕನ್ನಡದ ಬಾವುಟವನ್ನು ಹಾರಿಸಿದರು. ಹನ್ನೊಂದು ಗಂಟೆಯಿಂದ ಸಂಜೆ ನಾಲ್ಕು ಗಂಟೆಯವರೆಗೂ ಶ್ರೀಯವರು ಎಲ್ಲಿರುತ್ತಿದ್ದರೋ ಅಲ್ಲಲ್ಲಿಯೇ ಕಿರು ಸಭೆಗಳು ಸೇರುತ್ತಿದ್ದವು. ಶ್ರೀಯವರು ಕನ್ನಡದ ಏಳಿಗೆಗೆ ಜನ ಮಾಡಬೇಕಾಗಿರುವ ಕೆಲಸಗಳು,

ಸುಧಾರಣೆಗಳು, ಕರ್ತವ್ಯಗಳು ಮೊದಲಾದವನ್ನು ಕನ್ನಡ, ಇಂಗ್ಲಿಷ್, ಕನ್ನಡ-ಇಂಗ್ಲಿಷ್ ಭಾಷೆಗಳಲ್ಲಿ ವಿವರಿಸುತ್ತಿದ್ದರು. ಕೊನೆಯಲ್ಲಿ ಬಂದವರು ಮೂವರೂ ಸಂಸ್ಕತ ಪಂಡಿತರು, ಮುದುಕರು; ಇವರಲ್ಲಿ ಮೈಸೂರಿನ ಗೋಪಾಲಕೃಷ್ಣ ಶಾಸ್ತ್ರಿಗಳೂ ಒಬ್ಬರು. ಅದಾವುದೋ ಗುಡಿಯೊಂದರಲ್ಲಿ ಭಾಷಣ ಮಾಡಬೇಕೆಂದು ಆಹ್ವಾನಿಸಿದರು. "ನಿಮ್ಮಂಥವರು ಬಂದು ಕೇಳಿದರೆ ನಾನು ಆಜ್ಞೆಯೆಂದು ತಿಳಿಯುತ್ತೇನೆ. ನನಗೆ ಈಗ ಬಿಡುವಿದೆ" ಎಂದರು. ಪಂಡಿತರು "ಹಾಗಿದ್ದರೆ ಇನ್ನೊಂದರ್ಧ ಗಂಟೆಯೊಳಗೆ ಅಲ್ಲಿಗೆ ದಯಮಾಡಿಸೋಣವಾಗಲಿ" ಎಂದು ಹೇಳಿ ಹೊರಟುಹೋದರು.

ಈ ಕಾರ್ಯಕ್ರಮ ನಡೆದದ್ದು ಯಾವುದೋ ದೇವಸ್ಥಾನದ ಮುಖ ಮಂಟಪದಲ್ಲಿ, ಸುಮಾರು ಐವತ್ತು ಜನ (ಬಹುವಾಗಿ ಸಂಸ್ಕೃತ ಪಂಡಿತರು,ವೈದಿಕರು) ನೆರೆದಿದ್ದರು. ಗೋಪಾಲಕೃಷ್ಣಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಶ್ರೀಯವರ ಭಾಷಣದ ಸಾರಾಂಶ ಹೀಗಿತ್ತು- "ನೀವೆಲ್ಲ ಸಂಸ್ಕೃತ ಪಂಡಿತರು, ಸಂಸ್ಕೃತ ಪಾಠ ಹೇಳುತ್ತಿದ್ದೀರಿ. ಆದ್ದರಿಂದ ನಿಮಗೆ ಸಂಸ್ಕೃತ ಒಂದು ಜೀವನೋಪಾಯ ಮಾರ್ಗ. ಈ ಕಾಲದಲ್ಲಿ ಸಂಸ್ಕೃತದ ಉಪಯೋಗ ಇದಕ್ಕಿಂತ ಹೆಚ್ಚಾಗಿಲ್ಲ. ನಿಮಗೆ ಸಂಸ್ಕೃತ ವ್ಯಾಮೋಹ. ನಿಮ್ಮ ಮನೆ ಮಾತು, ತಾಯ್ನುಡಿ, ಮುದ್ದಾದ ತಿಳಿಗನ್ನಡ, ತಾಯ್ನುಡಿಯನ್ನು ಮಲತಾಯಿಯನ್ನಾಗಿಟ್ಟುಕೊಂಡು ಸಂಸ್ಕೃತವನ್ನು ಹೆತ್ತ ತಾಯಿಯಾಗಿ ಭಾವಿಸಿಕೊಂಡಿದ್ದೀರಿ" ಆ ವೇಳೆಗಾಗಲೆ ಸಭೆಯಲ್ಲಿ ಗುಸುಗುಸು ಆರಂಭವಾಯಿತು ... " ನಾನು ಹೇಳಿದ ನುಡಿ ನಿಜವಾದದ್ದರಿಂದ ನಿಮಗೆ ಒಪ್ಪಿಗೆಯಾಗದೆ ಹೋಯಿತೋ ಏನೋ! ವಿಷಯ ಇಷ್ಟು: ನಿಮ್ಮ ಮನೆಮಾತಿಗೆ ಮೊದಲನೆ ಜಾಗ ಕೊಡಬೇಕು, ನಿಮ್ಮ ಪಾಠಶಾಲೆಗಳಲ್ಲಿ ಕನ್ನಡ ಬಳಗಗಳನ್ನು ಹುಟ್ಟಿಸಿ ಬೆಳೆಸಿಕೊಂಡು ಬರಬೇಕು. ನಿಮ್ಮಂಥ ಹಿರಿಯರು ಕನ್ನಡಮ್ಮನ ಮಕ್ಕಳಿಗೆ ಅವರ ನಿಜವಾದ ತಾಯಿಯಾರೆಂಬುದರ ಅರಿವು ಕೊಡಬೇಕು..."ಎಂದು ಮುಂತಾಗಿ ಒಂದರ್ಧ ಗಂಟೆ ಮಾತನಾಡಿ, "ಸಂಸ್ಕೃತವಿಲ್ಲದಿದ್ದರೆ ಕನ್ನಡ ಬೆಳೆಯದು ಎನ್ನುವ ನಿಮ್ಮ ಭಾವನೆ ಹೋಗಬೇಕು" ಎಂದು ಹೇಳಿ ಕುಳಿತುಕೊಂಡರು. ಬಿ.ಎಂ.ಶ್ರೀಯವರ ಕನ್ನಡ ಪ್ರೇಮ ಮತ್ತು ಕನ್ನಡದ ಸೇವೆಗೆ ಇದಕ್ಕಿಂತ ನಿದರ್ಶನ ಬೇಕೆ?

ಬಿ.ಎಂ. ಶ್ರೀಕಂಠಯ್ಯನವರು ಬರೆದದ್ದು ಕಡಿಮೆ. ಆದರೆ ಅವರು ಬರೆದಷ್ಟೂ ಅಪ್ಪಟ ಚಿನ್ನ, ಅವರ ಕಾವ್ಯ, ನಾಟಕ, ಗದ್ಯಬರಹ, ಉಪನ್ಯಾಸ, ಅನುಕರಣೀಯವಾದುದು. ಅವರು ನಿರ್ಮಿಸಿದ ಸಾಹಿತ್ಯದ ಹೆದ್ದಾರಿ, ಮುಂದಿನವರಿಗೆ ರಾಜಮಾರ್ಗವಾಯಿತು. ಹಳಗನ್ನಡ, ನಡುಗನ್ನಡ, ಆಧುನಿಕ ಕನ್ನಡಗಳಲ್ಲಿ ಅವರದು ಅಸಾಧಾರಣ ಪರಿಣತಿ. ಬರಹದಲ್ಲಾಗಲಿ, ಮಾತಿನಲ್ಲಾಗಲಿ ಅವರು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲಿಯೂ ಹದವರಿತು ಮಾತನಾಡುತ್ತಿದ್ದರು. ಮಹಾಕೃತಿಗಳ ರಚನೆಯಲ್ಲಿ ಅದರದೆ ಆದ ವಿಶಿಷ್ಟವಾದ ಶೈಲಿ ಇರಬೇಕೆಂದು ಪ್ರತಿಪಾದಿಸಿದವರು ಬಿ.ಎಂ.ಶ್ರೀಯವರು. ಇವರ ಕಾವ್ಯ ಶೈಲಿ ಮುಂದಿನ ಕನ್ನಡ ಸಾಹಿತ್ಯನಿರ್ಮಾಣಕ್ಕೆ ಮಾರ್ಗದರ್ಶಿಯಾಗಿರುವುದು ಸುಳ್ಳಲ್ಲ.

ಇಂಗ್ಲಿಷ್ ಇಡೀ ಭಾರತದ ಆಡಳಿತ ಭಾಷೆ. ಶಾಲಾ ಕಾಲೇಜುಗಳಲ್ಲಿ ಶಿಕ್ಷಣಮಾಧ್ಯಮ. ಇಂಗ್ಲಿಷ್ ಬಲ್ಲವನು ಎಂದುಕೊಳ್ಳುವುದು ಒಂದು ಪ್ರತಿಷ್ಠೆಯ ಸಂಕೇತವಾಗಿತ್ತು. ಮಧ್ಯಮವರ್ಗದವರನ್ನು ಹೊರತುಪಡಿಸಿದರೆ ಉಳಿದೆಲ ವರ್ಗದ ಜನ ಸರ್ಕಾರಿ ಕೆಲಸಕ್ಕೆ ಸೇರಬೇಕೆನ್ನುವ ಆಕಾಂಕ್ಷಿಗಳಾಗಿದ್ದವರು. ಸರ್ಕಾರಿ ಕೆಲಸಕ್ಕೆ ಸೇರಬೇಕೆಂದರೆ ಇಂಗ್ಲಿಷ್ ಭಾಷಾಜ್ಞಾನ ಅತಿ ಅವಶ್ಯಕವಾಗಿತ್ತು. ತಕ್ಕಮಟ್ಟಿಗೆ ಓದಿದವರೆಲ್ಲ ಕನ್ನಡದಲ್ಲಿ ವಿಚಿತ್ರವಾಗಿ ಇಂಗ್ಲಿಷ್ ಶಬ್ದವನ್ನು ಬಳಸಿ ಮಾತನ್ನಾಡುವುದನ್ನು ರೂಢಿಸಿಕೊಂಡಿದ್ದರು. ಇದು ಇಂದಿಗೂ ಮುಂದುವರೆದಿದೆ. ಕನ್ನಡ ನಾಡಿನಲ್ಲಿಯೆ ಕನ್ನಡವನ್ನು ಮೂಲೆಗೊತ್ತಿ ಇಂಗ್ಲಿಷ್ ಈ ರೀತಿಯ ಪ್ರಾಮುಖ್ಯತೆಯನ್ನು ಪಡೆದುಕೊಂಡುದು ತೀರಾ ವಿಚಿತ್ರ ಹಾಗೂ ಅಸ್ವಾಭಾವಿಕ ಎನ್ನುವುದನ್ನು ಬಹಳ ಜನರು ಅರ್ಥಮಾಡಿಕೊಂಡಿದ್ದರು. ಶ್ರೀಕಂಠಯ್ಯನವರು ಕನ್ನಡ ಪರವಾಗಿ ನಿಂತು ಕೆಲಸಮಾಡುತ್ತಿದ್ದ ಕಾಲದಲ್ಲಿ ಮಹಾರಾಜಾ ಕಾಲೇಜಿನ ಕನ್ನಡೇತರ ಪ್ರಾಧ್ಯಾಪಕರೊಬ್ಬರು ಶ್ರೀ ಎ.ಎನ್. ಮೂರ್ತಿರಾಯರನ್ನು 'What is all this fuss your Srikantayya is making about ? Any thing in it?' 'ಇದೇನು ನಿಮ್ಮ ಶ್ರೀಕಂಠಯ್ಯನವರು ಕನ್ನಡ ಕನ್ನಡ ಎಂದು ಗಲಭೆ (fuss) ಮಾಡುತ್ತಿರುವುದು? ಅದರಲ್ಲಿ ಏನಾದರೂ ವಿಶೇಷವುಂಟೋ?' ಎಂದು ಕೇಳಿದ್ದರೆಂದು ಅವರು ದಾಖಲಿಸುತ್ತಾರೆ. ಅವರಿಗೆ ಅದು ಅರ್ಥವಾಗದ ಸಮಸ್ಯೆ. ಕನ್ನಡವನ್ನು ಕಟ್ಟಿಕೊಂಡು ಯಾರಿಗೆ ತಾನೆ ಏನು ಪ್ರಯೋಜನ ಎನ್ನುವ ಕಾಲ ಅದು.

ಇದು ಶ್ರೀಕಂಠಯ್ಯನವರು ಕನ್ನಡ ಬಾವುಟವನ್ನು ಹಿಡಿದು ಹೋರಾಟಕ್ಕೆ ಹೊರಟಾಗ ಇದ್ದ ಪರಿಸ್ಥಿತಿ. ಶ್ರೀಕಂಠಯ್ಯನವರೇನಾದರೂ ಅಂದು ಕನ್ನಡದ ಸ್ಥಿತಿಯನ್ನು ಕುರಿತು ಒಂದು ವರದಿಯನ್ನು ನೀಡಿದ್ದರೆ ಆ ವರದಿ ಈ ರೀತಿ ಇರುತ್ತಿತ್ತು ಎಂದು ಶ್ರೀ ಎ.ಎನ್.ಮೂರ್ತಿರಾಯರು ಅಭಿಪ್ರಾಯಪಡುತ್ತಾರೆ. ಕನ್ನಡದ ಉದ್ಧಾರದ ಮಾತು ಬಂದರೆ ನಮ್ಮಲ್ಲಿ ಬಹಳ ಜನ ಹೀಗೆ ವಾದಮಾಡುತ್ತಾರೆ 'ಕನ್ನಡ ನಮ್ಮ ಮಾತೃ ಭಾಷೆ, ನಿಜ. ಆದರೆ ಆ ವಿಷಯದಲ್ಲಿ ಸಲ್ಲದ ಭಾವೋದ್ರೇಕಕ್ಕೆ ಎಡೆಕೊಡಬಾರದು. ನಮ್ಮ ತಾಯಿ ನಮಗೆ ಎಷ್ಟು ಕಲಿಸಿದರೋ ಅಷ್ಟು ಕನ್ನಡ ಸಾಕು. ನಮ್ಮ ಮನಸ್ಸಿನ ಬೆಳವಣಿಗೆಗೆ, ಆತ್ಮೋದ್ಧಾರಕ್ಕೆ, ಬೇಕಾದ್ದನ್ನೆಲ್ಲ ಇಂಗ್ಲಿಷ್ ಮತ್ತು ಸಂಸ್ಕೃತ ಒದಗಿಸುತ್ತದೆ. ಕನ್ನಡ ಇದನ್ನು ಒದಗಿಸಲಾರದು. ಮೊದಲಿಂದಲೂ ಕನ್ನಡ ಸಂಸ್ಕೃತದ ಅವಲಂಬನೆಯಿಂದಲೆ ಬದುಕುತ್ತಾ ಬಂದಿದೆ. ಇದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇಂದು ನಮ್ಮ ಬದುಕಿಗೆ ಬೇಕಾದ ಎಲ್ಲವನ್ನೂ ಸಂಸ್ಕೃತವೂ ಒದಗಿಸಲಾರದು. ನಮ್ಮ ಅಭಿವೃದ್ಧಿಗೆ ಪಾಶ್ಚಾತ್ಯ ಸಂಸ್ಕೃತಿ ಅತಿ ಅವಶ್ಯಕ, ಇದು ಇಂಗ್ಲಿಷ್‌ನಿಂದ ಮಾತ್ರ ಸಾಧ್ಯ. ಯೋಚನೆ ಮಾಡಿನೋಡಿದರೆ ಇಂದಿನ ಬದುಕು ಹಿಂದಿನದರಂತೆ ಸರಳವಲ್ಲ. ಅದು ತುಂಬಾ ವೈವಿಧ್ಯಮಯವಾದುದು. ಸಂಕೀರ್ಣವಾದುದು. ಕನ್ನಡ ಮತ್ತು ಸಂಸ್ಕೃತಗಳು ಶತಮಾನದ ಹಿಂದೆ ಇದ್ದಂತೆಯೆ ಇವೆ; ಇನ್ನೂ ಕೆಳಹಂತಕ್ಕೆ ಇಳಿಯುತ್ತಿವೆ ಎಂದೂ ಹೇಳಬಹುದು. ಅವುಗಳಿಂದ ಇಂದಿನ ಬದುಕಿಗೆ ಏನು ಲಾಭ ದೊರೆತೀತು? ಮಾಧ್ಯಮಗಳಾಗಲಿ, ವೃತ್ತಪತ್ರಿಕೆಗಳಾಗಲಿ; ಸಮಾಜ ಶಾಸ್ತ್ರ, ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳಾಗಲಿ, ತತ್ವಶಾಸ್ತ್ರ ಮುಂತಾದವುಗಳಾಗಲಿ, ಕಲೆ ಸಾಹಿತ್ಯ, ಹಾಸ್ಯ, ಗಂಭೀರ ನಾಟಕಗಳ ಅದ್ಭುತವಾದ ಭಾವ ಸಂಪತ್ತಾಗಲಿ, ಹತ್ತಾರು ಸಾಹಿತ್ಯ ಪ್ರಕಾರಗಳಾದ ಕಾದಂಬರಿ, ಲಲಿತ ಪ್ರಬಂಧ, ವಿಡಂಬನೆ,

ಸಣ್ಣ ಕತೆ, ಗೀತೆ, ವಿನೋದ, ಗಂಭೀರ, ವಿಚಾರ ಸಾಹಿತ್ಯ - ಈ ಮುಂತಾದ ಸಂಪತ್ತು ಕನ್ನಡದಲ್ಲಿ ಸಿಕ್ಕುತ್ತದೆಯೆ? ನಮ್ಮ ಸಾಹಿತ್ಯ ಇಷ್ಟೊಂದು ಕ್ಷೇತ್ರದಲ್ಲಿ ವ್ಯವಸಾಯ ಮಾಡಲಿಲ್ಲ, ನಮ್ಮ ಇಂದಿನ ಸಮಸ್ಯೆಯನ್ನು ವಾಸ್ತವಿಕ ಹಿನ್ನೆಲೆಯಲ್ಲಿ ಪರಿಶೀಲಿಸಿದರೆ ಇಂಗ್ಲಿಷ್ ೧೫೦ ವರ್ಷಗಳ ಹಿಂದಿನಿಂದಲೂ ನಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿ ಬೆರೆತು ಬಂದಿದೆ. ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳೋಣ. ನಮಗೂ ಭಾರತಕ್ಕೂ, ನಮಗೂ ವಿಶಾಲ ಪ್ರಪಂಚಕ್ಕೂ ಅಂಥ ಭಾಷೆ ಇಂದಿನ ಅಗತ್ಯ. ಇಂಗ್ಲಿಷ್ ಭಾಷೆ ಆ ಅವಶ್ಯಕತೆಯನ್ನು ಪೂರೈಸುತ್ತದೆ."

ಈ ರೀತಿ ವಾದಮಾಡುವವರು 'ದೇಶಾಭಿಮಾನ ಭಾಷಾಭಿಮಾನವಿಲ್ಲದ ಜನರೆಂದು' ಬಿ.ಎಂ.ಶ್ರೀಕಂಠಯ್ಯನವರು ಅವರ ವಾದವನ್ನು ಕಡೆಗಣಿಸಲಿಲ್ಲ 'ಅವರ ಮಾತುಗಳಲ್ಲಿ ಬಹಳಷ್ಟು ಸತ್ಯವಿದೆ' ಒಪ್ಪಿಕೊಂಡರು. 'ಇಂಗ್ಲಿಷ್‌ನಿಂದ ಏನು ದೊರೆತಿದೆ ಎನ್ನುವುದು ಗೊತ್ತಿರುವ ವಿಚಾರ; ಕನ್ನಡದಿಂದ ಏನು ದೊರೆಯಬಹುದು ಎನ್ನುವುದನ್ನು ನೋಡೋಣ' ಎಂದು ಪರೀಕ್ಷಿಸಲು ಹೊರಟರು. ಅವರ ಪರೀಕ್ಷೆ ನಿರ್ದಾಕ್ಷಿಣ್ಯವಾಗಿತ್ತು. ಕನ್ನಡದ ವಿಷಯದಲ್ಲಿ ಕೆಲವು ಸಂದರ್ಭದಲ್ಲಿ ಅವರ ವಿರೋಧಿಗಳಿಗಿಂತಲೂ ಶ್ರೀಯವರೇ ಹೆಚ್ಚು ನಿರ್ದಯಿಗಳಾಗಿರುತ್ತಿದ್ದರು ಎನ್ನುವ ಸಂದೇಹ ಬರುವಂತೆ ನಡೆದುಕೊಳ್ಳುತ್ತಿದ್ದರು. ಕನ್ನಡಕ್ಕಾಗಿ ಮಾಡಿದ ಕೆಲಸ ಫಲನೀಡಲು ಆರಂಭಿಸಿದ ಮೇಲೆ ಅವರಿಗೆ ಮೆಚ್ಚುಗೆಯ ಮಾತುಗಳು ಕೇಳಿಬಂದವು. ಕನ್ನಡದ ವಿಷಯಕ್ಕಾಗಿ ಶ್ರೀಯವರು ಹೇಳಿದ ಮಾತುಗಳೆಂದರೆ 'ರಾಮಾಯಣ ಮಹಾಭಾರತದಂಥ ಮಹಾಕಾವ್ಯಗಳ ಕಾಲ ಕಳೆದುಹೋಯಿತು. ಇನ್ನೂ ಇವುಗಳನ್ನು ಅವಲಂಬಿಸಿ ಕಾವ್ಯವನ್ನು ರಚಿಸುವುದು ಮಾತ್ರ ನಡೆಯುತ್ತಲೇ ಇದೆ. 'ಪಂಪ ನಾರಣಪ್ಪ ಮಹಾಭಾರತದ ಕತೆಯನ್ನೇ ಬಳಸಿಕೊಂಡರೂ ಅವರ ದೃಷ್ಟಿ ಬೇರೆ, ಅವರದ್ದು ಸ್ವತಂತ್ರ ಪ್ರತಿಭೆ' ಎನ್ನಬಹುದು. ಆದರೂ ಮತ್ತೆ ಮತ್ತೆ ಅದೇ ವಿಷಯವನ್ನು ಕುರಿತು ಬರೆದರೆ ಆ ಚರ್ವಿತಚರ್ವಣ ಬೇಸರ ತರಿಸುತ್ತದೆ-ಪುರಾಣೇತಿಹಾಸಗಳಿಂದ ವಸ್ತುವನ್ನು ಎರವಲು ತರುವ ಎಲ್ಲರೂ ಪಂಪ ನಾರಣಪ್ಪನಷ್ಟು ಪ್ರತಿಭಾಶಾಲಿಗಳಲ್ಲ. ಅವರಿಗೆ ತಮ್ಮದೇ ಆದ ಜೀವನ ದರ್ಶನವಿಲ್ಲ. ಪ್ರಾಸ, ಶ್ಲೇಷೆ, ಕುಕವಿನಿಂದೆ, ಸತ್ಕವಿ ಪ್ರಶಂಸೆ, ಅಷ್ಟಾದಶವರ್ಣನೆ ಇವೆಲ್ಲ ಕಟ್ಟೆರೆಯಾಗುವಷ್ಟು ಸಿಗುತ್ತವೆ. ಸಂಸಾರವನ್ನು ತೊರೆದ ಸನ್ಯಾಸಿಯಾದರೂ ಒಂದು ರಾತ್ರಿ ಬೆಳದಿಂಗಳಲ್ಲಿ ಬೀದಿ ಸುತ್ತಲೇಬೇಕು. ಹಿಂದಿನ ದಿನ ನೀರಿನಲ್ಲಿ ಆಟವಾಡಲೇಬೇಕು. ಇದರಿಂದ ಯಾವ ದರ್ಶನ ಅಥವಾ ಕವಿಯ ವಾಕ್‌ಶಕ್ತಿ ತಿಳಿಯುತ್ತದೆ. ಇಂಥ ಕಾವ್ಯಗಳು ಪಂಡಿತರಿಗಾಗಿ ಪಂಡಿತರು ಏರ್ಪಡಿಸಿದ ಪಾಂಡಿತ್ಯ ಪ್ರದರ್ಶನವೇ ಹೊರತು ಜನರಿಗಾಗಿ ರಚಿಸಿದ ಕಾವ್ಯಗಳಲ್ಲ. ಕೆಲವು ವೇಳೆಯಂತೂ ಅವರ ಬರವಣಿಗೆ ಕನ್ನಡ ಎಂದು ಹೇಳಲೂ ಸಾಧ್ಯವಾಗುವುದಿಲ್ಲ.( 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ'೧೯೪೮ ಪುಟ ೧೩ನ್ನು ನೋಡಿ)

## ಶ್ರೀಕಂಠಯ್ಯನವರ ಕಾಲದ ನಾಡು-ನುಡಿ.

ನವೋದಯದ ಆರಂಭದ ಕಾಲದಲ್ಲಿ ಕನ್ನಡನಾಡು ಹರಿದು ಹಂಚಿಹೋಗಿತ್ತು. ಕನ್ನಡಿಗರಲ್ಲಿ ಅಭಿಮಾನದ ಕೊರತೆಯಿತ್ತು. ಇತರ ಭಾಷೆಗಳ ಪ್ರಾಬಲ್ಯ ಹೆಚ್ಚಾಗಿತ್ತು. ಕನ್ನಡ ಸಾಹಿತ್ಯವಂತೂ ತನ್ನ ಚಲನಶೀಲತೆಯನ್ನು

ಕಳೆದುಕೊಂಡು ನಿಂತ ನೀರಿನಂತಾಗಿತ್ತು. ಕನ್ನಡ ನಾಡು, ನುಡಿ ಜನತೆಯ ದುಃಸ್ಥಿತಿಯನ್ನು, ಜಡತೆಯನ್ನು ಕಂಡು ಶ್ರೀ ಅವರು 'ಕನ್ನಡ ಮಾತು ತಲೆಯೆತ್ತುವ ಬಗೆ' ಯಾವುದು ಎಂದು ಆರಂಭದಿಂದಲೂ ಚಿಂತಿಸುತ್ತಿದ್ದರು. ಈ ಸಂಬಂಧ ಅವರ ತಳಮಳ ಅವರ 'ಕನ್ನಡ ತಾಯ ನೋಟ' ಎಂಬ ಕವಿತೆಯಲ್ಲಿ ಸುಂದರವಾಗಿ ಮೂಡಿಬಂದಿದೆ.

'ಬಿ.ಎಂ.ಶ್ರೀ. ಅವರು ಕನ್ನಡ ನಾಡು ನುಡಿಯ ಅಭಿವೃದ್ಧಿಗಾಗಿ ನಾಡಿನ ಮೂಲೆ ಮೂಲೆಯನ್ನು ಸುತ್ತಿದ್ದಾರೆ. ಕನ್ನಡಿಗರ ಆಸೆ, ಆಕಾಂಕ್ಷೆಗಳ ಪ್ರತೀಕವಾಗಿ ನಿಂತಿದ್ದಾರೆ. ಕನ್ನಡಿಗರ ಸುಖ ದುಃಖಗಳಲ್ಲಿ ಭಾಗಿಯಾಗಿದ್ದಾರೆ. 'ಬಿ.ಎಂ.ಶ್ರೀ'. ಅವರ ಹೃದಯದ ತುಂಬಾ ಕನ್ನಡಿಗರು ಮತ್ತು ಕನ್ನಡದ ಸಂಸ್ಕೃತಿಯ ಅಭ್ಯುದಯದ ಚಿಂತೆ ಆಕ್ರಮಿಸಿತ್ತು. ಕನ್ನಡಿಗರೆಲ್ಲರೂ ಒಂದೆಡೆ ಸೇರಿ ಕನ್ನಡಿಗರ ಹೃದಯ ಒಂದಾಗಬೇಕು - ಎನ್ನುವುದೆ ಅವರ ಜೀವನದ ಗುರಿಯಾಗಿತ್ತು. ಮಾಸ್ತಿ, ಶಿವಮೂರ್ತಿ ಶಾಸ್ತ್ರಿ, ಅ.ನ.ಕೃ. ಅವರನ್ನು ಬಿಟ್ಟರೆ, ಶ್ರೀಯವರಷ್ಟು ಉತ್ತರ ಕರ್ನಾಟಕದ ನೆಲವನ್ನು ತುಳಿದವರು ಬೇರೊಬ್ಬರಿಲ್ಲ. ಕರ್ನಾಟಕದ ಸಮಗ್ರ ಪರಿಚಯವನ್ನು ಮಾಡಿಕೊಳ್ಳಲು ಪದೆ ಪದೆ ಮುಧೋಳ್, ಲಕ್ಷ್ಮೀಶ್ವರ, ಗದಗು, ಬಾಗೇವಾಡಿ, ಬನವಾಸಿ, ಕಾರವಾರ, ಉಡುಪಿ, ಮೊದಲಾದ ಪ್ರದೇಶಗಳಿಗೆ ಅನೇಕ ಬಾರಿ ಪ್ರವಾಸಮಾಡಿದರು. ಜೊತೆಗೆ ಇಂಥ ಪ್ರವಾಸಕ್ಕಾಗಿ ತಮ್ಮ ಶಿಷ್ಯ ಪಡೆಯನ್ನೇ ತಯಾರಿಸಿದರು. ಅವರಲ್ಲಿ ಮೂರ್ತಿರಾಯರು ಮುಂತಾದವರು ಪ್ರಮುಖರು. ಈ ಸುತ್ತಾಟ, ಓಡಾಟಗಳ ಮುಖ್ಯ ಉದ್ದೇಶ ಒಡೆದುಹೋದ ಕನ್ನಡ ನಾಡು ಮತ್ತು ಮನಸ್ಸುಗಳು ಒಂದಾಗಬೇಕು ಎನ್ನುವುದೇ ಶ್ರೀಯವರ ಕನಸಾಗಿತ್ತು. ವಿಶೇಷವಾಗಿ ತುಂಗಭದ್ರಾ ನಂತರದ ಕನ್ನಡ ನಾಡಿನ ಬಗೆಗೆ ವಿಶೇಷ ಕಾಳಜಿ ಇತ್ತು ಎನ್ನುವುದು ಇಲ್ಲಿ ಹೇಳಲೇಬೇಕಾದ ವಿಚಾರ. Let us be the living human bridge across the Tungabhadra ಎನ್ನುವ ಭಾವನೆ ಶ್ರೀಯವರದಾಗಿತ್ತು. ಶ್ರೀಯವರು ಧಾರವಾಡದಲ್ಲಿ ತೀರಿಹೋದ ಘಟನೆಯೂ ಕೂಡ 'ತಮ್ಮ ದೇಹದಲ್ಲಿ ಶಕ್ತಿಯಿರುವವರೆಗೆ ಉತ್ತರ ಕರ್ನಾಟಕ ಹಾಗೂ ಹಳೆಯ ಮೈಸೂರುಗಳ ಬಾಂಧವ್ಯಕ್ಕಾಗಿ ಹೆಣಗಿದರು' ಎನ್ನುವುದನ್ನು ಸಂಕೇತಿಸುತ್ತದೆ.

ಕನ್ನಡ ಪರವಾಗಿ ಕೆಲಸ ಮಾಡಲು ಮನಸ್ಸುಮಾಡಿದ ದಿನಗಳಲ್ಲಿ ಕನ್ನಡದ ವಾತಾವರಣ ಹೇಗಿತ್ತು ಎಂದರೆ :- ತುಂಗಭದ್ರೆಯಿಂದಾಚೆಗೆ ಮರಾಠಿಯ ಪ್ರಾಬಲ್ಯ, ಹೈದರಾಬಾದ್ ಸಂಸ್ಥಾನದ ಕನ್ನಡ ಪ್ರದೇಶದಲ್ಲಿ ಉರ್ದುವಿನ ದವಲತ್ತು, ಅಂದಿನ ಮೈಸೂರು ಪ್ರಾಂತ್ಯದಲ್ಲಿ ಇಂಗ್ಲಿಷ್ ಪ್ರಾಬಲ್ಯ, ಸರ್ಕಾರದ ಹಲವು ಉನ್ನತ ಹುದ್ದೆಗಳಲ್ಲಿ ಮದರಾಸು ಪ್ರಾಂತ್ಯದಿಂದ ಬಂದವರೇ ಇದ್ದರು. ಕನ್ನಡವನ್ನು ಕೇಳುವವರು ಯಾರು?

ಮೈಸೂರು ವಿಶ್ವವಿದ್ಯಾನಿಲಯದಲ್ಲಿ, ಇಂಗ್ಲಿಷ್, ಗಣಿತ, ಚರಿತ್ರೆ, ಭೂವಿಜ್ಞಾನ ಬೋಧನೆಗೆ ಪ್ರೊಫೆಸರ್‌ಗಳು ಇದ್ದರು. ಆದರೆ ಕನ್ನಡ ಬೋಧನೆಗೆ ಪ್ರೊಫೆಸರ್‌ಗಳು ಇರಲಿಲ್ಲ! ಬೇರೆ ವಿಷಯದ ಉಪನ್ಯಾಸಕರಿಗೆ ಎಪ್ಪತ್ತೈದು ರೂಪಾಯಿಗಳ ಸಂಬಳ, ಕನ್ನಡ ಪಂಡಿತರಿಗೆ ನಲವತ್ತು ರೂಪಾಯಿಗಳ ಸಂಬಳ! ಕನ್ನಡ ನಾಡಿನಲ್ಲಿ ಪರ್ಷಿಯನ್ ಭಾಷೆಯಲ್ಲಿ ಎಂ.ಎ. ಓದಲು ಅವಕಾಶವಿತ್ತು, ಆದರೆ ಕನ್ನಡಕ್ಕೆ ಅವಕಾಶವಿರಲಿಲ್ಲ. ಕನ್ನಡ ಎಂ.ಎ. ಮತ್ತು ಆನರ್ಸ್ ತರಗತಿಗಳು ಆರಂಭವಾದುದು (೧೯೨೭) ಶ್ರೀಕಂಠಯ್ಯನವರು ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್

ಆಗಿದ್ದ ಕಾಲದಲ್ಲಿ. ಶ್ರೀಕಂಠಯ್ಯನವರ ಕನ್ನಡ ಪ್ರೇಮವನ್ನು, ಅಭಿಮಾನವನ್ನು ಟೀಕಿಸಿದವರು ಆಗ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಇದ್ದರು!

ಕನ್ನಡಿಗರು ಸುಮಾರು ಹತ್ತೊಂಬತ್ತು ಆಡಳಿತದಲ್ಲಿ ಹಂಚಿಹೋಗಿದ್ದರು. ಮದರಾಸು, ಬೊಂಬಾಯಿ ಈ ಪ್ರಾಂತ್ಯದಲ್ಲಿ ಸ್ವಲ್ಪಭಾಗ, ಹೈದರಾಬಾದಿನ ನಿಜಾಮರ ಸಂಸ್ಥಾನದಲ್ಲಿ ಮತ್ತೆ ಸ್ವಲ್ಪಭಾಗ ಸೇರಿಹೋಗಿತ್ತು. ಮೈಸೂರು ಸಂಸ್ಥಾನ, ಬ್ರಿಟೀಷ್ ರೆಸಿಡೆನ್ಸಿಯಲ್ಲಿ ಸೇರಿಹೋಗಿದ್ದ ಕೊಡಗು-ಇದಲ್ಲದೆ ತಮಿಳು, ಮರಾಠಿ, ಉರ್ದು,ತೆಲುಗು ಪ್ರಾಬಲ್ಯವಿದ್ದ ಪ್ರದೇಶಗಳಲ್ಲಿ ಕನ್ನಡವನ್ನು ಕೇಳುವವರೆ ಇರಲಿಲ್ಲ. ಈಗಿನ ಕರ್ನಾಟಕದ ಅರ್ಧದಷ್ಟು ಪ್ರದೇಶ ಮೈಸೂರು ಸಂಸ್ಥಾನ. ಇಲ್ಲಿ ಮದರಾಸಿನಿಂದ ಬಂದವರ ಇಂಗ್ಲಿಷ್ ಆಡಳಿತ, ಕನ್ನಡವನ್ನು ಕೇಳುವವರೇ ಇರಲಿಲ್ಲ. ಜೊತೆಗೆ ಕನ್ನಡಿಗರಿಗೆ ಇಂಗ್ಲಿಷ್ ಮೇಲಿನ ವಿಪರೀತ ವ್ಯಾಮೋಹ ಬೇರೆ!.

ಕನ್ನಡದ ಸ್ಥಿತಿಯನ್ನು ಕುರಿತು ನೊಂದು ಶ್ರೀಯವರು ಕನ್ನಡಪರವಾಗಿ ಹೇಳಿದ ಮಾತುಗಳೆಂದರೆ:- 'ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ, ಸಂಸ್ಕೃತವಲ್ಲ. ಇಂಗ್ಲಿಷ್ ಅಲ್ಲ. ಹಿಂದಿಯಲ್ಲ. ಕನ್ನಡ, ಕನ್ನಡ ಅಭಿಮಾನವೆಂದರೆ ಅನ್ಯ ಭಾಷೆಯ ದ್ವೇಷವಲ್ಲ, ನಮ್ಮ ಸೋದರ ಭಾಷೆಗಳಿಂದ ಇಂಗ್ಲಿಷ್, ಸಂಸ್ಕೃತ ಸೇರಿದಂತೆ ಅವುಗಳಿಂದ ಉತ್ತಮವಾದುದನ್ನು ಪಡೆದು ಕನ್ನಡವನ್ನು ಕಟ್ಟೋಣ, ಭಾಷೆಯನ್ನು ಬೆಳೆಸೋಣ ಎನ್ನುವುದು ಶ್ರೀಯವರ ಆಶಯವಾಗಿತ್ತು. ಶ್ರೀಯವರು ಕನ್ನಡದ ಕಹಳೆಯನ್ನು ಮೊಳಗಿಸಲು ಆರಂಭಿಸಿದ ದಿನಗಳಲ್ಲಿ ಇದ್ದ ವೃತ್ತ ಪತ್ರಿಕೆಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ ಜೊತೆಗೆ ಸಂಪರ್ಕ ಸಾಧನಗಳ ಕೊರತೆ ಬೇರೆ!

## ಅಖಂಡ ಕರ್ನಾಟಕದ ಕಲ್ಪನೆ

ಶ್ರೀಯವರಿಗೆ ಕನ್ನಡ ನಾಡು ನುಡಿಯ ಬಗೆಗೆ ಅಪಾರವಾದ ಅಭಿಮಾನ. ತಮ್ಮನ್ನು 'ಕನ್ನಡ ತಾಯಿಗಾಗಿ ಭಿಕ್ಷೆ ಬೇಡುವ ದಾಸಯ್ಯ ನಾನು' ಎಂದು ಕರೆದುಕೊಂಡಿದ್ದಾರೆ. ಕನ್ನಡವನ್ನು ಕಾಪಾಡಲು ಇರುವ 'ಕನ್ನಡದ ಕಾವಲು ನಾಯಿ ನಾನು' ಎಂದು ಹೇಳಿಕೊಂಡಿದ್ದಾರೆ. ಶ್ರೀಯವರು ಊಟ ನಿದ್ರೆಯನ್ನು ಬಿಟ್ಟು ಊರೂರು ಸುತ್ತಿ ಕನ್ನಡದ ಕೆಲಸವನ್ನು ಮಾಡಿದ್ದಾರೆ. ಸಾಹಿತ್ಯ, ಚಿಂತನೆ, ವಿಜ್ಞಾನ, ವೃತ್ತಪತ್ರಿಕೆ ಮುಂತಾದ ಕ್ಷೇತ್ರಗಳಲ್ಲಿ ಭಾಷೆಯನ್ನು ಅಭಿವೃದ್ಧಿಪಡಿಸಲು ಶ್ರಮಿಸಿದ್ದಾರೆ. ಕನ್ನಡದ ಹಿರಿಮೆಯನ್ನು ಕೊಂಡಾಡಿದ್ದಾರೆ. ಕನ್ನಡಿಗರಿಗೆ ಅದರ ಹಿರಿಮೆಯನ್ನು ಎತ್ತಿ ತೋರಿಸಿದ್ದಾರೆ. ಕನ್ನಡಾಭಿಮಾನವನ್ನು ಉಕ್ಕಿ ಹರಿಯುವಂತೆ ಮಾಡಿದ್ದಾರೆ. ಕನ್ನಡಿಗರು ಕನ್ನಡವನ್ನು ಹೇಗೆ ಉಳಿಸಬೇಕು ಮತ್ತು ಹೇಗೆ ಬೆಳೆಸಬೇಕು ಎನ್ನುವುದನ್ನು ಸೂಚಿಸಿದ್ದಾರೆ. ಶ್ರೀಯವರ ಮಾತುಗಳು ಒಂದು ರೀತಿಯ ಆತ್ಮೀಯ ಸಮಾಲೋಚನೆ ಎನ್ನುವಂತೆ ಇರುತ್ತಿದ್ದವು. ಲೋಕಾಭಿರಾಮ ಎನ್ನುವಂಥ ಆತ್ಮೀಯ ಹಿತವಚನಗಳು ಎನ್ನುವಂತೆ ಪರಿಣಾಮಕಾರಿಯಾಗಿ ಇರುತ್ತಿದ್ದವು. ಈ ರೀತಿಯ ಭಾಷಣದ ಶೈಲಿ ಶ್ರೀಯವರನ್ನು ಜನಪ್ರಿಯ ಭಾಷಣಕಾರರನ್ನಾಗಿ ಮಾಡಿತ್ತು. ಶ್ರೀಯವರು ಕನ್ನಡಪರ ಸಂಘ ಸಂಸ್ಥೆಗಳಿಗೆ, ಸಾಂಸ್ಕೃತಿಕ ಸಂಸ್ಥೆಗಳಿಗೆ, ಕಾಲೇಜುಗಳಿಗೆ ಅವರು ನಡೆಸುವ ಕಾರ್ಯಕ್ರಮಗಳ ಒಂದು ರೀತಿಯ ಖಾಯಂ ಭಾಷಣಕಾರರಾಗಿ ಹೋಗಿದ್ದರು.

ಇಂಗ್ಲಿಷ್ ಸಾಹಿತ್ಯ ಪ್ರೇಮಿಗಳಿಗೆ ಅವರು ಷೇಕ್ಸ್ಪಿಯರ್ ಕವಿಯನ್ನು ಕುರಿತು ಅಥವಾ ವರ್ಡ್ಸ್‌ವರ್ತ್ ಕವಿಯನ್ನು ಕುರಿತು ಆಡುವ ಮಾತುಗಳನ್ನು ಕೇಳುವ ಆಸೆಯಾದರೆ, ಧಾರ್ಮಿಕ ಮನೋಭಾವದವರಿಗೆ 'ಪ್ರವಾದಿಗಳ ಪಲ್ಲವಿ' ಕುರಿತು ಉಪನ್ಯಾಸವನ್ನು ಕೇಳುವ ಬಯಕೆ, ಕರ್ನಾಟಕದ ರಾಜಕೀಯಾಸಕ್ತರಿಗೆ ಕರ್ನಾಟಕದ ಏಕೀಕರಣವನ್ನು ಕುರಿತು ಅವರು ಮಾಡುವ ಭಾಷಣದ ಮೇಲೆ ಆಸಕ್ತಿ ಇರುತ್ತಿತ್ತು. ಶ್ರೀಯವರ ಭಾಷಣವನ್ನು ಕೇಳಲು ಸಾವಿರಾರು ಅಭಿಮಾನಿಗಳು ಗಂಟೆಗಟ್ಟಲೆ ಕಾಯುತ್ತಿದ್ದರು. ಶ್ರೀಯವರು ಈ ರೀತಿ ಸಾರ್ವಜನಿಕ ಸಮಾರಂಭಗಳಲ್ಲಿ ಭಾಷಣ ಮಾಡುತ್ತಿದ್ದುದು, ಕಾರ್ಯಕ್ರಮದಲ್ಲಿ ಭಾಗವಹಿಸಲು ಊರೂರು ಸುತ್ತುತ್ತಿದ್ದುದು, ದೂರದ ಊರಿಗೆ ಬಸ್ಸು ರೈಲು ಕಾರುಗಳಲ್ಲಿ ಪ್ರಯಾಣ ಮಾಡುತ್ತಿದ್ದುದು ಕೇವಲ ಕೀರ್ತಿ ಅಭಿಮಾನವನ್ನು ಸಂಪಾದಿಸಲು ಅಲ್ಲ. ಅದು ಕನ್ನಡ ನಾಡಿನ ಮೇಲಿನ ಪ್ರೀತಿಯಿಂದ, ಕನ್ನಡಜನತೆಯ ಮೇಲಿನ ಗೌರವದಿಂದ, ಊರು ಯಾವುದೇ ಇರಲಿ ಅದು ಎಷ್ಟೇ ದೂರವಿರಲಿ 'ತಾವು ನಮ್ಮ ಊರಿಗೆ ಬರಬೇಕು ಉಪನ್ಯಾಸ ಮಾಡಬೇಕು, ಅಧ್ಯಕ್ಷತೆ ವಹಿಸಬೇಕು' ಎನ್ನುವ ಬೇಡಿಕೆ ಇದ್ದರೆ ಯಾವುದೇ ಕಾರಣಕ್ಕೂ ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಅದನ್ನು ತಿರಸ್ಕರಿಸುತ್ತಿರಲಿಲ್ಲ. ಹಳೆ ಮೈಸೂರು ರಾಜ್ಯವನ್ನು ಹೊರತುಪಡಿಸಿ ಉತ್ತರ ಕರ್ನಾಟಕದಿಂದ ಬರುವ ಯಾವುದೇ ಅವಕಾಶವನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಆ ಭಾಗಕ್ಕೆ ಭೇಟಿನೀಡುವುದು ತಮ್ಮ ಕರ್ತವ್ಯವೆಂದು ಶ್ರೀಯವರು ಭಾವಿಸಿದರು. ಕರ್ನಾಟಕದ ಒಂದೊಂದು ಊರೂ ಭೂಪಟದಲ್ಲಿ ದಾಖಲಿಸಿರುವ ಹೆಸರುಗಳಾಗಿರದೆ ಭಾವಭಂಡಾರವಾಗಿ ಇತಿಹಾಸ ಸಾಹಿತ್ಯ ಸಂಸ್ಕೃತಿಯನ್ನು ಉಕ್ಕಿಸುವ ಬುಗ್ಗೆಗಳಾಗಿದ್ದವು. ಪಂಪನ ಮನಸ್ಸನ್ನು ಸೂರೆಗೊಂಡ ಬನವಾಸಿಯಂತೆ ಬದಾಮಿ, ಬೇಲೂರು, ಹಳೆಯಬೀಡು, ವಿಜಯನಗರದ ಹಂಪೆ ಮುಂತಾದ ಸ್ಥಳಗಳು ಶ್ರೀಕಂಠಯ್ಯನವರಿಗೆ ಪುಣ್ಯ ಕ್ಷೇತ್ರಗಳಾಗಿ ಪರಿಣಮಿಸುತ್ತಿದ್ದವು. ಕರ್ನಾಟಕದಲ್ಲಿ ಪ್ರವಾಸಮಾಡುವುದು ತೀರ್ಥಯಾತ್ರೆಯಂತೆಯೂ, ಭಾಷಣ ಮಾಡುವುದು ಒಂದು ರೀತಿಯಲ್ಲಿ ಪೂಜೆಯಂತೆಯೂ ಭಾವಿಸಿದ್ದರು. ಹಳೆ ಮೈಸೂರಿನಿಂದ ಉತ್ತರ ಕರ್ನಾಟಕಕ್ಕೆ ಸರಿಯಾದ ಸಂಪರ್ಕ ಸಾಧನಗಳು ಇಲ್ಲದೆ ಇದ್ದ ಕಾಲದಲ್ಲಿ ಶ್ರೀಕಂಠಯ್ಯನವರು ಎಲ್ಲಕಡೆ ಸುತ್ತಾಡಿ ಎಲ್ಲರ ಪ್ರೀತಿಗೆ ಪಾತ್ರರಾದರು. ಎಲ್ಲರ ಸ್ನೇಹವನ್ನು ಸಂಪಾದಿಸಿದರು. ಎಲ್ಲರ ಗೌರವವನ್ನು ಗಳಿಸಿದರು. ಅವರು ರಾಜಕಾರಣಿ ಅಲ್ಲ. ರಾಜಕೀಯದಲ್ಲಿ ಇರಲಿಲ್ಲ ನಿಜ, ಆದರೆ ರಾಜಕಾರಣಿಗಿಂತ ಮಿಗಿಲಾಗಿ ಕರ್ನಾಟಕ ಒಂದಾಗಬೇಕೆಂದು ದುಡಿದರು. ಏಕೀಕರಣದ ಮಹತ್ವವನ್ನು ಪ್ರತಿಪಾದಿಸಿದರು. ಈ ಕಾರಣದಿಂದ ಶ್ರೀಯವರನ್ನು ಕರ್ನಾಟಕದ ಸಾಂಸ್ಕೃತಿಕ ಪ್ರತಿನಿಧಿಗಳು ಎನ್ನಬಹುದು.

ಶ್ರೀಯವರು ಕನ್ನಡಿಗರಲ್ಲಿ ಕರ್ನಾಟಕದ ಹಿರಿಮೆಯನ್ನು ಎತ್ತಿ ತೋರಿಸಿದ್ದಾರೆ. ಕನ್ನಡಾಭಿಮಾನ ಪ್ರತಿಯೊಬ್ಬ ಕನ್ನಡಿಗನಲ್ಲೂ ಉಕ್ಕುವಂತೆ ಮಾಡಿದ್ದಾರೆ. ಕನ್ನಡಿಗರು ಕನ್ನಡವನ್ನು ಹೇಗೆ ಉಳಿಸಬೇಕು ಮತ್ತು ಹೇಗೆ ಬೆಳೆಸಬೇಕು ಎನ್ನುವುದನ್ನು ಸೂಚಿಸಿದ್ದಾರೆ.

**ಚಳುವಳಿಯ ನಾಯಕರು.**

ಬಿ.ಎಂ.ಶ್ರೀಯವರು ಒಂದು ಚಳುವಳಿಯ ನಾಯಕರು ತಮ್ಮ ಕಾಲಕ್ಕಿಂತ ಒಂದಿನ ಮತ್ತು ತಮ್ಮ ಕಾಲದ ಸಾಹಿತ್ಯ ಸ್ವರೂಪವನ್ನು ಕುರಿತಾಗಿ ಅವಲೋಕಿಸಿ ಹೊಸ ಮಾರ್ಗದ ಅನ್ವೇಷಕ ಶಕ್ತಿಯಾಗಿದ್ದರು. ಶ್ರೀಕಂಠಯ್ಯನವರು ಸೃಜನಶೀಲ ಸಾಹಿತ್ಯದ ನಿರ್ಮಾಣ ಮತ್ತು ಸಾಹಿತ್ಯ ತತ್ವಗಳ ಪ್ರತಿಪಾದನೆ ಎರಡರಲ್ಲೂ ತೊಡಗಿಸಿಕೊಂಡವರು. ದೇಶ, ಭಾಷೆ, ಸಾಹಿತ್ಯ ಯಾವುದರ ವಿಷಯದಲ್ಲಾಗಲಿ ಅಂಧಶ್ರದ್ಧೆ ಅವರಿಗೆ ಹಿಡಿಸದು; ಏಕೆಂದರೆ ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ' ಎನ್ನುವುದನ್ನು ಸದಾ ಪ್ರತಿಪಾದಿಸುತ್ತಿದ್ದರು. ಈ ಕಾರಣದಿಂದಾಗಿಯೇ ತಾವು ಏಕೆ ಹೊಸ ರೀತಿಯಲ್ಲಿ ಬರೆಯುತ್ತೇನೆ ಹಾಗೂ ಹೊಸ ರೀತಿಯ ಬರಹ ಕನ್ನಡಕ್ಕೆ ಅಗತ್ಯವಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇಂಗ್ಲಿಷ್ ಮತ್ತು ಸಂಸ್ಕೃತಕ್ಕೆ ಅತಿ ಹೆಚ್ಚು ಮಹತ್ವ ಮತ್ತು ಗೌರವವಿದ್ದ ಕಾಲ ಮತ್ತು ಕನ್ನಡ ಸಾಹಿತ್ಯವನ್ನು ತಾತ್ಸಾರದಿಂದ ನೋಡುತ್ತಿದ್ದ ಅಂದಿನ ಸಾಂಸ್ಕೃತಿಕ ವಾತಾವರಣದಲ್ಲಿ ಕನ್ನಡವನ್ನು ಸಜ್ಜುಗೊಳಿಸುವ ಹಾಗೂ ಕನ್ನಡ ಮಾತು ತಲೆಯೆತ್ತುವ ಬಗೆಗೆ ಒಳ್ಳೆಯ ಕೆಲಸ ಮಾಡಿದವರು ಶ್ರೀಕಂಠಯ್ಯನವರು.

ಆಧುನಿಕ ಕನ್ನಡ ಕವನಗಳು, ಕಥೆಗಳು, ಕಾದಂಬರಿಗಳು ಇಲ್ಲದಿದ್ದ ಕಾಲದಲ್ಲಿ ಶ್ರೀಕಂಠಯ್ಯನವರು ಕನ್ನಡ ಕಾವ್ಯದಲ್ಲಿ ಹೊಸ ಬೆಳಕನ್ನು ತರಲು ಪ್ರಾರಂಭಿಸಿದರು. ಕನ್ನಡ ಮಾತು ತಲೆಯೆತ್ತುವ ಕುರಿತು ಹೇಳುತ್ತ ಶ್ರೀಕಂಠಯ್ಯನವರು ಹೀಗೆ ಹೇಳಿದ್ದಾರೆ.

"ನಮ್ಮ ಮಾತೇನು ನೆನ್ನೆ ಮೊನ್ನೆಯ ಕಾಡು ಮಾತಲ್ಲ, ನಮ್ಮ ಕಾವ್ಯ ಮಾಲೆ ಓದು ಬರಹ ಬಾರದ ಒಡ್ಡರು ಹೇಳುವ ಕುರುಕು ಪದ್ಯವೂ ಅಲ್ಲ. ಆರ್ಯರು ಇಂಡಿಯಾಗೆ ಬರುವುದಕ್ಕೆ ಮೊದಲೇ ಇಲ್ಲಿ ದ್ರಾವಿಡ ಭಾಷೆ ನೆಲೆಸಿತ್ತು.'

೧೯೩೮ರಲ್ಲಿ ಪರಿಷತ್ತಿನ ಉಪಾಧ್ಯಕ್ಷರಾಗಿ ಚುನಾಯಿತರಾದರು. ಇದೇ ಅವಧಿಯಲ್ಲಿ ಅಚ್ಚುಕೂಟವನ್ನ ಸ್ಥಾಪಿಸಿದರು. ಅದು ಬಿ.ಎಂ.ಶ್ರೀ. ಅಚ್ಚುಕೂಟವೆಂದೇ ಪ್ರಸಿದ್ಧವಾಗಿದೆ. 'ಕನ್ನಡ ನಾಡಿನ ಚರಿತ್ರೆ' ಪುಸ್ತಕವನ್ನು ಪ್ರಕಟಿಸಿ ನಾಡಿನ ರಾಜಕೀಯ, ಸಾಮಾಜಿಕ, ಆರ್ಥಿಕ ಚರಿತ್ರೆಯನ್ನು ನಿರೂಪಿಸಿದ್ದಾರೆ. ಧರ್ಮಗಳ ವಿವರ ನೀಡಿದ್ದಾರೆ. ಕರ್ನಾಟಕದ ಕಲೆಗಳನ್ನು ಪರಿಚಯಿಸಿದ್ದಾರೆ. 'ಕನ್ನಡ ಬಾವುಟ' ಕನ್ನಡದ ಶಾಸನಗಳು ಸೇರಿದಂತೆ ಪೂರ್ವಸಾಹಿತ್ಯವನ್ನು ಪರಿಚಯಿಸುತ್ತದೆ.

## ಅಧ್ಯಾಯ ಮೂರು: ಕೃತಿಗಳು

ಶ್ರೀಕಂಠಯ್ಯನವರು ರಚಿಸಿದ ಕೃತಿಗಳು ಹತ್ತು ರಚಿಸಿದ ಕೃತಿಗಳು ಸಂಖ್ಯಾ ದೃಷ್ಟಿಯಿಂದ ಕಡಿಮೆಯಾದರೂ ಒಂದೊಂದೂ ಮೌಲಿಕವಾದುವುಗಳು. ಒಂದೊಂದೂ ಮುತ್ತಿನಂತೆ ಬೆಲೆಬಾಳುವ ಗ್ರಂಥಗಳು. ಬಿ.ಎಂ.ಶ್ರೀಯವರು ಬರೆದದ್ದು ಕಡಿಮೆಯಾದರೂ ಬರಹಗಾರರ ತಂಡವನ್ನೆ ತಯಾರುಮಾಡಿದರು.

**ಕವನ ಸಂಕಲನಗಳು :**

೧] ಇಂಗ್ಲಿಷ್ ಗೀತೆಗಳು (೧೯೨೧)

೨] ಹೊಂಗನಸುಗಳು (೧೯೪೩).

**ನಾಟಕಗಳು :**

೧] ಗದಾಯುದ್ಧ ನಾಟಕಂ (೧೯೨೬)

೨] ಅಶ್ವತ್ಥಾಮನ್ (೧೯೩೦)

೩] ಪಾರಸಿಕರು (೧೯೩೫).

**ಅಪೂರ್ಣವಾದ ಕೃತಿಗಳು :**

೧] ಕನ್ನಡ ಸಾಹಿತ್ಯ ಚರಿತ್ರೆ (೧೯೪೭)

೨] ಕನ್ನಡ ಛಂದಸ್ಸಿನ ಚರಿತ್ರೆ (೧೯೩೬).

**ಸಂಶೋಧನಾ ಕೃತಿಗಳು : ವಿಚಾರ-ವಿಮರ್ಶೆ-ಚರಿತ್ರೆ,**

೧] ಕನ್ನಡ ಛಂದಸ್ಸಿನ ಚರಿತ್ರೆ (ಕನ್ನಡ ಕೈಪಿಡಿ ಭಾಗ-೧ (೧೯೩೬)

೨] ಕನ್ನಡ ಸಾಹಿತ್ಯ ಚರಿತ್ರೆ (ಕನ್ನಡ ಕೈಪಿಡಿ ಭಾಗ-೩ (೧೯೪೭)

೩] ಕನ್ನಡ ಕೈಪಿಡಿ (ಸಂ:೧೯೩೯,೪೩)

೪] ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ (೧೯೪೮)

೫] ಕನ್ನಡ ನಾಡಿನ ಚರಿತ್ರೆ (ಸಂಪಾದನೆ ೩ ಸಂಪುಟಗಳು)

೬] ಕನ್ನಡ ಭಾಷೆಯ ವಿಚಾರಗಳು(೧೯೧೩)

೭] ಶ್ರೀ ಸಾಹಿತ್ಯ (ಸಮಗ್ರ ಸಾಹಿತ್ಯ ಸಂಪುಟ-೧೯೮೩)

೮] ಶ್ರೀ ಸಾಹಿತ್ಯ ಮಣಿಮಾಲೆ (೨೦೦೮) (ಶ್ರೀ ಸಾಹಿತ್ಯದಲ್ಲಿಲ್ಲದ ಲೇಖನಗಳು)

**ಅನುವಾದ, ಇಂಗ್ಲಿಷ್, ಇತರೆ ಸಾಹಿತ್ಯ ಮಿಮಾಂಸೆಯ ಗ್ರಂಥ :**

೧] A Hand Book of Rhetoric (1919)

೨] Improvment of kannada (1995)

೩] ಇಸ್ಲಾಂ ಸಂಸ್ಕೃತಿ(ಅನುವಾದ -೧೯೪೮).

**ಕಾವ್ಯಗಳು:**

**ಇಂಗ್ಲಿಷ್ ಗೀತೆಗಳು**

ಹೊಸಗನ್ನಡದ ಆಚಾರ್ಯ ಪುರುಷರಲ್ಲಿ ಒಬ್ಬರಾದ ಶ್ರೀಕಂಠಯ್ಯನವರು ಕನ್ನಡದ ನಾಡು ನುಡಿಗೆ ಸಲ್ಲಿಸಿದ ಸೇವೆಯ ಒಂದು ಪ್ರಮುಖ ಭಾಗವೆಂದರೆ ಅವರು ನೀಡಿದ ಅನುವಾದಗಳು. ೧೯೨೧ರಲ್ಲಿ 'ಇಂಗ್ಲಿಷ್ ಗೀತೆಗಳು' ಎನ್ನುವ ಸಂಕಲನದೊಂದಿಗೆ ಆರಂಭವಾದ ಅವರ ಅನುವಾದ ಕಾಯಕ ೧೯೪೮ ರಲ್ಲಿ ಪ್ರಕಟವಾದ 'ಇಸ್ಲಾಮ್ ಸಂಸ್ಕೃತಿ' ಎನ್ನುವ ಗ್ರಂಥದೊಂದಿಗೆ ಮುಕ್ತಾಯವಾಯಿತು. ೨೨ವರ್ಷಗಳ ಸುದೀರ್ಘ ಅವಧಿಯಲ್ಲಿ ಅವರು ಅನುವಾದಿಸಿದ ಇತರ ಅನುವಾದಗಳೆಂದರೆ ೧೯೨೯ರಲ್ಲಿ ಪ್ರಕಟವಾದ 'ಅಶ್ವತ್ಥಾಮನ್' ಮತ್ತು ೧೯೩೫ ರಲ್ಲಿ ಪ್ರಕಟವಾದ 'ಪಾರಸಿಕರು'.

'ಇಂಗ್ಲಿಷ್ ಗೀತೆಗಳ' ಬಗ್ಗೆ ಶ್ರೀಕಂಠಯ್ಯನವರು ಈ ರೀತಿ ಅರಿಕೆ ಮಾಡಿಕೊಂಡಿದ್ದಾರೆ: 'ಇಂಗ್ಲಿಷ್ ಕಾವ್ಯಮಾರ್ಗವನ್ನು ಕನ್ನಡಿಗರು ಈ ಸಣ್ಣಗ್ರಂಥದಿಂದ ಸ್ವಲ್ಪಮಟ್ಟಿಗೆ ತಿಳಿಯಬಹುದು' ಸಾಮಾನ್ಯವಾಗಿ ಕವಿತೆಗೆ ಅಗತ್ಯವಾದ ವಿಶ್ವ ಕವಿತಾ ವಿಷಯಗಳಾದ ಯುದ್ಧ, ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿ ಸೌಂದರ್ಯ, ಮಾನವ ಸಹಜವಾದ ರಾಗ ದ್ವೇಷ ಪುರುಷಾರ್ಥಗಳು ಮುಂತಾದ ವಸ್ತುಗಳನ್ನು ಕುರಿತು ಇತರ ದೇಶದ ಕವಿಗಳು ಸಹಜವಾದ ಭಾಷೆಯಲ್ಲಿ, ಆಡಂಬರವಿಲ್ಲದ, ಸಹಜಸುಂದರವಾಗಿ ಯಾವರೀತಿ ಅಭಿವ್ಯಕ್ತಿಸಿದ್ದಾರೆ ಎನ್ನುವುದನ್ನು ಕನ್ನಡದ ಕವಿಗಳು ಪರಾಮರ್ಶಿಸಿ ಪಾರಂಪರಿಕವಾದ ಕಾವ್ಯಕಿಂತ ಹೊಸರೀತಿಯ ಕಾವ್ಯರಚನೆಯಲ್ಲಿ ತೊಡಗಲಿ, ಯಶಸ್ಸನ್ನು ಕಾಣಲಿ ಎನ್ನುವುದು. 'ಸಾಮಾನ್ಯವಾಗಿ ಪದಪ್ರಯೋಗ, ಶೈಲಿ, ಛಂದಸ್ಸು, ಭಾವ, ರಸ, ಇವೆಲ್ಲವೂ ಮೂಲಕವಿಯ ವ್ಯಕ್ತಿತ್ವವನ್ನೇ ಅನುಕರಿಸಿವೆ'. ಕನ್ನಡದ ಜಾಯಮಾನವನ್ನು ಮೀರದೆ ಎಷ್ಟರ ಮಟ್ಟಿಗೆ ಛಂದಸ್ಸು ಇಂಗ್ಲಿಷ್ ಛಂದಸ್ಸುಗಳನ್ನು ಹೋಲುವುದೋ ಅಷ್ಟರ ಮಟ್ಟಿಗೆ ಆ ಪದ್ಯಗಳನ್ನು ಕನ್ನಡಕ್ಕೆ ಇಳಿಸುವುದಕ್ಕೆ ಪ್ರಯತ್ನಪಟ್ಟಿರುತ್ತೇನೆ. ನಮ್ಮ ಹೆಣ್ಣಾದ ಕನ್ನಡ ನುಡಿ ಹಾಗೂ ಪಡುವ ಕಡಲ ಹೊನ್ನ ಹೆಣ್ಣಾದ ಇಂಗ್ಲೀಷ್ ಭಾಷೆ, ತಮ್ಮನ್ನು ಒಲಿಸಿ, ನಲಿಸಿ, ಕಲಿಸಿ ಕುಣಿಸುತ್ತಿದ್ದಾಗ,

"ಇವಳು ಸೊಬಗನವಳು ತೊಟ್ಟು
ನೋಡಬಯಸಿದೆ;
ಅವಳ ತೊಡುಗೆ ಇವಳಿಗಿಟ್ಟು
ಹಾಡ ಬಯಸಿದೆ"

ಎಂದು ಶ್ರೀಕಂಠಯ್ಯನವರು 'ಕಾಣಿಕೆ' ಕವಿತೆಯಲ್ಲಿ ಹೇಳಿಕೊಂಡಿದ್ದಾರೆ.

ಕಾಲಾನುಕ್ರಮ ಹಾಗೂ ಮಹತ್ವದ ದೃಷ್ಟಿಯಿಂದ ಶ್ರೀಯವರ 'ಇಂಗ್ಲಿಷ್ ಗೀತೆಗಳು' ಗ್ರಂಥ ರೂಪದಲ್ಲಿ ಪ್ರಕಟವಾಗುವುದಕ್ಕೆ ಮುಂಚೆ ೧೯೦೯ ರಿಂದ ೧೯೨೪ರ ನಡುವಿನ ಅಂತರದಲ್ಲಿ 'ವಿದ್ಯಾವಾಹಿನಿ' 'ಗ್ರಂಥಮಾಲೆ' ಮತ್ತು 'ಕರ್ನಾಟಕ ಜನಜೀವನ' ಇವುಗಳಲ್ಲಿ ಪ್ರಕಟವಾಗಿದ್ದುವು. ಈ ಸಂಕಲನದಲ್ಲಿ ೩೦ ಮಂದಿ ಪ್ರಸಿದ್ಧ ಇಂಗ್ಲಿಷ್ ಕವಿಗಳಾದ ಷೆಲ್ಲಿ, ವರ್ಡ್ಸ್‌ವರ್ತ್, ಬ್ರೌನಿಂಗ್, ಟೆನಿಸನ್, ಸ್ಕಾಟ್, ಕಾಂಬೆಲ್, ಕೂಪರ್, ಬೈರನ್, ಷೇಕ್ಸ್‌ಪಿಯರ್, ಮುಂತಾದವರ ೫೮ ಕವಿತೆಗಳೂ, ಅಷ್ಟೇನು ಪ್ರಸಿದ್ಧರಲ್ಲದ ಇಬ್ಬರ ೨ ಕವಿತೆಗಳೂ ಶ್ರೀಯವರ ಸ್ವಂತ ರಚನೆಗಳಾದ 'ಕಾಣಿಕೆ', 'ಭರತಮಾತೆಯ ವಾಕ್ಯ' ಮತ್ತು 'ಮೈಸೂರು ಮಕ್ಕಳು' ಮೂರು ಕವಿತೆಗಳು ಸೇರಿ ಒಟ್ಟು ೬೩ ಕವಿತೆಗಳು ಸೇರಿವೆ.

'ಇಂಗ್ಲಿಷ್ ಗೀತೆಗಳು', ಹೊಸಗನ್ನಡ ಕಾವ್ಯಮಾಸದ ಪ್ರಥಮ ಕೋಗಿಲೆ. ಇಂಗ್ಲಿಷ್ ಕಾವ್ಯದ ಪ್ರೇರಣೆಯಿಂದ ಕನ್ನಡದಲ್ಲಿ ಹೊಸರೂಪಗಳನ್ನು ಆವಿಷ್ಕಾರ ಮಾಡುವುದು ಹೇಗೆ ಎನ್ನುವುದೇ ಆಗಿತ್ತು. ಈ ದೃಷ್ಟಿಯಿಂದ ಶ್ರೀಯವರ ಇಂಗ್ಲಿಷ್ ಗೀತೆಗಳನ್ನು ಕೇವಲ ಅನುವಾದ ಅನ್ನುವುದಕ್ಕಿಂತ ಭಾರತೀಯ ಪರಿಸರದಲ್ಲಿ ಕನ್ನಡ ಕಾವ್ಯ ರೂಪುಗೊಳ್ಳಬೇಕಾದ ರೀತಿಯ ನಿದರ್ಶನ ಹಾಗೂ ನಿರ್ದೇಶನದ ಪ್ರಯೋಗಗಳೆಂದು ಭಾವಿಸುವುದು ಹೆಚ್ಚು ಸೂಕ್ತವಾದುದು' ಎಂದು ರಾಷ್ಟ್ರಕವಿ ಜಿ.ಎಸ್.ಎಸ್. ಅಭಿಪ್ರಾಯ ಪಡುತ್ತಾರೆ.

ಈ ಗುರಿಯ ಸಾಧನೆಯಲ್ಲಿ ಅವರು ಪೂರ್ಣ ಯಶಸ್ಸು ಪಡೆದರು. ಅವರ ಪ್ರಯೊಗ ಕನ್ನಡ ಛಂದಸಿನಲ್ಲಿ ಹೊಸಮಾರ್ಗವನ್ನು ನಿರ್ಮಾಣ ಮಾಡಿತು. ಅಲ್ಲದೆ ಕಾವ್ಯವಸ್ತುವಿನ ಆಯ್ಕೆಯ ವಿಷಯದಲ್ಲಿಯೂ ಶ್ರೀಯವರು ಕ್ರಾಂತಿ ಕಾರಿಯಾದರು. ಕವಿಸಮಯ, ಅಲಂಕಾರ, ಶಬ್ದಾಲಂಕಾರ, ಸಂಸ್ಕೃತ ಭೂಯಿಷ್ಠವಾದ ಭಾಷಾಶೈಲಿ ಮುಂತಾದ ಸಂಕೋಲೆಗಳನ್ನು ಕಡಿದು ಹಾಕಿ ಅಚ್ಚ ಕನ್ನಡ ನುಡಿಯಲ್ಲಿ, ಕನ್ನಡ ಛಂದಸ್ಸಿನಲ್ಲಿ ವಸ್ತುನಿಷ್ಟವಾದ ಭಾವಗೀತೆಗಳನ್ನು ರಚಿಸುವ ಕನ್ನಡ ಕವಿಗಳ ಹೊಸ ಪೀಳಿಗೆಯನ್ನು ಹುಟ್ಟುಹಾಕಿದ ಕಾರಣಪುರುಷರು ಶ್ರೀ ಅವರು.

'ಇಂಗ್ಲಿಷ್ ಗೀತೆಗಳಲ್ಲಿ ಭಾಷಾಂತರದ ಕವಿತೆಗಳು, ರೂಪಾಂತರದ ಕವಿತೆಗಳು ಹಾಗೂ ಇಂಗ್ಲಿಷ್ ಗೀತೆಯ ಭಾವವನ್ನು ಗ್ರಹಿಸಿ ಕನ್ನಡ ಪರಿಸರಕ್ಕೆ ಸೂಕ್ತವಾದ ರೀತಿಯಲ್ಲಿ ರಚಿತವಾದ ಕವಿತೆಗಳು ಇವೆ. ಶ್ರೀಯವರ ಇಂಗ್ಲಿಷ್ ಗೀತೆಗಳು ಶ್ರೀ ಅವರ 'ಪ್ರಯೋಗ ಪರಿಣತಮತಿ' ಗೆ ಇಲ್ಲಿ ಅನೇಕ ಉದಾಹರಣೆಗಳು ದೊರೆಯುತ್ತವೆ. ಶ್ರೀಯವರು ಅಕ್ಷರಶಃ ಭಾಷಾಂತರ ಮಾಡದೆ ಮೂಲದ ಭಾವ ವೈಖರಿಯನ್ನು ಯಥಾವತ್ತಾಗಿ ಕನ್ನಡದಲ್ಲಿ ತರಲು ಪ್ರಯತ್ನಮಾಡಿದ್ದಾರೆ. ಮೂಲದ ಹೆಸರುಗಳನ್ನು ಸಂದರ್ಭಗಳನ್ನೂ ಉಕ್ತಿಗಳನ್ನೂ ನಮ್ಮ ಆವರಣಕ್ಕೆ ಹೊಂದಿಕೊಳ್ಳುವಂತೆ ಅಲ್ಲಲ್ಲಿ ಮಾರ್ಪಡಿಸಿದ್ದರೂ ಮೂಲದ ತಿರುಳಿಗೆ ಯಾವುದೇ ಚ್ಯುತಿಬಾರದ ಹಾಗೆ ಎಚ್ಚರವಹಿಸಿದ್ದಾರೆ. ಈ ದೃಷ್ಟಿಯಿಂದ ಶ್ರೀಯವರ ಅನುವಾದಗಳನ್ನು ಮೂರು ರೀತಿ ವಿಭಾಗಿಸಬಹುದು. ೧) ಪ್ರಯೋಗಗಳು ೨)ರೂಪಾಂತರಗಳು ೩)ಸೃಜನಾತ್ಮಕ ಅನುವಾದಗಳು ಅಥವಾ ಮರುಸೃಷ್ಟಿಗಳು.

ಪ್ರಯೋಗಗಳಲ್ಲಿ ಶ್ರೀಯವರು ಶಿಸ್ತುಬದ್ಧವಾದ ನಿಯಮವನ್ನು ಅನುಸರಿಸಿ ಮೂಲವನ್ನು ಕನ್ನಡಿಸುವಾಗ ಕನ್ನಡದ ಜಾಯಮಾನದ ಬಗೆಗೆ ವಿಶೇಷ ಗಮನವನ್ನು ನೀಡಿದ್ದಾರೆ. ಇದಕ್ಕೆ ಒಂದು ಉದಾಹರಣೆಯನ್ನು ನೀಡುವುದಾದರೆ,

ಷೇಕ್ಸಪಿಯರ್‌ನ

'Under the Green Wood Tree' ಕವಿತೆಯ ಅನುವಾದವನ್ನು ಗಮನಿಸಬಹುದು.

ಇಲ್ಲಿ Green Wood- 'ಅಡವಿ ಮರ'ವಾದರೆ, 'winter' 'ಕೊರೆಚಳಿ'ಯಾಗಿದೆ, 'Rough Weather' 'ಬಿರುಗಾಳಿ'ಯಾದರೆ, 'Ambition' ಆಸೆಬಲೆ' ಯಾಗಿದೆ. 'To live in the Sun'ಬಿಸಿಲಕಾಯುತ ಮಲಗು'ವಾಗಿ ಕಾಣಿಸಿಕೊಂಡಿದೆ. ಶ್ರೀಯವರು ಮೂಲದ ತಿರುಳನ್ನು ಗ್ರಹಿಸಿ ಬಿಡಿಬಿಡಿಯಾದ ಈ ಬಗೆಯ ಮಾತುಗಳ ವಿಷಯದಲ್ಲಿ ಮಾತ್ರವಲ್ಲದೆ ಇಡಿಯಾದ ಭಾವಗಳ ಬೆಸುಗೆಯಲ್ಲಿಯೂ (ಭಾವ - ಭಾಷೆಯ) ಕನ್ನಡದಲ್ಲಿ ದೃಢವಾಗಿ ನಿಲ್ಲುವಂತೆ ನೋಡಿಕೊಂಡಿದ್ದಾರೆ.

ವರ್ಡ್ಸ್‌ವರ್ತ್ ಕವಿಯ 'written in March' ಕವನದ ಕೆಲವು ಸಾಲುಗಳನ್ನು ಹಾಗೆಯೇ ಶ್ರೀಯವರ ಭಾಷಾಂತರವನ್ನೂ ಗಮನಿಸಬಹುದು:

" The Cattle are Grazing,
Their heads never raising,
There are forty feeding like one !"

"ಕೊರಳೆತ್ತಿ ಮೈಮರೆತು
ಹರಡಿದೆಳಹಸುರಾದ
ಗರಿಕೆಯನು ಮೇಯದೆಯೆ ಮಂದೆ ಇಹುದು,"

ಇದು ಅಕ್ಷರಶಃ ಭಾಷಾಂತರವಲ್ಲ. ಶ್ರೀಯವರೇ ಇದನ್ನು ಸರಿಯಾದ ಭಾಷಾಂತರವಲ್ಲವೆಂದು ಒಪ್ಪಿಕೊಂಡಿದ್ದಾರೆ. ಆದರೆ ಮೂಲದ ಭಾವವನ್ನು ಸಜೀವವಾಗಿ ಕನ್ನಡೀಕರಿಸಲು ಪ್ರಯತ್ನಮಾಡಿದ್ದಾರೆ. ಶ್ರೀಯವರು ಈ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆ. ಅವರ ಉದ್ದೇಶವೂ ಅದೇ ಆಗಿತ್ತು.

Nash ಕವಿಯ 'Spring' ಎನ್ನುವ ಕವಿತೆಯನ್ನು ಶ್ರೀಯವರು 'ವಸಂತ' ಎಂದು ಭಾಷಾಂತರಿಸಿದ್ದಾರೆ. ಇದು ಶ್ರೀಯವರ ಅನುವಾದ ವಿಧಾನದ ಇನ್ನೊಂದು ಮುಖ.'ಇಡೀ ಕವನವೇ ಅನುವಾದಕಲೆಯ ಪರಿಣತಿಯ ಫಲ' ಎಂದು ಡಾ. ಪ್ರಭುಶಂಕರ ಅವರ ಬಣ್ಣಿಸಿದ್ದಾರೆ.

'Spring, the sweet spring, is the year's pleasant king

Then blossoms each thing, then maids dance in a ring;

Cold doth not sting, the pretty birds do sing,

Cuckoo, jug-jug, pu-We, to-witta-Woo!

The Palm and may make country houses gay,

Lamb frisk and play, the shepherds pipe all day,

And we hear aye birds tune this merry day,

Cuckoo, jug-jug, pu-We, to-witta-Woo!

The fields breathe sweet, the daisies kiss our feet,

young lovers meet, old wives a sunning sit,

In every street these tunes our ears do greet,

Cuckoo, jug-jug, pu-We, to-witta-Woo!

Spring the sweet spring!

ಕನ್ನಡದ ಅನುವಾದ ಮೂಡಿಬಂದಿರುವ ರೀತಿಯನ್ನು ಗಮನಿಸೋಣ:

ವಸಂತ ಬಂದ, ಋತುಗಳ ರಾಜ ತಾ ಬಂದ,

ಚಿಗುರನು ತಂದ, ಹೆಣ್ಣುಗಳ ಕುಣಿಸುತ ನಿಂದ,

ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚೆಂದ,

ಕೂವೂ, ಜಗ್ಜಗ್, ಪುವ್ವೀ, ಟೂವಿಟ್ಟವೂ!

ಕುರಿನೆಗೆದಾಟ, ಕುರುಬರ ಕೊಳಲಿನೂದಾಟ

ಇನಿಯರ ಬೇಟ, ಬನದಲಿ ಬೆಳದಿಂಗಳೂಟ,

ಹೊಸ ಹೊಸ ನೋಟ, ಹಕ್ಕಿಗೆ ನಲುವಿನ ಪಾಟ,

ಕೂವೂ, ಜಗ್‌ಜಗ್, ಪುವ್ವೀ, ಟೂವಿಟ್ಟವೂ!

ಮಾವಿನ ಸೊಂಪು, ಮಲ್ಲಿಗೆ ಬಯಲೆಲ್ಲ ಕಂಪು,

ಗಾಳಿಯ ತಂಪು, ಜನಗಳ ಜಾತ್ರೆಯ ಗುಂಪು,

ಕಿವಿಗಳಿಗಿಂಪು ಹಕ್ಕಿಗಳುಲುಹಿನ ಪೆಂಪು,

ಕವೂ, ಜಗ್‌ಜಗ್, ಪುದ್ವೀ, ಟೂವಿಟ್ಟವೂ!

ಬಂದ ವಸಂತ-ನಮ್ಮ ರಾಜ ವಸಂತ!

ಇಲ್ಲಿ ಮೂಲದಲ್ಲಿ ವಸಂತದಲ್ಲಿ ಆಗುವ ಋತುವರ್ತನೆಯ ಚಿತ್ರಕ್ಕೆ ಬದಲಾಗಿ, ಪ್ರಕೃತಿಯಲ್ಲಿ ವಸಂತ ಎಸಗುವ ಪವಾಡಗಳ ಚಿತ್ರ ಅನುವಾದದಲ್ಲಿ ನಮಗೆ ಎದುರಾಗುತ್ತದೆ. ಅಲ್ಲಿ ಹಿನ್ನೆಲೆಯಾಗಿ ನಿಲ್ಲುವ ಪ್ರಕೃತಿಯ ಶಕ್ತಿ ಇಲ್ಲಿ ಚೈತನ್ಯರೂಪಿ ವ್ಯಕ್ತಿಯಾಗಿ ಕಾಣುತ್ತದೆ. ಅಲ್ಲಿ ಋತುವಿನಲ್ಲಿ ಕಾಣುವ ಬದಲಾವಣೆಗೆ ಬದಲಾಗಿ ಪವಾಡದಂತೆ ಪರಿವರ್ತನೆಯಾಗಿದೆ. ಇಷ್ಟಾದರೂ ಇದು ಮೂಲದ ವಿರುದ್ಧವಾಗಿ ಇಲ್ಲ. ಬದಲಾಗಿ ಭಾರತೀಕರಣಗೊಂಡಿದೆ. ಇದು ಶ್ರೀಯವರು ಮಾಡಿಕೊಂಡ ಬದಲಾವಣೆ, ಇಂಥ ಬದಲಾವಣೆಗಳೂ ಕೆಲವೊಮ್ಮೆ ಪ್ರಶ್ನಾರ್ಹವೂ ಆಗಬಹುದು. 'ಭಾವಗೀತೆಯ ಸಾಹಿತ್ಯದಲ್ಲಿ ಅತ್ಯುನ್ನತ ಶ್ರೇಣಿಯ ಕವನವೆಂದು ಹೆಸರಿಸಬಹುದಾದ ಪೆಲ್ಲಿಯ 'To a Skylark' ಕವನದ, ಶ್ರೀಯವರ 'ಬಾನಾಡಿ'ಯ ಕೆಲವು ಸಾಲುಗಳನ್ನು ಗಮನಿಸಬಹುದು.

'Hail to thee blithe spirt!
Bird thou never wert,
That from heaven, or near it
pourest thyfull heart
In profuse strains of unpremeditated art''
ಇದನ್ನು ಶ್ರೀಯವರು ಹೀಗೆ ಅನುವಾದಿಸಿದ್ದಾರೆ:
'ಆರು ನೀನೆಲೆ ಹರುಷ ಮೂರುತಿ?
ಹಕ್ಕಿಯೆಂಬರೆ ನಿನ್ನನು!
ತೋರಿ ದಿವಿಜರು ಸುಳಿವ ಬಳಿ,ಸುಖ
ವುಕ್ಕಿ ಬಹನಿನ್ನೆದೆಯನು
ಹಾರಿ ನೆನೆಯದ ಕಲೆಯ ಕುಶಲದ ಭೂರಿಗಾನದೊಳೆರೆಯುವೆ'

ಭಾರತೀಯ ಪರಿಸರಕ್ಕೆ ಇಂಗ್ಲಿಷ್ ಗೀತೆಗಳನ್ನು ರೂಪಾಂತರಿಸುವಾಗ ಪೂರ್ವ ಪಶ್ಚಿಮಗಳನ್ನು ಎಷ್ಟು ಸುಂದರವಾಗಿ ಬೆಸೆಯಬಹುದು ಎನ್ನುವುದಕ್ಕೆ ಅನೇಕ ಉದಾಹರಣೆಗಳನ್ನು ನೀಡಬಹುದು. ಅವುಗಳು ಕನ್ನಡದ ಸ್ವತಂತ್ರ ರಚನೆಗಳೋ ಎನ್ನುವಂತೆ ಭಾಸವಾಗುತ್ತವೆ. ರಾಬರ್ಟ್ ಬರ್ನ್‌ನ ಕವಿಯ 'ಡಂಕನ್ ಗ್ರೇ' (Duncan Gray) ಕವಿತೆಯು ಕನ್ನಡದಲ್ಲಿ "ಮಾದಮಾದಿ' ಯಾಗಿ ರೂಪಾಂತರಗೊಂಡಿದೆ. ಮೂಲದ ಈ ಸಾಲುಗಳನ್ನು ಗಮನಿಸಬಹುದು.

"Duncan fleech'd and Duncan praye'd;
Meg was deaf as Ailsa craig;
Duncan righ'd baith out and in,
Grat his een baith bleer't and blin'
Spak O' lowpin ower a linn!"

ಶ್ರೀಯವರು ಹೀಗೆ ರೂಪಾಂತರಿಸಿದ್ದಾರೆ.

ಕಯ್ಯಮುಗಿದ, ಕಾಲಹಿಡಿದ, ಹಹ್ಹ! ಏನು ಬೇಟವೋ!

ರೊಯ್ಯನೊದೆಯೆ, ಹಲ್ಲ ಕಡಿದ,

ಬೆಚ್ಚಗುಸಿರ ಬಿಟ್ಟ ಮಾದ, ಅತ್ತ 'ಕಂಗೆಡುತ್ತ' ಸೀದ,
ಹೊಳೆಯ ಬೀಳಲೆಂದು ಹೋದ! ಹಹ್ಹ! ಏನು ಬೇಟವೋ!

ಇದೇ ರೀತಿ 'ಮುದಿಯ ರಾಮೇಗೌಡ 'ಕಾರಿಹೆಗ್ಗಡೆಯ ಮಗಳು' 'ಕನಕಾಂಗಿ' 'ಬಾನಾಡಿ' 'ಮುದ್ದಿನ ಕುರಿಮರಿ' ಮುಂತಾದ ಕವಿತೆಗಳು ಮೂಲ ಕವನಗಳಿಗಿಂತ ಭಾವನೆಯಲ್ಲಿ ಹೆಚ್ಚು ಸ್ಪಷ್ಟವಾಗಿ, ಸುಭಗವಾಗಿ, ಹೃದಯ ಸ್ಪರ್ಶಿಯಾಗಿ ಹೊರಬಂದಿವೆ. ಇವುಗಳನ್ನು ಮರು ಸೃಷ್ಟಿಯೆನ್ನಬಹುದು.

ಅನುವಾದಗಳು ಎನ್ನಬಹುದಾದ ಕವಿತೆಗಳು ಶ್ರೀಯವರ ಸೃಜನಾತ್ಮಕ ಪ್ರತಿಭೆಗೆ ಒಳ್ಳೆಯ ಉದಾಹರಣೆಗಳಾಗಿವೆ. ಮೂಲವೆ ಮರುಹುಟ್ಟು ಪಡೆದಿವೆಯೋ ಎನ್ನುವಂಥ ಉತ್ತಮ ಗೀತೆಗಳನ್ನು ರಚಿಸಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ New man ನ 'Lead,Kindly Light' ಎನ್ನುವ ಕವಿತೆಯ ಅನುವಾದ. ಈ ಕವಿತೆಯು ಮೂಲದ ಗಾಂಭೀರ್ಯ, ಆಳವಾದ ಭಕ್ತಿಭಾವ, ಧ್ವನಿ ಇವುಗಳನ್ನು ಪರಿಣಾಮಕಾರಿಯಾಗಿ ಹಿಡಿದಿದೆ. ಇದೆ ರೀತಿ 'ಮುದ್ದಿನ ಕುರಿಮರಿ', 'ದುಃಖ ಸೇತು', ಮುಂತಾದುವನ್ನು ಉದಾಹರಿಸಬಹುದು. ಇಲ್ಲಿಯ ಅನುವಾದದ ಭಾಷೆ ಕ್ರಾಂತಿಕಾರಕವಾದುದು. ಇಂಗ್ಲಿಷ್ ಗೀತೆಗಳು' ಅನೇಕ ದೃಷ್ಟಿಯಿಂದ ಅಪೂರ್ವವಾದ ಅಪರೂಪದ ಸಂಕಲನ.

ಹೊಸಗನ್ನಡ ಸಾಹಿತ್ಯದ ಅಂದಿನ ಸಂದರ್ಭದಲ್ಲಿ ಕೇವಲ ಸೃಜನಶೀಲ ಸಾಹಿತಿಯಾಗದೆ ಕನ್ನಡದ ಹಲವು ಚಟುವಟಿಕೆಗಳಿಗೆ ತಮ್ಮನ್ನು ತೊಡಗಿಸಿಕೊಳ್ಳುವುದು ಮುಖ್ಯವೆಂದು ಭಾವಿಸಿದ ಬಿ.ಎಂ.ಶ್ರೀಯವರು ಅನುವಾದ, ಅಳವಡಿಕೆ, ರೂಪಾಂತರ ಇತ್ಯಾದಿ ಪ್ರಯೋಗಗಳ ಮೂಲಕ ನವೋದಯ ಸಾಹಿತ್ಯದ ಹಲವು ಮೊದಲ ರೂಪಗಳಾದ ಪ್ರಗಾಥ, ಭಾವಗೀತೆ, ರುದ್ರನಾಟಕ, ಸಾಹಿತ್ಯ ಚರಿತ್ರೆ, ಸಾಹಿತ್ಯ ವಿಮರ್ಶೆಗಳನ್ನು ಸಿದ್ಧಪಡಿಸುವುದರಲ್ಲಿ ನಿರತರಾಗಿದ್ದರು. ಅಷ್ಟೇ ಅಲ್ಲ ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ಹೊಸಗನ್ನಡ ಲೇಖಕರ ಒಂದು ಪರಂಪರೆಯನ್ನೇ ನಿರ್ಮಿಸಿದರು. ಛಂದಸ್ಸು, ಗ್ರಂಥಸಂಪಾದನೆ, ಲಿಪಿಸುಧಾರಣೆ, ಸಾಹಿತ್ಯ ಚರಿತ್ರೆ ಸಾಹಿತ್ಯ ವಿಮರ್ಶೆ, ಜಾನಪದ, ಹೀಗೆ ವಿವಿಧ ಕ್ಷೇತ್ರಗಳಲ್ಲಿ ಅವರು ಹಾಕಿಕೊಟ್ಟ ಹೊಸ ದಾರಿಗಳು - ಈ ಎಲ್ಲವನ್ನು ನೆನೆದರೆ, ಅವರನ್ನು ಹೊಸಗನ್ನಡ ಆಚಾರ್ಯಪುರುಷರೆಂದು ಕರೆದಿರುವುದು ಉತ್ಪ್ರೇಕ್ಷೆಯಲ್ಲವೆಂದು ಯಾರಿಗಾದರೂ ಅನ್ನಿಸುತ್ತದೆ.

'ಇಂಗ್ಲಿಷ್ ಗೀತೆ'ಗಳು ಬರುವುದಕ್ಕೆ ಮುಂಚೆ ಕನ್ನಡ ಕವಿತೆಯ ಸ್ಥಿತಿಯನ್ನು ನೆನೆದರೆ ಅದರ ಪ್ರಾಮುಖ್ಯತೆ ಮನದಟ್ಟಾಗುತ್ತದೆ. ಕನ್ನಡದಲ್ಲಿ ಪ್ರೌಢ ಕಾವ್ಯ ರಚನೆ ಸುಮಾರು ೧೭೦೦ ರ ವೇಳೆಗೆ, ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಕೊನೆಯ ವೇಳೆಗೆ ನಿಂತುಹೋಗಿತ್ತು. ಅಲ್ಲಿಂದ ಮುಂದೆ ರಾಜಕೀಯದಲ್ಲಿ ಕಾಣಿಸಿಕೊಂಡಂತೆ ಅನೇಕ ದೌರ್ಬಲ್ಯಗಳು ಸಾಹಿತ್ಯದಲ್ಲಿಯೂ ಕಾಣಿಸಿಕೊಂಡಿದ್ದುವು. ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗದಲ್ಲಿ ಗದ್ಯವೂ, ಕೊನೆಯ ಭಾಗದಲ್ಲಿ ನಾಟಕವೂ ಕಾಣಿಸಿಕೊಂಡಿತಾದರೂ ಪೂರ್ಣಪ್ರಮಾಣದಲ್ಲಿ ಅರಳಲಿಲ್ಲ. ಮುದ್ದಣ

ಕವಿಯೂ 'ಪದ್ಯಂ ವದ್ಯಂ ಗದ್ಯಂ ಹೃದ್ಯಂ' ಎಂದು ನಿರ್ಧರಿಸಿ ಹಳಗನ್ನಡ ಗದ್ಯದಲ್ಲಿ ತನ್ನ ಕಾವ್ಯ ರಚನೆಯನ್ನು ಮಾಡಿ ಪದ್ಯದ ಕಾಲ ಮುಗಿದಿದೆ ಎನ್ನುವುದನ್ನು ಸಾಬೀತುಪಡಿಸಿದನು. ಪದ್ಯವನ್ನು ಬರೆಯುವವರು ಬಹಳ ಕಡಿಮೆ, ಅದನ್ನು ಓದಿ ಆದರಿಸುವವರು ಇನ್ನೂ ಕಡಿಮೆ ಎನ್ನುವಂತಾಗಿತ್ತು. ಅಂತಹ ಸಮಯದಲ್ಲಿ ಬಂದ 'ಇಂಗ್ಲಿಷ್ ಗೀತೆ'ಗಳು ಕನ್ನಡಕ್ಕೆ ಒಳ್ಳೆಯ ಕೊಡುಗೆಯಾಯಿತು.

'ಇಂಗ್ಲಿಷ್ ಗೀತೆ'ಗಳು ಕನ್ನಡ ಛಂದಸ್ಸಿನಲ್ಲಿ ಹೊಸದೊಂದು ರಾಜ ಮಾರ್ಗವನ್ನು ತೆರೆದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶ್ರೀ ಅವರ ಹೆಸರು ಚಿರಸ್ಮರಣೀಯವಾಗಿ ನಿಲ್ಲುವಂತೆ ಮಾಡಿದೆ. ವೃತ್ತಗಳು (ಸಂಸ್ಕೃತದ) ಪ್ರಾಕೃತದ ಕಂದಪದ್ಯಗಳು ಮನೆಮಾಡಿಕೊಂಡಿದ್ದ ಕನ್ನಡ ಛಂದಸ್ಸೆಂದರೆ ಇವೇ ಅನ್ನುವಂತೆ ಆಗಿತ್ತು. ದೇಶೀಯ ಪದ್ಯಜಾತಿಗಳಾದ ತ್ರಿಪದಿ, ಹಿರಿಯಕ್ಕರ, ಮೊದಲಾದವೂ ಮೂಲತಃ ಪ್ರಾಕೃತದಿಂದಲೇ ಬಂದ ರಗಳೆಗಳು ಎಲ್ಲೋ ಒಂದೊಂದು ಕಡೆ ಒಮ್ಮೊಮ್ಮೆ ಕಾಣಿಸಿಕೊಳ್ಳುತ್ತಿದ್ದವು. ಸಂಸ್ಕೃತ ವೃತ್ತಗಳು ಹಳಗನ್ನಡಕ್ಕೆ ಒಗ್ಗಲಿಲ್ಲ. ನಡುಗನ್ನಡದ ಕಾಲದಲ್ಲಂತೂ ಚಲಾವಣೆಯಲ್ಲಿರಲಿಲ್ಲ, ಕಂದವಂತೂ ಪ್ರಚಾರದಲ್ಲಿಯೇ ಇರಲಿಲ್ಲ. ಇನ್ನು ಮುಂದೆ ಮೂರು ನಾಲ್ಕು ಐದು ಮಾತ್ರೆಯ ಗಣಗಳು ಪ್ರಬಲವಾಗಿ ಮುಖ್ಯವಾಗಿ ಷಟ್ಪದಿಗಳು ರೂಪುಗೊಂಡವು. ರಗಳೆಗಳು ಹರಿಹರನ ಕಾಲದಿಂದ ಮುಂದಕ್ಕೆ ಕಾಣಿಸಿಕೊಳ್ಳಲೇ ಇಲ್ಲ. ಸಾಂಗತ್ಯವೊಂದು ಹಿಂದಿನ ದ್ರಾವಿಡ ಛಂದಸ್ಸಿನ ಕುರುಹಾಗಿ ನೆಲೆನಿಂತಿತು. ಯಕ್ಷಗಾನದಲ್ಲಿ ಒಂದೆರಡು ಹೊಸ ರೂಪಗಳು ಅಲ್ಲಲ್ಲಿ ಕಾಣಿಸಿಕೊಂಡವು. ಗಣಗಳ ನಿಯಮ, ಆದಿ-ಅಂತ್ಯ ಪ್ರಾಸಗಳ ನಿರ್ಬಂಧ, ಇಂತಹ ಇಕ್ಕಟ್ಟಿನ ಸ್ಥಿತಿಯಲ್ಲಿ ಕವಿ ತನ್ನ ಭಾವನೆಗಳಿಗೆ ತಕ್ಕ ರೂಪಕೊಡುವುದು ಹೇಗೆ? "ಭಾವಕ್ಕೆ ಸಹಜ ಕವಚವೋ ಎಂಬಂತೆ ಪದ್ಯ ರೂಪ ಅಳವಟ್ಟು, ಅದರ ಗತಿಗೆ ಅನುಸಾರವಾಗಿ ತಾನೂ ಸಾಗಿ, ಇಲ್ಲಿ ಹ್ರಸ್ವವಾಗಿ ಅಲ್ಲಿ ದೀರ್ಘವಾಗಿ ಇಲ್ಲಿ ಮೊರೆದು ಅಲ್ಲಿ ಸುಯ್ದು ಇಲ್ಲಿ ನಟಿಯಂತೆ ಬಳುಕಿ ಅಲ್ಲಿ ಬಾಣದಂತೆ ಹಾಯ್ದು ಇಲ್ಲಿ ಪ್ರಸಾದ ಸೋಂಪನ್ನು ಮುಡಿದು ಅಲ್ಲಲ್ಲಿ ನಿರಾಭರಣ ಸೌಂದರ್ಯವನ್ನು ಮೆರೆದು, ಸೊಗಸನ್ನು ಬೀರಬೇಡವೆ'? ಎಂದು ತೀನಂಶ್ರೀ ಅವರು ವಿವರಿಸಿದ್ದಾರೆ. ಇಂಗ್ಲಿಷ್ ಛಂದಸ್ಸಿನಲ್ಲಿ ಇದು ಚೆನ್ನಾಗಿ ಸಾಧ್ಯವೆಂಬುದನ್ನು ಶ್ರೀ ಅವರು ಬಲ್ಲವರಾಗಿದ್ದರು.

ಕನ್ನಡ ನುಡಿಯ ಜಾಯಮಾನಕ್ಕೆ ರಗಳೆ, ಷಟ್ಪದಿಯ ಕಾಲದಿಂದಲೂ ಒಗ್ಗಿ ಹದವಾಗಿ ಪಳಗಿದ ಮಾತ್ರಾಗಣಗಳನ್ನೇ ಉಪಯೋಗಿಸಿ ಚರಣವಿನ್ಯಾಸ, ಪ್ರಾಸವಿನ್ಯಾಸಗಳನ್ನು ಮಾತ್ರ ಬಗೆಬಗೆಯಾಗಿ ಏರ್ಪಡಿಸಿ ಹೊಸ ಹೊಸ ಕಟ್ಟಡಗಳನ್ನು ಕಟ್ಟುವುದು ಸಾಧ್ಯವೆಂದು, ಉಚಿತವೆಂದು ಶ್ರೀ ಅವರು ಭಾವಿಸಿದ್ದರು. ಸಂಸ್ಕೃತ, ಕನ್ನಡ, ತಮಿಳು, ಇಂಗ್ಲಿಷ್ ಈ ಹಲವು ಭಾಷೆಗಳ ಛಂದಸ್ಸು ಬೆಳೆದ ಬಗೆಯನ್ನು ಅಭ್ಯಾಸ ಮಾಡಿದ್ದ ಬಿಎಂಶ್ರೀ ಅವರ ಸಂಯೋಜಕ ಪ್ರತಿಭೆಯೂ ಇದಕ್ಕೆ ಸಹಕಾರಿಯಾಗಿ ಇಂಗ್ಲಿಷ್ ಗೀತೆಗಳಲ್ಲಿ ಹೊಸ ಹೊಸ ಪದ್ಯಜಾತಿಗಳು, ಹೊಸ ಹೊಸ ಅಚ್ಚಿನಲ್ಲಿ ಎರಕಹೊಯ್ದು ಇಂಗ್ಲಿಷ್ ಮೂಲದ ರೂಪಗಳಿಗೆ ಸರಿಸಾಟಿಯಾಗಿ ನಿಂತಿವೆ! ಅಲ್ಲಿಯ ಛಂದೋವಿಲಾಸಗಳು ಇಲ್ಲಿಯೂ ಬಹುಮಟ್ಟಿಗೆ ಯಥಾವತ್ತಾಗಿ ಪ್ರತಿಬಿಂಬಿತವಾಗಿವೆ. ಆದರೂ ಕನ್ನಡದ ಜಾಯಮಾನಕ್ಕೆ ಭಂಗವುಂಟಾಗದಂತೆ ಎಚ್ಚರವಹಿಸಿದ್ದಾರೆ/ನೋಡಿಕೊಂಡಿದ್ದಾರೆ. ಇಂಗ್ಲಿಷ್ ಛಂದಸ್ಸಿಗೆ

ಮೂಲಭೂತವಾಗಿರುವ ಲಯಗಳು (Rhythms) ಕೂಡ ಕೆಲವು ಮಾತ್ರವೆ. ಆದರೆ ಗಣಗಳನ್ನು, ಚರಣಗಳನ್ನು ಜೋಡಿಸುವುದರಲ್ಲಿ ವಿವಿಧತೆಯೂ, ಪ್ರಾಸ ವಿಷಯದಲ್ಲಿ ಔಚಿತ್ಯವು ಅಲ್ಲಿ ಅತಿಶಯವಾಗಿ ವ್ಯಕ್ತವಾಗಿರುವುದರಿಂದ ಇಂಗ್ಲಿಷ್‌ನಲ್ಲಿ ಅನೇಕಾನೇಕ ಪದ್ಯಜಾತಿಗಳು ಏರ್ಪಟ್ಟು ಪ್ರಚುರವಾಗಿವೆ. ಈ ಎಲ್ಲಾ ಅನುಕೂಲವೂ ಕನ್ನಡಕ್ಕೂ ಉಂಟೆಂಬುದು 'ಇಂಗ್ಲಿಷ್ ಗೀತೆ' ಗಳಲ್ಲಿ ಚೆನ್ನಾಗಿ ಅಭಿವ್ಯಕ್ತವಾಗಿದೆ. ಇಲ್ಲಿಯ ಪದ್ಯಗಳಲ್ಲಿ ಮುಕ್ಕಾಲು ಪಾಲು ಮಾತ್ರಾಗಣಗಳ ತಳಹದಿಯ ಮೇಲೆ ನಿಂತಿವೆ. ೩, ೪, ೪, ೩+೪ ರ ಮಾತ್ರಾಗಣಗಳೆ ಆಗಿ ಕನ್ನಡಿಗರಿಗೆ ಪೂರ್ವಪರಿಚಿತ ಲಯಗಳೆ ಇವುಗಳಲ್ಲಿ ಮುಖ್ಯವಾಗಿ ಗೋಚರವಾಗುತ್ತವೆ.

## ಹೊಂಗನಸುಗಳು

### ರಾಜಾಭಿಮಾನ-ಕನ್ನಡಾಭಿಮಾನ

೧೯೪೩ರಲ್ಲಿ ಪ್ರಕಟವಾದ 'ಹೊಂಗನಸುಗಳು' ಶ್ರೀಯವರು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಸ್ವತಂತ್ರ ಕವನಗಳ ಸಂಗ್ರಹ. ಈ ಕವನ ಸಂಕಲನದಲ್ಲಿ ಹದಿನಾಲ್ಕು ಕವಿತೆಗಳಿವೆ. ಶ್ರೀಯವರ ಸ್ವತಂತ್ರ ರಚನೆಗಳು ಅವರ ಅನುವಾದ ಕೃತಿಗಳಿಗಿಂತ ಕಡಿಮೆ ಪ್ರಮಾಣದಲ್ಲಿರುವುದನ್ನು ಗಮನಿಸಬಹುದು. ಶ್ರೀಯವರು ಸ್ವಂತ ಕವಿತೆಗಳನ್ನು ಬರೆಯುವಾಗ, ಅನುವಾದ ಕೃತಿಗಳಿಗೆ ಪೂರಕವಾಗಿ ರಚಿಸಿದಂತೆ ಕಾಣುತ್ತದೆ. 'ಇಂಗ್ಲಿಷ್ ಗೀತೆ' ಗಳಲ್ಲಿ 'ಓಡ್'ಗಳನ್ನಾಗಲಿ, 'ಎಲಿಜಿ'ಗಳನ್ನಾಗಲಿ ಅವರು ಭಾಷಾಂತರಿಸಿಲ್ಲ. ಕನ್ನಡಕ್ಕೆ ಶ್ರೀಯವರು ಈ ಮಾದರಿಗಳನ್ನು ಸ್ವತಂತ್ರ ಕವಿತೆಗಳ ಮೂಲಕ ನೀಡಿದ್ದಾರೆ. ಪ್ರಗಾಥಗಳ ಅನುವಾದಕ್ಕಿಂತ ಸ್ವಂತ ರಚನೆಗಳು ಹೆಚ್ಚು ಸಮರ್ಥವಾಗಬಹುದೆಂದು ಭಾವಿಸಿರಬೇಕು.

ಸ್ವತಂತ್ರ ಕವಿತೆಗೆ ಶ್ರೀಯವರು ಆರಿಸಿಕೊಂಡ ವಿಷಯಗಳು ರಾಜಭಕ್ತಿ, ದೇಶಪ್ರೇಮ ಮತ್ತು ಭಾಷಾಪ್ರೇಮಕ್ಕೆ ಸಂಬಂಧಿಸಿವೆ. ಅವರ ಎಲ್ಲ ಕವಿತೆಗಳೂ ಸಾಂದರ್ಭಿಕ ರಚನೆಗಳಾಗಿರುವುದನ್ನು ಗಮನಿಸಬಹುದು. ಉದಾಹರಣೆಗೆ 'ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ' ನಾಲ್ವಡಿ ಕೃಷ್ಣರಾಜ ಒಡೆಯರ ರಜತಮಹೋತ್ಸವ ಸಂದರ್ಭದಲ್ಲಿ ಬರೆದುದಾದರೆ, 'ಬಾನ್ ಕೊಂಡ ಕೃಷ್ಣನ್' ಕೃಷ್ಣರಾಜ ಒಡೆಯರು ಮೃತರಾದಾಗ ಬರೆದ ಶೋಕಗೀತೆ. 'ಶ್ರೀಜಯನ ಬೆಳಕು' ಹಾಗೂ 'ಅರಮನೆಯ ಒಸಗೆ' ಜಯಚಾಮರಾಜ ಒಡೆಯರ ಪಟ್ಟಾಭಿಷೇಕ ಸಂದರ್ಭದಲ್ಲಿ ಬರೆದ ಕವಿತೆಗಳು. ವಿಜಯನಗರ ಸಾಮ್ರಾಜ್ಯದ ೬೦೦ ವರ್ಷದ ಹಬ್ಬದ ಸಂದರ್ಭದಲ್ಲಿ 'ಕನ್ನಡ ತಾಯ ನೋಟ' ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಬೆಳ್ಳಿ ಹಬ್ಬದ ಸಲುವಾಗಿ 'ಶುಕ್ರಗೀತೆ' ಹೊರಬಂದಿದೆ.

'ಹೊಂಗನಸುಗಳು' ಕವನ ಸಂಕಲನದ ನಾಲ್ಕು ಕವಿತೆಗಳಲ್ಲಿ ಮೈಸೂರರಸರ ರಾಜ ಭಕ್ತಿ ಹಾಗೂ ಅರಸು ಮನೆತನವನ್ನು ಕೊಂಡಾಡಿದ್ದಾರೆ. ಇನ್ನುಳಿದ ಐದು ಕವಿತೆಗಳು ಇತರೆ ವಿಷಯಗಳಿಗೆ ಮೀಸಲಾಗಿವೆ.

ಸುಮಾರು ಮೂರು ದಶಕಗಳ ಕಾಲ ಶ್ರೀಯವರ ಮನಸ್ಸಿನಲ್ಲಿ ಸುಳಿದಾಡಿದ ಭಾರತ ಮತ್ತು ಕರ್ನಾಟಕವನ್ನು ಕುರಿತ ಆಲೋಚನೆಗಳು, ಬಯಕೆಗಳು, ಅವರಿಗೆ ಸೂರ್ತಿ ನೀಡಿದ ಆದರ್ಶಗಳು, ಮೈಸೂರಿನ ಮಹಾರಾಜರ ವಿಷಯದಲ್ಲಿ ಅವರಿಗಿದ್ದ ಭಕ್ತಿ ಇವೆಲ್ಲವೂ ಇಲ್ಲಿಯ ಕವಿತೆಗಳಲ್ಲಿ ಅಡಕವಾಗಿವೆ.

೧೯೧೪ರಲ್ಲಿ ಬರೆದ 'ಭರತ ಮಾತೆಯ ನುಡಿ' (ಇದು ಶ್ರೀಯವರ ಮೊದಲ ಕವಿತೆ ಎನ್ನುವ ಮಾತೂ ಇದೆ) ಭರತ ಮಾತೆ, ಭರತ ಮಾತೆ, ಎಂದು ನೀ ತಲೆ ಎತ್ತುವೆ? ಎಂದು ಆರಂಭವಾಗುವ ಈ ಕವಿತೆಯಲ್ಲಿ ಭಾರತ ತನ್ನಲ್ಲಿರುವ ಜಳ್ಳು ಕಸ ಕಲ್ಮಷಗಳನ್ನು ಕಿತ್ತೊಗೆಯಬಾರದೆ? ಇದೇನು ವಿಚಿತ್ರ ವಿರೋಧಾಭಾಸ ನಮ್ಮ ದೇಶದಲ್ಲಿ ನಮ್ಮ ಪುರಾತನ ಸಂಸ್ಕೃತಿಯ ಭವ್ಯತೆಯೇ ನಮಗೆ ಹೊರಲಾರದ ಹೊರೆಯಾಗಿ ಪರಿಣಮಿಸಿದೆ; ಅದರ ದಟ್ಟ ನೆರಳಿನಿಂದ ನಮ್ಮ ಪಥ ಮಸುಕಾಗಿದೆ, ಬದುಕು ಜಡವಾಗಿದೆ, ಪ್ರಗತಿ ನಿಂತಲ್ಲಿ ನಿಂತಿದೆ! ಇದು ಭರತ ಮಾತೆ ತನ್ನ ಮಕ್ಕಳ ಮೇಲೆ ಹೊರಿಸುವ ಆಪಾದನೆ. ಭಾರತೀಯರ ಮೇಲೆ ನಡೆಯುವ ಅನ್ಯರ ಆಕ್ರಮಣ, ಭರತ ಮಾತೆಯ ಮಕ್ಕಳ ಜಡತೆ ಇದರಿಂದ ಎಚ್ಚರಿಸಿ ಹುರಿದುಂಬಿಸಲು ಮಾಡಿದ ಪ್ರಯತ್ನ ಇತ್ಯಾದಿಯನ್ನು ವಿವರಿಸಿದ್ದಾರೆ. ಇಂಗ್ಲೆಂಡ್-ಇಂಡಿಯಾ ಸಂಬಂಧ ಸ್ವರೂಪವನ್ನು ನಿರೂಪಿಸುವ ಈ ಕವಿತೆ ಶ್ರೀಯವರ ಸ್ವಭಾವದ ಕನ್ನಡಿಯಂತಿದೆ.

ಮೈಸೂರು ರಾಜವಂಶ ಕುರಿತಾದ 'ಮೈಸೂರು ಮಕ್ಕಳು' ಕವಿತೆ ರಾಜ ಭಕ್ತಿಗೆ, ರಾಜ ನಿಷ್ಠೆಗೆ, ಸಾರ್ವಭೌಮತ್ವದ ಹೊಗಳಿಕೆಗೆ ಮೀಸಲಾಗಿದೆ. ಮೈಸೂರು ಮಹಾರಾಜರು ತುಂಬ ಜನಾನುರಾಗಿಗಳು, ಸಾಹಿತ್ಯ, ಸಂಗೀತ, ಸಂಸ್ಕೃತಿ ಕಲೆಗಳ ಪೋಷಕರಾಗಿದ್ದರು ಎನ್ನುವುದು ಇದಕ್ಕೆ ಕಾರಣವಿರಬಹುದು.

ಮೈಸೂರು ರಾಜಮನೆತನವನ್ನು ಕುರಿತಾದ 'ಮೈಸೂರು ಮಕ್ಕಳು" (೧೯೨೦); "ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ' (೧೯೨೭), "ಬಾನಗೊಂಡ ಕೃಷ್ಣನ್" (೧೯೪೦), "ಶ್ರೀ ಜಯನ ಬೆಳಕು" (೧೯೪೦), "ಅರಮನೆಯ ಒಸಗೆ' (೧೯೪೦) ಇವುಗಳಲ್ಲಿ ಅತ್ಯುತ್ತಮವಾದ ಕವಿತೆಯೆಂದರೆ "ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ", ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ರಜತ ಮಹೋತ್ಸವ ಸಂದರ್ಭದಲ್ಲಿ ಇಂಗ್ಲಿಷ್ ಸಾಹಿತ್ಯಾಭ್ಯಾಸಿಗಳಿಗೆ ಪರಿಚಿತವಾದ 'ಓಡ್' 'Ode' ಎನ್ನುವ ಕವನ ರೂಪವನ್ನು ಶ್ರೀಯವರು ಮೊಟ್ಟಮೊದಲು ಈ ಕವಿತೆಯ ಮೂಲಕ ಕನ್ನಡಕ್ಕೆ ಪರಿಚಯಿಸಿದ್ದಾರೆ. ಈ ಬಗೆಯ ಕವಿತೆಗಳಲ್ಲಿ ಕವಿತಾಶಕ್ತಿ ಉನ್ನತಮಟ್ಟಕ್ಕೇರುವುದು ಕಷ್ಟ ಆದರೆ ಶ್ರೀಯವರು ಗಂಭೀರವಾದ ಕಥನಕಲೆಯಿಂದ ಭಾವೋತ್ಕರ್ಷವಾಗಿ ನಿರೂಪಿಸಿದ್ದಾರೆ.

ಮೈಸೂರಿನ ಅರಸರ ಮತ್ತು ಮೈಸೂರನ್ನು ಕುರಿತಾದ ಅತಿಯಾದ ಪ್ರೀತಿ ಈ ಕವಿತೆಯಲ್ಲಿ ಅಭಿವ್ಯಕ್ತವಾಗಿವೆ. ಶ್ರೀಯವರ ಸ್ವಾಮಿನಿಷ್ಠೆ, ಮಿತಿಮೀರಿದ ಭಕ್ತಿ ಬಹಳಹೆಚ್ಚು ಎನ್ನುವಷ್ಟು ಇಲ್ಲಿ ನಿರೂಪಿತವಾಗಿದೆ ಎಂದರೂ ಸಲ್ಲುತ್ತದೆ. ಈ ನಿಷ್ಠೆಯ ಪ್ರತೀಕವೆನ್ನುವಂತೆ ನಾಲ್ವಡಿ ಕೃಷ್ಣರಾಜ ಒಡೆಯರವರು ಇವರಿಗೆ 'ರಾಜಸೇವಾಸಕ್ತ' ಎಂಬ ಬಿರುದು ನೀಡಿದರು ಎನ್ನುವ ಮಾತೂ ಇದೆ. ಸಾಮಾನ್ಯವಾಗಿ ಉನ್ನತ ಅಧಿಕಾರಿಗಳಿಗೆ

ದೊರೆಯುತ್ತಿದ್ದ ಈ ಬಿರುದು ಮೊತ್ತಮೊದಲು ಒಬ್ಬ ಪ್ರಾಧ್ಯಾಪಕನಿಗೆ, ಒಬ್ಬ ಕನ್ನಡದ ಸೇವಕನಿಗೆ ದೊರೆತಿರುವುದೆಂದರೆ ಬಿ.ಎಂ.ಶ್ರೀ ಅವರಿಗೆ ಮಾತ್ರ.

**“ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ'**

ರಾಜ್ಯದಲ್ಲಿ ನಡೆಯುವ ಉತ್ಸವ, ರಾಜ ಮನೆತನದ ವಿವಾಹ ಮಹೋತ್ಸವ ಸಂದರ್ಭದ ನಿರೂಪಣೆ, ವಿಜಯೋತ್ಸವ, ಸಂತೋಷ, ಸಂಭ್ರಮ ಮುಂತಾದ ವರ್ಣನೆಗಳಲ್ಲಿ ಕವಿತಾ ಶಕ್ತಿಯು ಅಷ್ಟು ಪ್ರಬುದ್ಧವಾಗಿರುವುದಿಲ್ಲವಾದರೂ, ಅಸಾಧ್ಯವಂತೂ ಅಲ್ಲ ಎನ್ನುವುದನ್ನು ಶ್ರೀಯವರು ಸಾಧಿಸಿ ತೋರಿಸಿದ್ದಾರೆ. ಈ ಪ್ರಗಾಥದಲ್ಲಿ ವಿನೂತನ ಛಂದೋ ಪ್ರಯೋಗ ಅಚ್ಚರಿಯನ್ನು ಮೂಡಿಸುವುದಲ್ಲದೆ ಗಂಭೀರವಾದ ಕಥನ ಕೌಶಲದಿಂದ ಕೂಡಿರುವುದನ್ನು ಕಾಣಬಹುದು. ಈ ಮಾತುಗಳನ್ನು ಪುಷ್ಟೀಕರಿಸಲು ಕವಿತೆಯ ಈ ಭಾಗವೆ ಸಾಕ್ಷಿ.

ಮಂಗಳ ಮಸಗಿತು ಮೈಸೂರರಮನೆ; ಸಿಂಗರವಾಯಿತು ಮೈಸೂರು.
ಕೃಷ್ಣನ ವೈಭವವೆಲ್ಲವ ತೋರುವ, ಸಾರುವ, ಮೀರುವ ಮೈಸೂರು.
ನಾಲ್ವಡಿ ಕೃಷ್ಣನ ಮೈಸೂರು.
ಬೆಟ್ಟವೋ, ಕೆರೆಯೋ, ಬೀದಿಯೋ, ಬನವೋ, ಮನೆಯೋ, ಮಹಲೋ,
ಎಲ್ಲೆಲ್ಲು.
ದಟ್ಟಗೆ ಕೂಡುವ, ಭಕ್ತಿಯನಾಡುವ, ಹರ್ಷವ ತೋಡುವ ಸವಿಸೊಲ್ಲು.
ನಾಲ್ವಡಿ ಕೃಷ್ಣನ ಸವಿಸೊಲ್ಲು.
ಎಳೆಯರು, ನಾಡಿನ ಬೆಳೆಸಿರಿಮೊಳೆಗಳು, ಆಡಿ, ಪಾಡಿ, ಕುಣಿಕುಣಿದಾಡಿ,
ಓದುವ ಹೆಣ್ಣಳು ಗಂಡುಗಳುಲಿವರು, ಸಸಿಯನು ನೆಡುವರು, ಕೊಂಡಾಡಿ,
ನಾಲ್ವಡಿ ಕೃಷ್ಣನ ಕೊಂಡಾಡಿ.
ಅರಿವನು ಹರಡುವ, ಸಿರಿಯನು ಬೆಳಸುವ, ಪರಿಪರಿ ಕೃಷಿಯನ್ನು ರೂಢಿಸುವ,
ತನ್ನೊಂದೊಲುಮೆಗೆ ಮರುಗಿಸಿ ಹಲಬಗೆ ನಾಡಿಗರೊಂದೆನೆ ಕೂಡಿಸುವ,
ಆಡುವ, ಹಾಡುವ, ಬರೆಯುವ, ಕೊರೆಯುವ, ಕಟ್ಟುವ ಕಳೆಗಳ ಹೂಡಿಸುವ,
ಹೊಸ ಹೊಸ ತೆರದಲಿ ಮನವನು ಮುಟ್ಟುವ ಕವಿಗಳಿಗುತ್ಸವಮಾಡಿಸುವ,
ಪ್ರೇಮದ ಸ್ವಾಮಿಗೆ, ಕೃಷ್ಣಗೆ, ಹಿರಿಯರು ಬಿನ್ನಹಗೈವರು ತಲೆಬಾಗಿ,
ನೆಚ್ಚಿನ ಮೆಚ್ಚಿನ ಬಿನ್ನಹ ಕರಗಿಸೆ, ಹೃದಯವನೆರೆವನು ಮುಡಿಪಾಗಿ,
ನಾಲ್ವಡಿ ಕೃಷ್ಣನ ಮುಡಿಪಾಗಿ.
ಕನ್ನಡದೇವಿಯ ಬಯಕೆಯ ಕಳಶದ ಸುಧೆ ಸುರಿದೆತ್ತಲು ಚೆನ್ನಾಯಿತು,
ಪ್ರೇಮದ ಸ್ವಾಮಿಯ ಕೃಷ್ಣನ ಭಕ್ತಿಯ ರಸ ಹರಿದೆತ್ತಲು ಹೊನ್ನಾಯಿತು.

.ಮಂಗಳಮಯವಾಯಿತು ನಾಡು;
ಸಿಂಗರದಾ ಕನ್ನಡನಾಡು.

**“ಕನ್ನಡ ತಾಯ ನೋಟ'**

ದೇಶಾಭಿಮಾನದಿಂದ ಪ್ರೇರಿತವಾದ ಶ್ರೀಕಂಠಯ್ಯನವರ ಕವನಗಳಲ್ಲಿ ಅತ್ಯುತ್ತಮವಾದುದೆಂದರೆ 'ಕನ್ನಡ ತಾಯ ನೋಟ'. ಇದು ಕನ್ನಡ ಮಾತೆಯ ಬಗೆಗೆ ಕನ್ನಡ ಕವಿಗಳು ರಚಿಸಿರುವ ಪ್ರಗಾಥಗಳಲ್ಲೇ ಗಣ್ಯವಾದುದು. ಇದು ವಿಜಯನಗರ ಸಾಮ್ರಾಜ್ಯದ ಆರುನೂರು ವರ್ಷಗಳ ಸ್ಮರಣೆಗಾಗಿ ನಡೆದ ಉತ್ಸವದ ಸಮಯದಲ್ಲಿ ಬರೆದದ್ದು. ಶ್ರೀಯವರ ಕನ್ನಡ ನಾಡಿನ ಪ್ರೇಮದ ಉಜ್ವಲತೆ ಇಲ್ಲಿ ಕಾವ್ಯವಾಗಿ ರೂಪುಗೊಂಡಿದೆ.

ಬಳಸಿ ಬಂದೆನು ಸುತ್ತ ಕನ್ನಡದ ನಾಡುಗಳ ಸಿರಿಯ ನೋಡುತ್ತ,

ತಾಯಡಿಯ ಹುಡಿಯ ತಲೆಗಾನುತ್ತ, ಹರಕೆಯ ಪವಿತ್ರ ಯಾತ್ರೆಯಲಿ,

ಏನು ಚೆಲುವಿನ ನಾಡು! ಚೆಲುವು ಚೆಲುವು ನಾಡು! ಕನ್ನಡ ನಾಡು!

ಏನು ಚೆನ್ನದ ನಾಡು! ನಮ್ಮೊಲುಮೆಯಾ ನಾಡು! ನಮ್ಮಿನಿಯ ನಾಡು!

ಕಾವೇರಿಯಿಂದಮಾ ಗೋದಾವರಿಯವರೆಗೆ ಚಾಚಿರುವ ನಾಡು!

ಬಳಸಿದೆನು, ಸುತ್ತಿದೆನು, ಕಣ್ದಣಿಯೆ ನೋಡಿದನು, ಕುಣಿದು ಹಾಡಿದೆನು:

ಶ್ರೀಕಂಠಯ್ಯನವರು ನಿಜವಾಗಿಯೂ ಕನ್ನಡ ನಾಡನ್ನು ಸುತ್ತಿದರು, ಬಳಸಿದರು ಕಣ್ದಣಿಯೆ ನೋಡಿದರು, ಕುಣಿದು ಹಾಡಿದರು ಅಥವಾ ಕುಣಿದಾಡಿದರು. ಈ ಕವಿತೆಯಲ್ಲಿ ಕನ್ನಡ ನಾಡಿನ ದರ್ಶನ, ಕನ್ನಡ ತಾಯಿಯ ದರ್ಶನ ಸುಂದರವಾಗಿ ವರ್ಣನೆಗೊಂಡಿದೆ.

ಈ ಕವಿತೆಯಲ್ಲಿ ಶ್ರೀ ಅವರು ಕನ್ನಡ ತಾಯಿಯನ್ನು ಭೇಟಿ ಮಾಡಿ ಆಕೆಯ ದುಃಖವನ್ನು ಅರ್ಥಮಾಡಿಕೊಂಡು ಈ ರೀತಿ ಮರುಗುತ್ತಾರೆ.

ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ-ಹಿರಿದಾಗಿ ಬಾಳಿದವಳೊಮ್ಮೆ:
ಈಗ ಬಡತನ, ಬಡವೆ, ಬಡವಾದೆ: ಬಡವಾದ ಮಕ್ಕಳನು ನೋಡಿ,
ಬತ್ತಿ, ಮತ್ತಿಮ್ಮಡಿಯ ಸೊರಗಿನಲಿ ಬಡವಾದೆ-ಸಾವಿಲ್ಲ ನನಗೆ!

***

ನನ್ನನೊಲ್ಲರು ನನ್ನ ಮಕ್ಕಳೇ! ತಾವ್ ಬಾಳಿ, ತಾಯ ಬಾಳಿಸರು.

ಹೆರರ ನುಡಿ, ಹೆರರ ನಡೆ-ಹೆರರ ಕೂಗೇ ಕೂಗು; ಹೆರರದೇ ಹೆಮ್ಮೆ!

ನನ್ನ ಮನೆ ಹಾಳು!

ನನ್ನ ನುಡಿ ಬೀಳು!

ಹೀಗೆಂದು ಗೋಳಿಡುತ್ತಿದ್ದ ಕನ್ನಡ ತಾಯಿಯ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಅವರ ದೇಶಾಭಿಮಾನ ಹಾಗೂ ಭಾಷಾಭಿಮಾನದ ಈ ಕವನಗಳು ಶಾಲಾ ಕಾಲೇಜುಗಳಲ್ಲಿ ಮೊಳಗಿ ಕನ್ನಡದ ವಾತಾವರಣವನ್ನು ಕನ್ನಡದ ಅಭಿಮಾನವನ್ನು ಮೂಡಿಸುವಲ್ಲಿ ಯಶಸ್ವಿಯಾಗಿರಬಹುದು.

ಕನ್ನಡಿಗರ ದೌರ್ಬಲ್ಯವೆಂದರೆ ಅನ್ಯರನ್ನು ಕೊಂಡಾಡುವುದು. ಇಂಥ ತಪ್ಪನ್ನು ಕನ್ನಡಿಗರು ತಿದ್ದಿಕೊಂಡು ತಾವೂ ಬದುಕಿ, ಬೇರೆಯವರೂ ಬದುಕುವಂತೆ ಮಾಡುತ್ತಾರೆಂದು ಕವಿ 'ಕನ್ನಡ ತಾಯಿ'ಗೆ ಆಶ್ವಾಸನೆಯನ್ನು ನೀಡಿ

**'ಬಾ ತಾಯಿ, ಹರಸು, ತೇರೇರು ಬಾ ತಾಯಿ, ನಿನ್ನ ಸಿಂಹಾಸನವನ್ನು ಏರು ಮತ್ತೊಮ್ಮೆ**

**......ಅದು**

**ಬೆಳಗೆ**

**ಕನ್ನಡದ ಮುಡಿಯಾಗಿ, ಕನ್ನಡದ ನುಡಿಯಾಗಿ, ಕನ್ನಡದ ಬಾಳ ಕುಡಿಯಾಗಿ!**

**- ಬಾರಮ್ಮ, ಹರಸು.**

**ಬನ್ನಿ, ಓ ಮಕ್ಕಳಿರ,**

**ಒಕ್ಕೊರಲೆಲ್ಲರೂ ಕೂಗಿ ಈ ಒಕ್ಕೂಗ- ಈ ಹಿರಿಯ ಕೂಗ**

**ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಬಾಳ್ಗೆ-**

**ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ.**

ಎಂದು ಬೇಡಿಕೊಳ್ಳುತ್ತಾರೆ. ಕವಿಯ ಕೋರಿಕೆಗೆ ಮಣಿದು ಕನ್ನಡ ತಾಯಿ ರಥವನ್ನು ಏರುತ್ತಾಳೆ. ಈ ರೀತಿಯ ಕವಿತೆಗಳ ಮೂಲಕ ಶ್ರೀಯವರು ಕರ್ನಾಟಕದ ರಾಜ್ಯ ಸ್ಥಾಪನೆಗೆ ಪ್ರಚೋದನೆ, ಪ್ರೇರಣೆ ಹಾಗೂ ಪ್ರೋತ್ಸಾಹವನ್ನು ನೀಡಿ ಕರ್ನಾಟಕದ ಏಕೀಕರಣಕ್ಕೆ ಅಸ್ತಿಭಾರವನ್ನು ಹಾಕಿದ್ದಾರೆ. ಇದು ಶ್ರೀಯವರು ಕನ್ನಡ ನಾಡಿಗೆ ಸಲ್ಲಿಸಿದ ಇತರ ಸೇವೆಗಳಿಗಿಂತ ಹೆಚ್ಚು ಮಹತ್ವವಾಗಿ ಕಾಣಿಸುತ್ತದೆ.

ಕರ್ನಾಟದಲ್ಲಿ ಕನ್ನಡವೇ ಅಗ್ರಸ್ಥಾನದಲ್ಲಿರಬೇಕೆಂದು ಶ್ರೀಯವರು ಬಯಸಿದರು. ಕನ್ನಡದ ದೇಶದಲ್ಲಿ ನೆಲೆಸಿರುವ ತೆಲುಗು, ತಮಿಳರು ಮತ್ತು ಆ ಭಾಷೆಯನ್ನಾಡುವವರು ಕನ್ನಡಿಗರಾಗಬೇಕು, ಕನ್ನಡಕ್ಕೆ ಹೊಂದಿಕೊಳ್ಳಬೇಕು.' ಕರ್ನಾಟಕದಲ್ಲಿರುವ ಪ್ರತಿಯೊಬ್ಬರೂ ಕನ್ನಡಿಗರೇ ಎಂಬುದು ಶ್ರೀಯವರ ಅಭಿಪ್ರಾಯವಾಗಿತ್ತು.

ಬಿ.ಎಂ.ಶ್ರೀಯವರು ಕರ್ನಾಟಕದ ಉದ್ದಗಲಕ್ಕೆ ಪ್ರವಾಸಮಾಡಿದರು. ಕನ್ನಡಪರವಾಗಿ ಭಾಷಣ ಮಾಡಿದರು. ಜನರಲ್ಲಿ ಕನ್ನಡದ ಕೆಚ್ಚನ್ನು ಹಚ್ಚಿದರು. ಕನ್ನಡಿಗರನ್ನು ಸಂಘಟಿಸಿದರು. 'ಕನ್ನಡದ ಸಂಘ'ಗಳನ್ನು ಹುಟ್ಟುಹಾಕಿದರು. ಅವರ ಕನ್ನಡ ಪರ ಘೋಷಣೆಗಳು 'ಕನ್ನಡಿಗರ ಮಂತ್ರಿಗಳಾದುವು.

'ಕನ್ನಡ ಬಾವುಟ' ಎನ್ನುವುದು ಸುಂದರವಾದ ಕನ್ನಡ ಗೀತೆ. ಹೀನ ಸ್ಥಿತಿಯಲ್ಲಿರುವ ಕನ್ನಡ ತಾಯ ಸೇವೆಗೆ ಕನ್ನಡಿಗರು ಸಿದ್ಧವಾಗಬೇಕು ಎನ್ನುವ ಎಚ್ಚರವನ್ನು ಮೂಡಿಸುವ ಕವನ ಇದು. ಕನ್ನಡಿಗರಲ್ಲಿ ಕೇವಲ ಅಭಿಮಾನ ಮೂಡಿದರೆ ಸಾಲದು, ಕನ್ನಡ ನಾಡು-ನುಡಿ, ನಾಡಿನ ಹಿರಿಮೆ, ಸಾಹಿತ್ಯ-ಸಂಸ್ಕೃತಿಯ ಅರಿವೂ ಮೂಡಬೇಕೆಂಬುದು 'ಕನ್ನಡ ಬಾವುಟ' ಕವಿತೆಯ ಹಿನ್ನೆಲೆಯಾಗಿತ್ತು ಎನ್ನುವುದನ್ನು ಯಾರಾದರೂ ಮನಗಾಣಬಹುದು. ಶ್ರೀಯವರು ಹುಟ್ಟುಹಾಕಿದ 'ಸಿರಿಗನ್ನಡಂ ಗೆಲ್ಗೆ-ಸಿರಿಗನ್ನಡಂ ಬಾಳ್ಗೆ' ಎನ್ನುವ ಘೋಷವಾಕ್ಯ ಇಂದು ಪ್ರತಿಧ್ವನಿಸುತ್ತಿದೆ. ಅವರು ಹಾರಿಸಿದ 'ಕನ್ನಡ ಬಾವುಟ' ಇಂದು ಎಲ್ಲೆಲ್ಲೂ ಸ್ವಚ್ಛಂದವಾಗಿ ಸ್ವಾಭಿಮಾನದಿಂದ ಹಾರಾಡುತ್ತಿದೆ. 'ಏರಿಸಿ ಹಾರಿಸಿ ಕನ್ನಡದ ಬಾವುಟ' ಎಂದು ಹೇಳಿದ ಅವರ ಮಾತು ಇಂದು ಪ್ರತಿಯೊಬ್ಬರ ಮನೆಮಾತಾಗಿದೆ. ಅವರು ಕಟ್ಟಿಕೊಟ್ಟ ಕನ್ನಡಪರ ಸಂಘಟನೆಗಳು ಇಂದು ಎಲ್ಲಕಡೆಯೂ ಸಕ್ರಿಯವಾಗಿ ಕನ್ನಡದ ಜಲ, ನೆಲ, ನುಡಿ, ಗಡಿ, ನದಿ, ನೀರು, ಮುಂತಾದವುಗಳ ಕಾವಲು ಸಮಿತಿಯಂತೆ ಕೆಲಸಮಾಡುತ್ತಿವೆ.

## ಶುಕ್ರಗೀತೆ

ಉಳಿದ ಕವನಗಳಲ್ಲಿ ಬಹಳ ಪ್ರಮುಖವಾದ ಕವಿತೆ ಎಂದರೆ ಶುಕ್ರಗೀತೆ. ಇದು ಮೈಸೂರು ವಿಶ್ವವಿದ್ಯಾನಿಲಯದ ಬೆಳ್ಳಿಹಬ್ಬದ ಕವಿ ಸಮ್ಮೇಳನದಲ್ಲಿ ಓದಿದ ಕವನ. ಇದರಲ್ಲಿ ರಾಜಮನೆತನದ ರಾಜಕೀಯ ಸೋಕಿಲ್ಲ. ಶ್ರೀಕಂಠಯ್ಯನವರ ಉಜ್ವಲ ದೇಶಾಭಿಮಾನ ಭಾಷಾಭಿಮಾನಗಳನ್ನು ಹಿಂದೆ ಬಿಟ್ಟು ಈ ಕವನ ಮೇಲಕ್ಕೇರಿದೆ. ಇಲ್ಲಿ ಶ್ರೀಯವರು ಹಾಡಿರುವುದು ಜ್ಞಾನ, ವಿದ್ಯೆ, ಸತ್ಯಗಳನ್ನು ಕುರಿತು. ದೇವದಾನವರ, ಸತತವಾದ ಹೋರಾಟವನ್ನು ಕುರಿತು. ಕವಿತೆಯು ಪ್ರಸಿದ್ಧವಾದ 'ಓ ಸಹನಾವವತು ಸಹನೌ ಭುನಕ್ತು' ಶಾಂತ ಮಂತ್ರದಿಂದ ಆರಂಭವಾಗುತ್ತದೆ. 'ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಕೆ' ಎಂದು ಮುಕ್ತಾಯವಾಗುತ್ತದೆ.

## ಅಧ್ಯಾಯ ನಾಲ್ಕು: ನಾಟಕಗಳು.

ಮೂಲತಃ ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿಯಾದ ಬಿ.ಎಂ.ಶ್ರೀಯವರು ಕನ್ನಡ ಸಾಹಿತ್ಯದಲ್ಲಿ ಶೇಕ್ಸ್‌ಪಿಯರ್ ಹಾಗೂ ಗ್ರೀಕ್ ಮಾದರಿಯ ನಾಟಕಗಳು ಇಲ್ಲದೇ ಇರುವುದನ್ನು ಇಂಗ್ಲಿಷ್ ಎಂ.ಎ. ಓದುವ ಕಾಲದಿಂದಲೂ ಮನಗಂಡಿದ್ದರು. ಶೇಕ್ಸ್‌ಪಿಯರ್, ಪ್ಲೇಟೋ ಮುಂತಾದವರ ಕೃತಿಗಳನ್ನು ಕನ್ನಡಕ್ಕೆ ತರಬೇಕು ಹಾಗೂ ಗ್ರೀಕ್ ದುರಂತ ಮಾದರಿಯ ನಾಟಕಗಳನ್ನು ಕನ್ನಡಕ್ಕೆ ಪರಿಚಯಿಸಬೇಕು ಎನ್ನುವ ತುಡಿತ ಶ್ರೀ ಅವರಲ್ಲಿ ಮೊದಲಿನಿಂದಲೂ ಇದ್ದಂತೆ ಕಾಣುತ್ತದೆ ಹಾಗೂ ಇದು ಅವರನ್ನು ಸದಾ ಕಾಡುತ್ತಿತ್ತು.

ಬಿ.ಎಂ.ಶ್ರೀ ಅವರು ನಾಟಕ ರಚಿಸಿದ್ದ ಕಾಲ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನಾಟಕಗಳು ವಿರಳವಾಗಿದ್ದ ಕಾಲದಲ್ಲಿ. ರನ್ನನ 'ಗದಾಯುದ್ಧ' ಅಥವಾ 'ಸಾಹಸ ಭೀಮವಿಜಯ' ನಾಟಕ ರಚನೆಗೆ ಸೂಕ್ತವಾದ ವಸ್ತುವಾಗಿತ್ತು. ಆತನಿಗೆ ನಾಟಕ ಬರೆಯುವ ಯೋಗ್ಯತೆ ಪ್ರತಿಭೆ ಸಾಕಷ್ಟು ಇದ್ದರೂ ರನ್ನ ನಾಟಕವನ್ನು ಬರೆಯುವ ಮನಸ್ಸು ಮಾಡಲಿಲ್ಲ. ಏನು ಕಾರಣವೂ? ಅವನು ಚಂಪೂ ಕಾವ್ಯವನ್ನು ಬರೆದನು. ಇದರಿಂದ ಶ್ರೀಯವರು ರುದ್ರನಾಟಕವೊಂದನ್ನು ಸಿದ್ಧಪಡಿಸಲು ಸಾಧ್ಯವಾಯಿತು. ಶ್ರೀಯವರು ಮೂರು ನಾಟಕಗಳನ್ನು ರಚಿಸಿದ್ದಾರೆ. ಆ ಮೂರೂ ನಾಟಕಗಳು ರೂಪಾಂತರ, ಅಳವಡಿಕೆ ಹಾಗೂ ಭಾಷಾಂತರ ಸಾಹಿತ್ಯದ ಮೂರು ಮುಖ್ಯ ಪ್ರಕಾರಗಳನ್ನು ಪ್ರತಿನಿಧಿಸುತ್ತವೆ.

೧೯೨೬ರಲ್ಲಿ ಬಂದ 'ಗದಾಯುದ್ಧ ನಾಟಕಂ' ಒಂದು ರೂಪಾಂತರ. ರನ್ನನ ಹಳಗನ್ನಡ ಚಂಪೂ ರೂಪದ ಕೃತಿ ಇಲ್ಲಿ ನಾಟಕ ರೂಪ ತಾಳಿದೆ. ವಸ್ತು ಮತ್ತು ಸಂಸ್ಕೃತಿ ಕನ್ನಡದ್ದೇ, ಆದರೆ ರೂಪ ಮಾತ್ರ ಹೊಸದು. ಇರುವ ವಿಷಯವನ್ನು ಬಳಸಿಕೊಂಡು ನಾಟಕ ರಚಿಸುವ ಹೊಸ ತಂತ್ರವನ್ನು ಈ ನಾಟಕ ಕನ್ನಡಕ್ಕೆ ಪರಿಚಯಿಸಿತು. ಈ ನಾಟಕದ ಶ್ರೇಯಸ್ಸು ಶ್ರೀಯವರಿಗೆ ಸೇರಿದಂತೆ ರನ್ನನಿಗೂ ಸಲ್ಲುತ್ತದೆ.

೧೯೨೯ರಲ್ಲಿ ಬಂದ 'ಅಶ್ವತ್ಥಾಮನ್' ಸೊಫೋಕ್ಲೀಸನ 'ಏಜಾಕ್' ನಾಟಕದ ಅನುವಾದ - 'ಅಶ್ವತ್ಥಾಮನ್' ಭಾಷಾಂತರವೂ ಹೌದು, ರೂಪಾಂತರವೂ ಹೌದು, ಶ್ರೀಯವರ ಸ್ವಂತ ಕೃತಿಯೂ ಹೌದು ಎನ್ನುವಂತೆ ಶಾಶ್ವತವಾಗಿ ನಿಲ್ಲುತ್ತದೆ. ಬೇರೆ ಭಾಷೆ, ಸಂಸ್ಕೃತಿಯನ್ನು ಅನುಸರಿಸಿ ಅದರ ಸತ್ವಕ್ಕೆ ಸಮಾನಾಂತರ ಭಾಷೆ ಮತ್ತು ಸಾಂಸ್ಕೃತಿಕ ದೃಷ್ಟಿಯನ್ನು ಕನ್ನಡಕ್ಕೆ ನೀಡುವ ಯತ್ನ. ಪರಕೀಯ ಸಂಸ್ಕೃತಿಯ ಬದುಕಿನ ದೃಷ್ಟಿಕೋನವನ್ನು ಬಳಸಿಕೊಂಡು ನಮ್ಮ ಪುರಾಣ-ಇತಿಹಾಸಗಳನ್ನು ಹೇಗೆ ಹೊಸ ಕಲಾಕೃತಿ ನಿರ್ಮಾಣಕ್ಕೆ ಮೂಲಸಾಮಗ್ರಿಯಾಗಿ ಪರಿವರ್ತಿಸಿಕೊಳ್ಳಬಹುದು ಎನ್ನುವ 'ಹೊಸ' ಪ್ರಯೋಗ ಈ ನಾಟಕದ ಪರಿಚಯ.

೧೯೩೫ರಲ್ಲಿ ಬಂದ 'ಪಾರಸಿಕರು' ಈಸ್ಕಲಸನ 'ಪರ್ಷಿಯನ್ಸ್' ನಾಟಕದ ಭಾಷಾಂತರ. ಇದರ ಭಾಷೆ ಮಾತ್ರ ಕನ್ನಡ, ವಸ್ತು ಮತ್ತು ಧೋರಣೆಗಳು ಗ್ರೀಕ್‌ತನದಿಂದ ಕೂಡಿವೆ. 'ಪಾರಸಿಕರು' 'ತನ್ನ ಮೂಲ ಪೌರತ್ವವನ್ನು ಹಾಗೆಯೇ ಉಳಿಸಿಕೊಂಡಿರುವ ಸಾಂಸ್ಕೃತಿಕ ರಾಯಭಾರಿ. 'ಪಾರಸಿಕರು' ಪ್ರಪಂಚದ ಹಳೆಯ ಸಂಸ್ಕೃತಿಯ-

ರಂಗಭೂಮಿಯ, ಪ್ರಾಚೀನ ನಾಟಕಕಾರನ ಮತ್ತು ನಾಟಕ ತಂತ್ರಗಳನ್ನು ಪರಿಚಯಮಾಡಿಕೊಡುತ್ತದೆ. ಉಳಿದಂತೆ ಹೊಸದೇನೂ ಇದರಲ್ಲಿ ಕಾಣುವುದಿಲ್ಲ.

ಶ್ರೀಯವರಿಂದ ಪರಿಚಯವಾದ ದುರಂತ ನಾಯಕನ ಕಲ್ಪನೆ-ಕನ್ನಡ ಕಾವ್ಯಗಳಲ್ಲಿ ದುರಂತ ವಸ್ತು, ದುರಂತ ವಸ್ತುವಿನ್ಯಾಸ ಹಾಗೂ ದುರಂತ ಪಾತ್ರಗಳನ್ನು ಗುರುತಿಸಿ ಇಂತಹ ನಾಟಕಗಳ ನಿರ್ಮಾಣಕ್ಕೆ ಅವಕಾಶವನ್ನು ಮಾಡಿಕೊಟ್ಟಿತು. ಶ್ರೀಯವರ ಮೂರೂ ನಾಟಕಗಳೂ ಟ್ರಾಜಿಡಿಗಳೆ. ಇದಕ್ಕೆ ಅವರಿಗೆ ಗ್ರೀಕ್ ನಾಟಕಗಳ ಬಗೆಗೆ ಇದ್ದ ಆಳವಾದ ಅಧ್ಯಯನ, ಅಭಿಮಾನ ಹಾಗೂ ವೈಯಕ್ತಿಕವಾಗಿ ಅವರ ಬದುಕೂ ಕಾರಣವಾಗಿರಬಹುದು.

ಶ್ರೀಯವರು ದುರಂತ ನಾಟಕಗಳನ್ನು ಮತ್ತು ದುರಂತದ ರೂಪ ರೇಷೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ಮೊದಲಿಗರು. ಸಂಸ್ಕೃತವೂ ಸೇರಿದಂತೆ ಭಾರತೀಯ ಭಾಷೆಗಳಲ್ಲಿ ದುರಂತದ ವಸ್ತುವಿನ್ಯಾಸದ ವಸ್ತುಗಳಿದ್ದರೂ ಅವುಗಳನ್ನು ಮಂಗಳಾಂತವನ್ನಾಗಿ ಮಾಡುತ್ತಿದ್ದರು. ಶ್ರೀಯವರು ಶೇಕ್ಸ್‌ಪಿಯರ್ ಮತ್ತು ಗ್ರೀಕ್ ನಾಟಕಗಳನ್ನು ಹೆಚ್ಚು ಅಧ್ಯಯನ ಮಾಡಿ ತರಗತಿಗಳಲ್ಲಿ ಪಾಠ ಮಾಡಿದ ಫಲವಾಗಿ ಎನ್ನುವಂತೆ ಮತ್ತು ಕನ್ನಡದಲ್ಲಿ ದುರಂತ ನಾಟಕಗಳು ಇಲ್ಲದೇ ಇರುವುದನ್ನ ಗಮನಿಸಿ ಇಂತಹ ನಾಟಕ ಪ್ರಕಾರಗಳನ್ನು ಕನ್ನಡಕ್ಕೆ ಪರಿಚಯಿಸಬೇಕು ಎನ್ನುವುದನ್ನು ಚೆನ್ನಾಗಿ ಅರ್ಥಮಾಡಿಕೊಂಡಿರಬೇಕು.

'ಗದಾಯುದ್ಧ ನಾಟಕಂ'ದಲ್ಲಿ ಮೊದಲ ಬಾರಿಗೆ ದುರಂತದ ವಸ್ತು ವಿನ್ಯಾಸವನ್ನು ಪರಿಚಯಿಸಿದ ಶ್ರೀಯವರು ಅದರ ಪ್ರಯೋಗದ ಕೊರತೆಯನ್ನು ಸರಿಪಡಿಸಿಕೊಳ್ಳಲು 'ಅಶ್ವತ್ಥಾಮನ್' ಅನ್ನು ರಚನೆ ಮಾಡಿ ಪ್ರಯೋಗದಲ್ಲಿ ವಿಶೇಷ ಕೀರ್ತಿಯನ್ನು ಪಡೆದುಕೊಂಡರು. 'ಪಾರಸಿಕರು' ಅಷ್ಟು ಜನಪ್ರಿಯವಾಗಲಿಲ್ಲ. ಆದರೆ 'ಅಶ್ವತ್ಥಾಮನ್' ಮುಂದಿನ ತಲೆಮಾರಿಗೆ ಒಂದು ಮಾದರಿ' ಕೃತಿಯಾಗಿ ಪರಿಣಮಿಸಿತು.

**ಗದಾಯುದ್ಧ ನಾಟಕಂ**

ಗದಾಯುದ್ಧ ನಾಟಕವು ಐದು ಅಂಕಗಳ ಒಂದು ಚಿಕ್ಕ ನಾಟಕ. ಇದು ೧೯೨೫ರಲ್ಲಿ ಪ್ರಕಟವಾಗಿದೆ. ಇದು ರನ್ನ ಕವಿಯ 'ಸಾಹಸ ಭೀಮವಿಜಯ'ದ ಆಧಾರದ ಮೇಲೆ ರಚಿತವಾಗಿದೆ. ಇಲ್ಲಿ ಬರುವ ಎಲ್ಲಾ ಸನ್ನಿವೇಶಗಳನ್ನು ಕಾವ್ಯದಿಂದ ಆಯ್ಕೆ ಮಾಡಲಾಗಿದೆ. ನಾಟಕದಲ್ಲಿ ಮೂಲ ಕಾವ್ಯದ ಪದ್ಯಭಾಗಗಳನ್ನೇ ಬಳಸಲಾಗಿದೆ. ಈ ನಾಟಕದಲ್ಲಿ ೧೪೭ ಪದ್ಯಗಳಿವೆ. ಗದಾಯುದ್ಧ ಕಾವ್ಯದಲ್ಲಿ ೫೭೬ ಪದ್ಯಗಳೂ, ದೀರ್ಘವಾದ ಕೆಲವು ವಚನಗಳೂ ಇವೆ. ಇಷ್ಟು ದೀರ್ಘವಾದ ಕಾವ್ಯದ ಸಾರವನ್ನು ೧೪೭ ಪದ್ಯಗಳಲ್ಲಿ ಹಾಗೂ ಕೆಲವು ವಚನಗಳಲ್ಲಿ ಸಂಗ್ರಹಿಸಿರುವ ಜಾಣ್ಮೆ ಶ್ರೀಯವರಿಗೆ ಸಲ್ಲುತ್ತದೆ. ನಾಟಕದಲ್ಲಿ ಕಾವ್ಯದ ಮುಖ್ಯವಾದ ಸನ್ನಿವೇಶಗಳೂ, ರನ್ನನ ಪ್ರತಿಭೆಯನ್ನು ತೋರಿಸುವ ಬಹಳ ಪದ್ಯಗಳೂ, ಸಾರವತ್ತಾದ ಭಾಗಗಳು ಅಡಕವಾಗಿವೆ. ರನ್ನನ ಗದಾಯುದ್ಧ ಕಾವ್ಯದಲ್ಲಿ ನಾಟಕದ ಅಂಶಗಳೇ ಹೇರಳವಾಗಿ ಇವೆ. ರನ್ನ ನಾಟಕ ರೀತಿಯಲ್ಲಿಯೇ ಕಾವ್ಯವನ್ನು ಬರೆದಿದ್ದಾನೆ ಎನ್ನುವ

ಅಭಿಪ್ರಾಯವೂ ಇದೆ. ಗದಾಯುದ್ಧ ಕಾವ್ಯದಲ್ಲಿ ಹೆಚ್ಚಾಗಿ ಸಂಭಾಷಣೆಗಳಿರುವುದು, ನಾಟಕಕ್ಕೆ ಉಚಿತವಾದ ಸನ್ನಿವೇಶಗಳಿರುವುದು ಇದನ್ನು ನಾಟಕವನ್ನಾಗಿ ರೂಪಿಸಲು ಶ್ರೀಯವರಿಗೆ ಹೆಚ್ಚು ಸಹಕಾರಿಯಾಗಿದೆ. ಈ ನಾಟಕದ ಶೈಲಿಗೂ ಕಾವ್ಯ ಗುಣಕ್ಕೂ ಸಲ್ಲಬೇಕಾದ ಎಲ್ಲ ಕೀರ್ತಿ ರನ್ನನಿಗೇ ಸಲ್ಲಬೇಕು. ಆದರೆ ಅದನ್ನು ಒಂದು ದುರಂತ ನಾಟಕವನ್ನಾಗಿಸಿದ ಕೀರ್ತಿಮಾತ್ರ ಶ್ರೀಯವರಿಗೆ ಸಲ್ಲುತ್ತದೆ.

ರನ್ನನ ಗದಾಯುದ್ಧ ಕಾವ್ಯದಿಂದ ಒಂದು ಉತ್ತಮ ದುರಂತ ನಾಟಕವನ್ನು ಆತನ ಸತ್ವಪೂರ್ಣ ಮಾತುಗಳಲ್ಲಿಯೇ ರಚಿಸಬಹುದೆಂಬುದನ್ನು ಶ್ರೀಕಂಠಯ್ಯನವರು ಸಾಧ್ಯವಾಗಿಸಿದ್ದಾರೆ. ಗದಾಯುದ್ಧ ಕಾವ್ಯದಲ್ಲಿ ಒಂದು ನಾಟಕ ಅಡಗಿದೆ ಅದನ್ನು ಹೊರತೆಗೆಯಬೇಕು ಎನ್ನುವುದು ಶ್ರೀಯವರನ್ನು ಬಹಳ ದಿನಗಳಿಂದ ಕಾಡಿರಬೇಕು.

ಶ್ರೀಯವರ ಗದಾಯುದ್ಧ ನಾಟಕದ ನಾಯಕ ದುರ್ಯೋಧನ, ಭೀಮ ಪ್ರತಿನಾಯಕ, ನಾಟಕವು ದುರ್ಯೋಧನನ ದುರಂತ ಮರಣದಲ್ಲಿ ಕೊನೆಗಾಣುತ್ತದೆ. ನಾಟಕದ ಉದ್ದಕ್ಕೂ ದುರ್ಯೋಧನ ಮುಖ್ಯ ವ್ಯಕ್ತಿಯಾಗಿ ಗದಾಯುದ್ಧದ ಬಹಳಷ್ಟು ಭಾಗವನ್ನು ಆಕ್ರಮಿಸಿಕೊಂಡಿದ್ದಾನೆ. ಆತನು ಪಡುವ ಕಷ್ಟಗಳು, ಆತನ ಅವಸ್ಥೆ, ಆತನ ಗುಣಗಳು, ಆತನ ಛಲ, ಆತನ ಉದಾತ್ತ ಸ್ವಭಾವ, ಇವುಗಳು ಆತನೊಬ್ಬ ಮಹಾನುಭಾವ ಎನ್ನುವುದನ್ನು ಸಹೃದಯರಿಗೆ ಮನವರಿಕೆ ಮಾಡಿಕೊಡುತ್ತವೆ.

``ಕುರುಕ್ಷೇತ್ರ ಯುದ್ಧದಲ್ಲಿ ಕುರುಕುಲ ತಿಲಕ ದುರ್ಯೋಧನನನ್ನು ಬಿಟ್ಟು ಉಳಿದ ಎಲ್ಲಾ ವೀರಾಧಿವೀರರಾದ- ದ್ರೋಣ, ಕರ್ಣ, ಶಲ್ಯ ಮುಂತಾದವರು ಸತ್ತುಹೋಗಿದ್ದಾರೆ. ಅಜೇಯನೆಂಬ ಖ್ಯಾತಿಪಡೆದ ಭೀಷ್ಮ ಮಾತ್ರ ತನ್ನ ಶಸ್ತ್ರಗಳನ್ನು ತ್ಯಜಿಸಿ ಶರತಲ್ಪದ ಮೇಲೆ ಮಲಗಿ ಸಾಯುವ ಕಾಲವನ್ನು ಎದುರು ನೋಡುತ್ತಿದ್ದಾನೆ. ಪಾಂಡವರೈವರೂ ಬದುಕಿದ್ದಾರೆ.

ಈ ನಾಟಕದಲ್ಲಿ ಪ್ರಮುಖ ಭಾಗವೆಂದರೆ ಭೀಮ ದುರ್ಯೋಧನರ ಗದಾಯುದ್ಧ. ದುರ್ಯೋಧನನು ಭೀಷ್ಮರ ಸೂಚನೆಯ ಮೇರೆಗೆ ಸರೋವರದಲ್ಲಿ ತಲೆಮರೆಸಿಕೊಂಡಿರುತ್ತಾನೆ. ಸುಳಿವು ತಿಳಿದ ಪಾಂಡವರು ಕೃಷ್ಣನೊಂದಿಗೆ ಅಲ್ಲಿಗೆ ಬರುತ್ತಾರೆ. ಭೀಮಸೇನನು ದುರ್ಯೋಧನನನ್ನು ಕುರಿತು 'ರಣಹೇಡಿಯಂತೆ ನೀರಿನಲ್ಲಿ ತಲೆಮರೆಸಿಕೊಳ್ಳಬೇಡ' ಎಂದು ಅಬ್ಬರಿಸುತ್ತಾನೆ. ದುರ್ಯೋಧನನು ನಿಂದೆಯನ್ನು ಕೇಳಲಾರದೆ ಕೋಪದಿಂದ ಸರೋವರವನ್ನು ಬಿಟ್ಟು ಹೊರಗೆ ಬರುತ್ತಾನೆ. ಭೀಮ ದುರ್ಯೋಧನರಿಗೆ ಒಬ್ಬರಿಗೊಬ್ಬರಿಗೆ ವೀರಾವೇಶದಿಂದ ಗದಾಯುದ್ಧ ನಡೆಯುತ್ತದೆ. ದುರ್ಯೋಧನನು ಭೀಮನ ಗದೆಗೆ ಬಲಿಯಾಗುತ್ತಾನೆ. ತೊಡೆಮುರಿದು ಬೀಳುತ್ತಾನೆ. ಕುರು ಸಾರ್ವಭೌಮ ದುರ್ಯೋಧನ ಅನಾಥನಂತೆ ಕುರುಕ್ಷೇತ್ರ ರಣರಂಗದಲ್ಲಿ ಸಾಯುತ್ತಾನೆ.

ಶ್ರೀಯವರ ಗದಾಯುದ್ಧ ನಾಟಕದ ನಾಯಕ ಭೀಮನಲ್ಲ, ದುರ್ಯೋಧನ. ಭೀಮನ ಗದೆಯ ಹೊಡೆತಕ್ಕೆ ಸಿಕ್ಕು, ತೊಡೆಮುರಿದು ಬಿದ್ದವನು ದುರ್ಯೋಧನ ಸಾಯುವವನೂ ದುರ್ಯೋಧನನೆ, ನಾಟಕದ ಕೊನೆಗೆ

ದುರ್ಯೋಧನನ ಸಾವು. ರನ್ನನ ಭೀಮಸೇನ ವಿಜಯ, ಶ್ರೀಯವರ ಕೈಯ್ಯಲ್ಲಿ ಪರಿವರ್ತನೆಗೊಂಡು ಗದಾಯುದ್ಧ ನಾಟಕವಾಗಿದೆ. ದುರಂತ ನಾಟಕದ ದೃಷ್ಟಿಯಿಂದ ಹಾಗೂ ದುರಂತ ನಾಯಕನ ಸ್ವಭಾವದ ನಿರೂಪಣೆಯ ದೃಷ್ಟಿಯಿಂದ ನಾಟಕದಲ್ಲಿ ಬರುವ ಈ ಪದ್ಯಭಾಗವನ್ನು ಗಮನಿಸೋಣ:

ನುಡಿದುದನೆಯ್ದೆ ತುತ್ತ ತುದಿಯೆಯ್ದುವಿನಂ ನುಡಿದಂ ಚಲಂ ಚಲಂ
ಬಿಡಿದುದನೆಯ್ದೆ ಮುಂ ಪಿಡಿದುದಂ ಸಲೆ ಪೋಣ್ದ ಪೋಣ್ಕೆ ನೇ
ರ್ಪಡೆ ನಡೆವನ್ನೆಗಂ ನಡೆದನಳ್ಕದೆ ಬಳ್ಕದೆ ತನ್ನೊಡಲ್ ಪಡ
ಲ್ವಡುವಿನಮಣ್ಮುಗುಂದದೆಲೇನಭಿಮಾನಧನಂ ಸುಯೋಧನಂ

ಈ ಪದ್ಯದಲ್ಲಿ ನಿರೂಪಿತವಾಗಿರುವ ಉದಾತ್ತಗುಣಗಳು ದುರ್ಯೋಧನನಲ್ಲಿ ಇವೆ. ಇದೇ ಭಾವನೆಯನ್ನು ನಿರೂಪಿಸಬೇಕೆನ್ನುವುದೂ ಶ್ರೀಯವರ ಆಶಯವಾಗಿತ್ತು. ಇದರಲ್ಲಿ ದುರ್ಯೋಧನನ ಪಶ್ಚಾತ್ತಾಪದ ನಿರೂಪಣೆ ಇದೆ. 'ದೈವದ ಮುಂದೆ ನಾಮಸ್ತು' ಎನ್ನುವುದು ಇಲ್ಲಿಯ ಮುಖ್ಯ ಸಿದ್ಧಾಂತ. ತಾನು ಮಾಡಿದ ಪಾಪ ಕರ್ಮಗಳಿಗೆ ಪಶ್ಚಾತ್ತಾಪಪಡಬೇಕು, ದೇವರ ಸ್ಮರಣೆ ಮಾಡಬೇಕು. ಇದಿಲ್ಲದೆ ಸಾಯುವುದರಲ್ಲಿ ನಾಯಕನಿಗೆ ರುದ್ರಭವ್ಯತೆ ಕಂಡುಬರುವುದಿಲ್ಲ. ಇದನ್ನು ಸಾಧಿಸುವುದು ಶ್ರೀಯವರ ಗುರಿಯಾಗಿತ್ತು. ನಾಟಕದಲ್ಲಿ ಅದನ್ನು ಸಾಧಿಸಿದ್ದಾರೆ. ಈ ನಾಟಕದ ರಚನೆಯ ಮೂಲಕ ಅವರಿಗೆ ಪರಿಚಯವಿದ್ದ ಗ್ರೀಕ್ ಮತ್ತು ಷೇಕ್ಸ್ಪಿಯರ್ ಮಾದರಿಯ ಎರಡೂ ರುದ್ರನಾಟಕಗಳ ಕಲ್ಪನೆಯು ಇಲ್ಲಿ ಮೇಳವಿಸಿ 'ಗದಾಯುದ್ಧ ನಾಟಕಂ' ರೂಪುಗೊಂಡಿದೆ.

**ಅಶ್ವತ್ಥಾಮನ್**

'ಅಶ್ವತ್ಥಾಮನ್' ಕನ್ನಡನಾಟಕವು ಉಂಟುಮಾಡಿದಷ್ಟು ಕೋಲಾಹಲವನ್ನು ಕನ್ನಡ ನಾಡಿನಲ್ಲಿ ಬೇರಾವ ಗ್ರಂಥವೂ ಮಾಡಿಲ್ಲ'ವೆಂದು ಎಂ.ಆರ್. ಶ್ರೀನಿವಾಸ ಮೂರ್ತಿಯವರು ಹೇಳಿದ್ದಾರೆ. ಇದಕ್ಕೆ ಭಾರತೀಯ ಪೌರಾಣಿಕ ನಂಬಿಕೆಗಳಿಗೆ ಈ ನಾಟಕದಿಂದ ಆಗಿರುವ ಆಘಾತವೆ ಅಶ್ವತ್ಥಾಮನ್ ನಾಟಕವು ಪ್ರಕಟವಾದುದು ೧೯೨೯ ರಲ್ಲಿ. ಇದರ ರಚನಾ ವಿಧಾನ ಗ್ರೀಕ್ ನಾಟಕದ ಮಾದರಿಯಲ್ಲಿದೆ. ಈ ನಾಟಕದಲ್ಲಿ ಮೇಳಗಳು ಬರುತ್ತವೆ. ಇದು ಪಾಶ್ಚಾತ್ಯನಾಟಕದ ಮಾದರಿಯಲ್ಲಿ ಇದೆ. ಪಾಶ್ಚಾತ್ಯ ನಾಟಕವೊಂದನ್ನು ಕನ್ನಡಕ್ಕೆ ತರುವುದು ಶ್ರೀಯವರ ಉದ್ದೇಶವಾಗಿರಲಿಲ್ಲ. ಹಾಗಿದ್ದರೆ ಅವರು ಷೇಕ್ಸ್ಪಿಯರ್ ಕವಿಯ ಯಾವುದಾದರೊಂದು ನಾಟಕವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಆದರೆ ಅವರ ಉದ್ದೇಶ ಪಾಶ್ಚಾತ್ಯ ನಾಟಕವೊಂದರ ಪ್ರಭಾವದಿಂದ ಸ್ವತಂತ್ರ ಭಾರತೀಯ ನಾಟಕವನ್ನು ರಚಿಸುವುದೇ ಆಗಿತ್ತು. ಈ ಹಿನ್ನೆಲೆಯಲ್ಲಿ ನಮಗೆ ಹತ್ತಿರವೆನ್ನಬಹುದಾದ ಸೋಫೋಕ್ಲಸ್‌ನ 'ಏಜಾಕ್ಸ್' ನಾಟಕವನ್ನು ಆಯ್ದುಕೊಂಡರು. ಇದು ಮಹಾಭಾರತದ ಸೌಪ್ತಿಕಪರ್ವದಲ್ಲಿ ಬರುವ ಒಂದು ಪ್ರಸಂಗವನ್ನು ಆಧರಿಸಿದೆ. ಅಶ್ವತ್ಥಾಮನು ಧರ್ಮ ವಿರುದ್ಧವಾಗಿ ಪಾಂಚಾಲರನ್ನೂ ಉಪಪಾಂಡವರನ್ನೂ ಕೊಲ್ಲುತ್ತಾನೆ. ಸೋಫೋಕ್ಲಸ್‌ನ 'ಏಜಾಕ್ಸ್' ನಾಟಕದಲ್ಲಿಯೂ ಏಜಾಕ್ಸ್ ಮೂಕಪ್ರಾಣಿಗಳನ್ನು ಕೊಲ್ಲುತ್ತಾನೆ. ಇವೆರಡು

ಪ್ರಸಂಗಗಳಿಗೂ ಇರುವ ಸಾಮ್ಯ ಅಂಥ ಮಹತ್ತದಲ್ಲವಾದರೂ ಸ್ವಾಭಾವಿಕತೆಗೆ ಯಾವುದೇ ಕುಂದು ಬಾರದಂತೆ ಎರಡೂ ಕಡೆಯಿಂದ ಬಂದ ವಸ್ತುವನ್ನು ಸೇರಿಸಿ ಶ್ರೀಕಂಠಯ್ಯನವರು ನಾಟಕವನ್ನು ರಚಿಸಿದ್ದಾರೆ.

ಶ್ರೀಯವರ ನಾಟಕದ ನಾಯಕ ಅಶ್ವತ್ಥಾಮನ್. ತಾನು ಮಹಾ ಶೂರನೆನ್ನುವ ಅಹಂಕಾರ. ಕೊಬ್ಬಿ ದೈವ ಚಿತ್ರಕ್ಕೆ ಎದುರು ಬೀಳುತ್ತಾನೆ. ದೈವ ಬೀಸಿದ ಮಾಯೆಗೆ ಸಿಲುಕಿ ಹುಚ್ಚೆದ್ದು ಪಾಂಡವರ ಪಾಳೆಯವನ್ನು ರಾತ್ರಿ ಹೊಕ್ಕು, ತನ್ನ ಮಾಯೆಯಿಂದ ಉನ್ಮತ್ತನಾಗಿ ಪಶುಗಳು, ಹೆಂಗಸರು ಮಕ್ಕಳು ಮುಂತಾದವರನ್ನು ಕೊಲ್ಲುತ್ತಾನೆ. ಪಾಂಡವ ಪಕ್ಷಪಾತಿಯಾದ ಕೃಷ್ಣನೆಂದು ಒಂದು ಕುರಿಯನ್ನು ಹಿಂಸಿಸುತ್ತಾನೆ. ಅಶ್ವತ್ಥಾಮನ್ ಬುದ್ಧಿಪೂರ್ವಕವಾಗಿ ಇಂಥ ಕೆಲಸ ಮಾಡಿರಲಾರ ಏನೋ ದೈವದ ಮೋಸವಿರಬೇಕೆಂದು ಮಾತನಾಡಿಕೊಳ್ಳುವರು. ಅಶ್ವತ್ಥಾಮನು, ತಾನು ಕೌರವನ ಹಗೆಯನ್ನು ತೀರಿಸಿ ಸ್ವಾಮಿ ಭಕ್ತಿಯನ್ನು ತೋರಲು ಹೊರಟರೆ ದೈವ ಹೀಗೆ ಮಾಡಿತಲ್ಲಾ ಎಂದು ಮರುಗುತ್ತಾನೆ. ತಾನು ಕೊಂದ ಪಶುಗಳ ನಡುವೆ ಸಂಕಟಪಡುತ್ತಾ ಇಂಥ ದುಷ್ಕೃತ್ಯವನ್ನು ಮಾಡಿದ ತನಗೆ ಮರಣವೆ ಗತಿಯೆಂದು, ತನ್ನ ಅಪಕೀರ್ತಿಗೆ ಸಾವೇ ಸರಿಯೆಂದು ತೀರ್ಮಾನಿಸುತ್ತಾನೆ. ತಾನು ನಂಬಿದ ರುದ್ರನು ಕೊನೆಯಲ್ಲಿ ಕೈಬಿಟ್ಟು ಭಕ್ತಿಯ ಹಂಗು ಹರಿಯಿತೆಂದು, ಸುಖವನ್ನೇ ಅರಿಯದ ಬಾಳು ತನ್ನದೆಂದು ಮರುಗುತ್ತಾನೆ. ಕೊನೆಗೆ ಪಾಂಡವರನ್ನು ಶಪಿಸಿ ಖಡ್ಗದ ಮೇಲೆ ಬಿದ್ದು ಸಾಯುವನು. ಅಶ್ವತ್ಥಾಮನನ್ನು ಇಲ್ಲಿ ಯಾರೂ ಗೆಲ್ಲಲಿಲ್ಲ; ದೈವ ಮುರಿಯಿತು. ಅಶ್ವತ್ಥಾಮ ಮಹಾವೀರ, ಪೂಜ್ಯನು, ತನ್ನ ದೈವವೆ ಕೈಬಿಟ್ಟವನಲ್ಲಿ ದ್ವೇಷ ಸಾಧಿಸಬಾರದು ಎಂದು ಕೃಷ್ಣ ಪಾಂಡವರಿಗೆ ಸಮಾಧಾನ ಪಡಿಸುತ್ತಾನೆ. ಅಶ್ವತ್ಥಾಮ ಉದಾತ್ತನಾಯಕನ ಗುಣಗಳನ್ನು ಮೆರೆಯುತ್ತಾನೆ.

"ದೈವಂ
ತಪ್ಪಾಗಿ ನಡೆಸುವೊಡೆ, ಕಲಿ ಎಡಪುವನ್, ಪೇಡಿ ಬರ್ದುಕುವನ್, ನಗುವನ್,
ಈಗಳ್ ಏನ್ ಗೆಯ್ವೆನ್? ಕಂಡಂತೆ, ದೇವರ್ಕಳ್ ಒಲ್ಲದನ್; ಬೀರರ್
ನಗುವ ಪಾಂಡವರನ್; ಈ ಎಲ್ಲಮನ್ ಪೊರುವ ತಾಯ್ ಮುಟ್ಟೆ ಮುನಿವನ್'

ಮಹಾಭಾರತದ ಅಶ್ವತ್ಥಾಮನ್ ವೀರ, ಸರ್ವಸಮರ್ಥ, ಸಂಪನ್ನ. ಆದರೆ ದುರಹಂಕಾರಿ, ಸ್ವಾಭಿಮಾನಿ. ತನ್ನನ್ನು ರುದ್ರಾವತಾರನೆಂದು ತಿಳಿದು, ರುದ್ರನ ಒಲುಮೆಯೂ ಇಲ್ಲದೆ, ಆತನ ಕೋಪವೆ ಕಾರಣವಾಗಿ ದುರಂತ ನಾಯಕನಾಗುತ್ತಾನೆ.

'ಏಗಳ್ ಮನುಷನ್
ತಾನ್ ಮನುಷ್ಯನೆ ಎಂಬುದನ್ ಮಱೆತು, ಕಡುಕೊರ್ಬಿ, ಒಳ್ಳಿತರ್ಕಿಲ್ಲನ್,
ಆಗಳೇ ದೇವರ್ಕಳ್. ಅವನ ಬಾಟ್ಗೆಡರೊಡ್ಡಿ ಕೆಟಿಗುರುಳೆ ಪೊಯ್ವರ್.
ಎಂದುಂ ಅಶ್ವತ್ಥಾಮನ್ ಈ ಪಾಂಗೆ! ಎಳೆವೆಯೋಳ್, ಪರಸುತ್ತೆ ತಂದೆ
ಬಿಲ್ ಜಾಣನಾದೆ, ಗೆಲ್; ಮೊದಲ್ ಎಱಗಿ ದೇವತೆಗೆ, ಪೌರುಷದೆ ನೀನ್‌ಗೆಲ್-
ಅಯ್ಯನ್ ಇಂತೆನೆ, ಸೊರ್ಕಿ, ಮಗನ್ ಎನ್ಬನ್-ದೇವತೆಯ ಬಲಮ್ ಇದ್ದೊಡಯ್ಯ,
ಪೇಡಿಯುಂ ಗೆಲ್ದಪನ್, ಅವರ್ಗಳ ನೆರಂಬಾರದಾ ಗೆಲ್ಲವೆಣ್ಣ
ಮುಂದಲೆಯ ಈಟ್ವೆನ್! ಏನ್ ಗರ್ವಂ! ಇನ್ನೊರ್ಮೆ ಮಹದೇವ ಇಂದ್ರನ್

ಯುದ್ಧದೋಳ್ ಮೇಲಿರ್ದು, ಇತ್ತಪಗೆ. ಇತ್ತಪೊಯ್, ಕೊಳ್ ಗೆಲುವನ್ ಇತ್ತೆನ್.
ಎಂದುರ್ಬಿಸುತ್ತೆ  ಬರೆ, ಸಿಡುಕಿನಿಂದಾಳ್ ಆಡಬಾರದುದನ್ ಆಡಿ,
ಎಲೆ ರುದ್ರ, ಅದೋ ಅವರ ಬೆಂಬಲಂ ಪೋಗು; ಅಶ್ವತ್ಥಾಮನ್ ಇರ್ದ
ಮೊನೆ ಮುಱೆಯದೆಂದನ್, ಇಂತಪ್ಪ ನುಡಿಗಳನ್, ಆಳಾಗಿ ಪುಟ್ಟಿ
ಆಳ್ಗೆ ಮೀಱಿದ ಪೆರ್ಮೆ ಬಗೆಗಳಿನ್, ರುದ್ರನ ಕನಲ್ಕೆಯನ್ ತಲೆಗೆ
ತಂದುಕೊಂಡನ್'

ಈ ರೀತಿ ಅಶ್ವತ್ಥಾಮನು ರುದ್ರನ ಕೋಪಕ್ಕೆ ತುತ್ತಾಗಿ ದುರಂತವನ್ನು ಅನುಭವಿಸುತ್ತಾನೆ. ಕೊನೆಗೆ ಆತ್ಮಹತ್ಯೆಗೆ ಶರಣಾಗುತ್ತಾನೆ. ಅಶ್ವತ್ಥಾಮನು ಮಹಾ ದೇಶಭಕ್ತ, ಕನ್ನಡ ನಾಡಿನ ಕಣ್ಮಣಿ. ಎಷ್ಟೇ ಪೌರುಷವಿರಲಿ, ಐಶ್ವರ್ಯವಿರಲಿ, ಮನುಷ್ಯ ಮಾತ್ರದವನು ಅಹಂಕಾರದಿಂದ ಮದಿಸಿ ದೇವತೆಗಳನ್ನು ಧಿಕ್ಕರಿಸಿದರೆ ದೇವತೆಗಳು ಅಂಥವರನ್ನು ಮುರಿಯುವರು:- ತಪ್ಪಾಗಿ ನಡೆಸಿದರೆ ಆಗುವ ಪರಿಣಾಮ:

'ಇಂದೇನೋ, ಮುಂದೇನೊ, ಮುನ್ನ ಆಳ್ ಕಾಣನ್.
ಬಂದುದನೆ ಕೊಂಡುಂಡು ತಾಳ್ದವನೆ ಜಾಣನ್,
ರುದ್ರನ್ ಒಲ್ದೊಡೆ ಉಟಿವು,
ಒಲ್ಲದೊಡೆ ಒಡನಟಿವು,
ತಟ್ಗೆ ನಡೆದೊಡೆ ರುದ್ರನ್ ಒಲ್ಲದೆಯೆ ಮಾಣನ್,
ಅಳವಱಿತು ನಡೆಯೆ ಶಿವನ್ ಒಲ್ಲದೆಯೆ ಮಾಣನ್'

**ಪಾರಸಿಕರು:**

ಪಾರಸಿಕರು ೧೯೩೫ ರಲ್ಲಿ ಪ್ರಕಟವಾದ ಪ್ರಸಿದ್ಧ ಗ್ರೀಕ್ ನಾಟಕಕಾರ ಈಸ್ಕಲಸ್‌ನ The Persae ಎನ್ನುವ ಕೃತಿಯ ಅನುವಾದ. ನಾಟಕದ ವಸ್ತು; ಪಾರಸಿಕ ಸಾಮ್ರಾಜ್ಯದ ಮೇಲೆ ಗ್ರೀಕರು ನಡೆಸಿದ ಹೋರಾಟ ಹಾಗೂ ವಿಜಯ- ಅಥವಾ ಪಾರಸಿಕರು ಅನುಭವಿಸಿದ ಸೋಲು. ಈಸ್ಕಲಸ್ ಸ್ವತಃ ಹೋರಾಟಗಾರ, ಆತ ಸಾಲಮಿಸ್ ಕದನದಲ್ಲಿ ಹೋರಾಡಿದ್ದವನು. ಆದ್ದರಿಂದ ಅವನು ಅದೇ ವಿಷಯವನ್ನು ಕುರಿತು ಬರೆದಿರುವುದು ಆಶ್ಚರ್ಯವೇನೂ

ಅಲ್ಲ. ಗ್ರೀಕ್ ಮಹಾ ಕವಿಗಳು ಸಾಮಾನ್ಯವಾಗಿ ರುದ್ರ ನಾಟಕಗಳಿಗೆ ಪೌರಾಣಿಕ ವ್ಯಕ್ತಿಗಳ ವಿಷಯವನ್ನು ಕುರಿತು ಬರೆಯುವುದು ವಾಡಿಕೆ. ಆದರೆ ಈಸ್ಕಲಸ್ ಮಹಾಕವಿ ತನ್ನ ನಾಟಕಕ್ಕೆ ಗ್ರೀಕ್ ಚರಿತ್ರೆಯ ಒಂದು ಸಮಕಾಲೀನ ಸಂಗತಿಯನ್ನ ಆರಿಸಿಕೊಂಡು 'ಪಾರಸಿಕರು' ನಾಟಕವನ್ನು ಬರೆದಿರುವುದು ಒಂದು ವಿಶೇಷವೆಂದು ವಿದ್ವಾಂಸರು ಗುರುತಿಸಿದ್ದಾರೆ. ಪೌರಾಣಿಕ ವ್ಯಕ್ತಿಗಳ ವಿಷಯವನ್ನು ಕುರಿತು ರಚಿಸಿದ ನಾಟಕಗಳಲ್ಲಿ ಏರಿದಷ್ಟು ಆತನ ಶಕ್ತಿ/ಸಾಮರ್ಥ್ಯ ಇಲ್ಲಿ ಏರಲಾಗಲಿಲ್ಲ ಎಂದು ಎ.ಎನ್.ಮೂರ್ತಿರಾಯರು ಅಭಿಪ್ರಾಯಪಡುತ್ತಾರೆ.

ಪರ್ಸಾ ಚಕ್ರಾಧಿಪತ್ಯದ ಚಕ್ರವರ್ತಿ ಕ್ಷಯಾರ್ಷ. ಅವನು ಗ್ರೀಸ್ ಚಕ್ರಾಧಿಪತ್ಯದ ಮೇಲೆ ದಂಡೆತ್ತಿಹೋಗುತ್ತಾನೆ. ಕ್ಷಯಾರ್ಷನೂ ಅವನ ಸೈನಿಕರೂ ಮಹಾ ಸೋಲನ್ನು ಅನುಭವಿಸುತ್ತಾರೆ. ಪರ್ಸಾ ಚಕ್ರಾಧಿಪತ್ಯ ಕುಸಿದು ಬೀಳುತ್ತದೆ. ಆ ಸೋಲಿನ ನೋವು, ಗೋಳು 'ಪಾರಸಿಕರು' ನಾಟಕದ ವಸ್ತು.

ನಾಟಕ ಆರಂಭವಾಗುವ ವೇಳೆಗೆ ಯುದ್ಧ ಮುಗಿದುಹೋಗಿ ಪರ್ಸಾ ಸೋಲನ್ನು ಅನುಭವಿಸುತ್ತದೆ. ನಡೆಯುವ ದುರಂತ ನಾಟಕದ ಆರಂಭಕ್ಕೆ ಮೊದಲೇ ನಡೆದು ಹೋಗಿರುತ್ತದೆ. ಯುದ್ಧ ಮುಗಿದು ಪರ್ಷಿಯಾ ಸೋತು ಆಗಿದೆ. ಇಲ್ಲಿ ಕಾಣುವುದು ಸೋಲಿನ ನಿರೂಪಣೆ ಮತ್ತು ಸೋತ ಮನುಷ್ಯರು ಮತ್ತು ಮುಖ್ಯವಾಗಿ ಗ್ರೀಕರು ಕಲಿಯಬೇಕಾದ ಈಸ್ಕಲಸ್ ಬಯಸುವ ನೀತಿ.

ಈಸ್ಕಲಸ್‌ನು ಯುದ್ಧದ ಕಥೆಯನ್ನು ಉದಾತ್ತವಾದ ಧಾರ್ಮಿಕ ತತ್ವದ ಬೋಧನೆಗಾಗಿ ಅಳವಡಿಸಿಕೊಂಡಿದ್ದಾನೆ. ಈ ತತ್ವ ದೊಡ್ಡದೊಂದು ಚಕ್ರಾಧಿಪತ್ಯ ಉರುಳಿಬಿದ್ದ ಕತೆಯನ್ನು ಹೇಳಿದ್ದರೆ ಒಂದು ಕರುಣಾಜನಕ ಕಥೆಯಾಗುತ್ತಿತು. ಆದರೆ ದುರಂತ ನಾಟಕವಾಗುತ್ತಿರಲಿಲ್ಲ. ಇಲ್ಲಿ ಬರುವ ರಾಜ ಯಾವುದೋ ದೇಶದ ರಾಜನೆನ್ನುವುದಕ್ಕಿಂತ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಅನುಭವಿಸುವ ವ್ಯಕ್ತಿಯಾಗಿ ಕಾಣುತ್ತಾನೆ. ದೈವ ಗ್ರೀಕರ ಪರವಾಗಿ ಇದೆ ಎನ್ನುವುದಕ್ಕಿಂತ ಪಾರಸಿಕರ ಅಧರ್ಮಕ್ಕೆ ಎದುರಾಗಿ ನಿಲ್ಲುತ್ತದೆ.

ಈಸ್ಕಲಸ್ ಈ ನಾಟಕದಲ್ಲಿ ಗ್ರೀಕರ ವಿಜಯದ ಅಟ್ಟಹಾಸವನ್ನು ಮೆರೆಸುವುದಿಲ್ಲ. ಇಲ್ಲಿ ಆತ ಹಾಡಿರುವುದು ಸೊಕ್ಕಿದ ಮಾನವನ ಚರಮಗೀತೆಯನ್ನು. ಒಬ್ಬನೇ ಒಬ್ಬ ಗ್ರೀಕ್ ವೀರನ ಹೆಸರನ್ನೂ ಹೇಳುವುದಿಲ್ಲ ಬದಲಾಗಿ ಪಾರಸಿಕರ ದೊಡ್ಡ ಪಟ್ಟಿಯನ್ನೇ ನೀಡುತ್ತಾನೆ. ಗ್ರೀಕರ ಗೆಲುವನ್ನು ಹೇಳಿದ್ದರೆ ಗೆಲುವಿನ ಸಂಭ್ರಮವನ್ನು ಹೇಳಿದಂತಾಗುತ್ತಿತ್ತು. ಆದರೆ ಸೋತ ಪರ್ಶಿಯನ್ನರ ಕಥೆಯನ್ನು ಹೇಳುವುದರಿಂದ ಮನುಷ್ಯನ ಅಹಂಕಾರ-ಪತನಗಳನ್ನು ಸೂಚಿಸಿ ತನ್ನ ನಾಡಿನ ಗ್ರೀಕರಿಗೂ ಮನುಷ್ಯನ ಮಿತಿಯನ್ನು ಬೋಧಿಸಲು ಸಹಾಯವಾಗಿದೆ. ಈ ನಾಟಕದಲ್ಲಿ ಮನುಷ್ಯನ ಬದುಕು, ಮನುಷ್ಯ ದೇವರ ಸಂಬಂಧ, ಬದುಕಿನಲ್ಲಿ ವಿಧಿಯ ಕೈವಾಡ ಮುಂತಾದ ವಿಷಯಗಳನ್ನು ಈಸ್ಕಲಸ್ ತುಂಬಾ ತಾತ್ವಿಕವಾಗಿ ಮಂಡಿಸಿದ್ದಾನೆ. ಈಸ್ಕಲಸ್‌ನ ಅಮೂರ್ತವಾದ ವಿಚಾರಗಳಿಗೆ ಈ ನಾಟಕ ಒಂದು ಮೂರ್ತ ರೂಪವನ್ನು ನೀಡಿದೆ.

ಈ ನಾಟಕ ಅಂಥ ಜನಪ್ರಿಯ ನಾಟಕವಲ್ಲ. ಪಾರಸಿಕರು ಕೇವಲ ಅಭ್ಯಾಸ ಯೋಗ್ಯವಾದ ಒಂದು ಕೃತಿ.

## ಅಧ್ಯಾಯ ಐದು: ಇತರ ಕ್ಷೇತ್ರಗಳಲ್ಲಿಯ ಸಾಧನೆ.

**ಭಾಷಾ ಯೋಜಕರಾಗಿ**

'ಶ್ರೀ' ಅವರು ಕನ್ನಡ ಭಾಷೆಯನ್ನು ಕುರಿತು ಮಾಡಿದ ಚಿಂತನೆಗಳು ಮೂರು ರೀತಿಯವುಗಳು. ೧) ಕನ್ನಡ ಅಭಿಮಾನದ ಮಾತುಗಳು ೨) ಕನ್ನಡದ ಬೆಳವಣಿಗೆಯ ಕುರಿತ ಆಲೋಚನೆಗಳು ೩) ಸಂಶೋಧನಾ ಬರಹಗಳು.

'ಶ್ರೀ' ಅವರಿಂದ ರಚಿತವಾದ ಸಾಹಿತ್ಯ ಕೃತಿಗಳೆಲ್ಲ ಪ್ರಮುಖವಾಗಿ ಪದ್ಯರೂಪದಲ್ಲಿವೆ. ಶತಮಾನಗಳಿಂದ ಚರ್ವಿತ ಚರ್ವಣವಾಗಿದ್ದ ಕಾವ್ಯ ಪರಂಪರೆಯನ್ನು ಮುರಿದು ಹೊಸ ಮಾರ್ಗವನ್ನು ರೂಢಿಸಿಕೊಳ್ಳಬೇಕೆಂಬ ಬಯಕೆ 'ಶ್ರೀ' ಅವರಿಗೆ ಇತ್ತು. ಕನ್ನಡಕ್ಕೆ ಹೊಸ ವಿಷಯ ಹಾಗೂ ಭಾಷೆಯನ್ನು ನೀಡಬೇಕೆನ್ನುವ ತವಕ ಶ್ರೀ ಅವರಿಗೆ ಇತ್ತು. ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಹಾಗೂ `A Hand Book of Rhetoric' ಎಂಬ ಕೃತಿಯಲ್ಲಿ ಇದು ಅಭಿವ್ಯಕ್ತವಾಗಿದೆ. ಈ ಆಲೋಚನೆಗಳು 'ಅವರ ಸ್ವತಂತ್ರ ಹಾಗೂ ಅನುವಾದಿತ ಕೃತಿಗಳ ಭಾಷೆಯಲ್ಲಿ ಮೂರ್ತರೂಪ ಪಡೆದಿರುವುದನ್ನು ನೋಡಬಹುದು. ಕನ್ನಡ ಕಾವ್ಯದ ಭಾಷೆ ಹೇಗಿರಬೇಕು? ರೂಪ ಹೇಗಿರಬೇಕು ಎನ್ನುವುದನ್ನು 'ಸದ್ಯಕ್ಕೆ... ದೊಡ್ಡ ಕವನಗಳನ್ನಾಗಲಿ, ಸ್ವತಂತ್ರ ನಾಟಕಗಳನ್ನಾಗಿ ಬರೆಯತಕ್ಕದ್ದಲ್ಲ' ಇನ್ನು ಮುಂದೆ ಹೊಸಗನ್ನಡವನ್ನೇ ಬಳಸಬೇಕು, ಹಳಗನ್ನಡವನ್ನು ಸೀಮಿತವಾಗಿ ಬಳಸಬೇಕು ಇತ್ಯಾದಿ, ಇತ್ಯಾದಿ. ಪರಭಾಷೆಯನ್ನು ಅನಿವಾರ್ಯವಾದಲ್ಲಿ ಮಾತ್ರ ಸ್ವೀಕರಿಸಬೇಕು. ಬಳಕೆಗೆ ಬಂದು ನೆಲೆ ನಿಂತ ಶಬ್ದಗಳನ್ನು ಮಾತ್ರ ಸ್ವೀಕರಿಸಬೇಕು, ಇಂಗ್ಲಿಷ್, ಹಿಂದೂಸ್ತಾನಿ ಶಬ್ದಗಳ ನಡುವೆ ಆಯ್ಕೆಯ ಪ್ರಶ್ನೆ ಬಂದಾಗ ಹಿಂದೂಸ್ತಾನಿ ಶಬ್ದಗಳನ್ನು ಸ್ವೀಕರಿಸಬೇಕು. ದೇಶೀಯ ಶಬ್ದಗಳಿಗೆ ಹೊಸ ಭಾವ-ಅರ್ಥ ನೀಡಿ ಹಿಗ್ಗಿಸಿ-ಕುಗ್ಗಿಸಿ ಬಳಸಬೇಕು ಎನ್ನುವುದು ಶ್ರೀ ಅವರ ಸ್ಪಷ್ಟ ನಿಲುವಾಗಿತ್ತು.

ಅರ್ಥವಾಗದ ಹಳಗನ್ನಡವನ್ನಾಗಲಿ, ಕನ್ನಡಕ್ಕೆ ಒಗ್ಗದ ಸಂಸ್ಕೃತ ಶಬ್ದಗಳನ್ನಾಗಲಿ ಬಳಸಬಾರದೆಂದು ಶ್ರೀ ಅವರು ಖಡಾಖಂಡಿತವಾಗಿ ಅಭಿಪ್ರಾಯ ಪಡುತ್ತಾರೆ.

ಕೆಲವು ಉದಾಹರಣೆಗಳನ್ನು ಗಮನಿಸಬಹುದು :

೧) ರೂಢಿಯಲ್ಲಿರುವ ಪದಗಳು - ಒತ್ತುವ ಕಾಗದ, ಗುಂಡುಸೂಜಿ, ಕಬ್ಬಿಣದ ಪೆಟ್ಟಿಗೆ, ಕೆಂಪು ಜನ, ಭೂತಕನ್ನಡಿ, ಕೈವಸ್ತ, ಸೀಮೆ ಎಣ್ಣೆ, ಸಿಡಿಮದ್ದು ಇತ್ಯಾದಿ.

೨) ಇರುವ ಮಾತುಗಳ ಅರ್ಥವನ್ನು ಹಿಗ್ಗಿಸುವುದು - ಕಂಬಿ, ಅಚ್ಚು, ಪತ್ರಿಕೆ, ತಂತಿ, ಯಂತ್ರ, ಗುಂಡು.

೩) ಜನರಲ್ಲಿ ಈಗಾಗಲೇ ಬಳಕೆಯಲ್ಲಿ ಮಾತ್ರ ಇದ್ದು ಗ್ರಂಥಕ್ಕೆ ಯೋಗ್ಯವಾದ ಪದಗಳು. ಉದಾ.: ಫಸಲು, ಅಂಬಾರಿ, ಇನಾಮು, ಕರಾರು, ಜವಳಿ, ಪ್ಲೇಗು, ಬ್ಯಾಂಕು, ಪೊಲೀಸು ಇತ್ಯಾದಿ.

೪) ಇಂಗ್ಲಿಷ್ ಮತ್ತು ಹಿಂದೂಸ್ತಾನಿ ಶಬ್ದಗಳಲ್ಲಿ ಆಯ್ಕೆಮಾಡಬೇಕಾದ ಪದಗಳು. ಉದಾ.: ಕಛೇರಿ, ಚುನಾವಣೆ, ಸರ್ಕಾರ, ಕಾನೂನು, ಗಡಿಯಾರ, ಬಂದೂಕು

೫) ಜನಸಾಮಾನ್ಯರಲ್ಲಿ ಬಳಕೆಯಲ್ಲಿ ಇರುವ ಇಂಗ್ಲಿಷ್ ಶಬ್ದಗಳು. ಉದಾ: ಲಿಟರೇಚರ್, ರೆಸಲ್ಯೂಷನ್, ಕಂಪಲ್ಸರಿ, ಟೈಂಟೇಬಲ್, ಗೌರ್ನಮೆಂಟ್ ಇತ್ಯಾದಿ.

೬) ಸಾಮಾನ್ಯ ವಿಷಯವನ್ನು ಕುರಿತು ಬರೆಯುವಾಗ ಹೆಚ್ಚು ಅರ್ಥವಾಗುವ ಪದಗಳನ್ನ ಬಳಸಬೇಕು, ಪರ್ಯಾಯ ಪದಗಳನ್ನು ಬಳಸಬಾರದು. ಉದಾ: ೧) ಮಾರ್ಗ, ಬೀದಿ, ದಾರಿ, ರೋಡು, ರಸ್ತೆ ೨) ವಿಧಿ, ಶಾಸನ, ನಿಯಮ, ನಿಬಂಧನೆ, ಕಟ್ಟಳೆ ೩) ಲಾ, ಕಮಾಂಡ್, ಆರ್ಡರ್, ಕಾನೂನು, ಕಾಯಿದೆ ಇತ್ಯಾದಿ. ೭) ಶಾಸ್ತ್ರ, ತತ್ತ್ವ, ವೃತ್ತಿಗಳನ್ನು ಹೇಳುವಾಗ ಅನ್ಯಶಬ್ದಗಳನ್ನೇ ಸೇರಿಸುವುದು ಮೇಲು ಹಾಗೂ ತೂಕ ಮತ್ತು ಅಳತೆಗೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ಮಾನ್ಯತೆ ಪಡೆದಿರುವ ಶಬ್ದಗಳನ್ನೇ ಚಲಾವಣೆಗೆ ತರಬೇಕು. ವೈಜ್ಞಾನಿಕ ಪದಕೋಶಗಳು ವಿಶೇಷವಾಗಿ ಅನ್ಯಭಾಷೆಯ ಪದಗಳಾಗಿರುವುದು ಸಹಜವಾಗಿರುತ್ತವೆ. ಉದಾ: ಮೀಟರ್, ಲೀಟರ್, ಕಿ.ಗ್ರಾಂ. ರೆಡಾರ್ ಇತ್ಯಾದಿ.

**ಲಿಪಿ ಸಂಸ್ಕರಣಕಾರರಾಗಿ**

ಯಾವುದೇ ಒಂದು ಭಾಷೆಯ ಚಾಲ್ತಿಯಲ್ಲಿರುವ ಲಿಪಿಯನ್ನು ಬದಲಾವಣೆ ಮಾಡಲು ಅಥವಾ ಸಂಸ್ಕರಿಸಲು ಅದಕ್ಕೆ ಒಂದು ಪ್ರಬಲವಾದ ಕಾರಣವಿರಬೇಕು. ಲಿಪಿ ಭಾಷೆಯನ್ನು ಹಿಡಿದಿಡುವ ಸಾಧನ. ಭಾಷೆ ನಾವಾಡುವ ಮಾತು. ಕನ್ನಡ ಲಿಪಿ ಕ್ರಿ.ಶ. ೩ನೆಯ ಶತಮಾನದ ಅಶೋಕನ ಶಾಸನಗಳ ಬ್ರಾಹ್ಮೀ ಲಿಪಿಯಿಂದ ಉಗಮಹೊಂದಿ ಅನೇಕ ಹಂತಗಳಲ್ಲಿ ವಿಕಾಸಹೊಂದಿ ಈಗಿನ ಸ್ವರೂಪವನ್ನು ಪಡೆದಿದೆ.

೧೯೩೬ರಲ್ಲಿ ಬಿ.ಎಂ.ಶ್ರೀ ಅವರು ಕನ್ನಡ ಅಕ್ಷರಗಳನ್ನು ಸುಧಾರಣೆ ಮಾಡಬೇಕೆಂದು ಕಾರ್ಯಪ್ರವೃತ್ತರಾಗುತ್ತಾರೆ. ಆಡಳಿತ ಭಾಷೆಯಲ್ಲಿ ಕನ್ನಡ ಬಳಕೆಯಾಗಬೇಕು, ನಿತ್ಯದ ವ್ಯವಹಾರದಲ್ಲಿ ಎಲ್ಲಾ ಕಡೆ ಕನ್ನಡ ಸಮಗ್ರವಾಗಿ, ಸಮರ್ಥವಾಗಿ ಚಲಾವಣೆಗೆ ಬರಬೇಕು ಎನ್ನುವುದು ಶ್ರೀ ಅವರ ಆಶಯವಾಗಿತ್ತು. ಈ ದಿಸೆಯಲ್ಲಿ ಇದ್ದ ತೊಡಕು ಎಂದರೆ ಕನ್ನಡ ಲಿಪಿಗಳು. ಇವುಗಳನ್ನು ಸರಳೀಕರಿಸಿ ಕನ್ನಡ ಬೆರಳಚ್ಚುಯಂತ್ರದಲ್ಲಿ ಬಳಕೆಯಾಗಲು ಅನುಕೂಲವಾಗುವಂತೆ ಸುಧಾರಿಸುವುದು ಸೂಕ್ತವೆಂದು ಭಾವಿಸಿ ಇದಕ್ಕಾಗಿ ಅಕ್ಷರ ಸಂಸ್ಕರಣ ಸಮ್ಮೇಳನವನ್ನು ಏರ್ಪಡಿಸುತ್ತಾರೆ. ಇದಕ್ಕಾಗಿ ಕರ್ನಾಟಕದ ಎಲ್ಲಾ ಕಡೆಗಳಿಂದ ಸಲಹೆ, ಸೂಚನೆಗಳನ್ನು ಬರಮಾಡಿಕೊಳ್ಳಲಾಯಿತು.

**ಸಲಹೆಗಳ ಸಾರಾಂಶ**

೧) ರೋಮನ್ ಹಾಗೂ ದೇವನಾಗರಿ ಲಿಪಿಯನ್ನು ಸ್ವೀಕರಿಸುವುದು ಸೂಕ್ತವಾಗುವುದಿಲ್ಲ.

೧) ಸ್ವರಾಕ್ಷರಗಳಲ್ಲಿ ಹ್ರಸ್ವಸ್ವರಗಳಿಗೆ ಅವುಗಳ ಪಕ್ಕದಲ್ಲಿ ದೀರ್ಘಚಿಹ್ನೆಯನ್ನು ಕೊಟ್ಟು ದೀರ್ಘಾಕ್ಷರ ಮಾಡಬಹುದು. ೩) ವರ್ಗೀಯ ವ್ಯಂಜನದ ಹತ್ತು ಮಹಾಪ್ರಾಣಗಳನ್ನು ತೆಗೆದು ಅಲ್ಪಪ್ರಾಣಗಳನ್ನೇ ಮಹಾಪ್ರಾಣ ಚಿಹ್ನೆಯಲ್ಲಿ ಸೇರಿಸಬಹುದು - ಮುಂತಾದವು ಸೇರಿದಂತೆ ಹಲವು ಸಲಹೆಗಳು ಬಂದವು. ಆದರೆ ಜನತೆಯ ಪ್ರೋತ್ಸಾಹಕ್ಕಿಂತ ವಿರೋಧವೇ ಹೆಚ್ಚಾಗಿ ಕಂಡುಬಂದು ಅಕ್ಷರ ಸಂಸ್ಕರಣ ಕಾರ್ಯ ಅಲ್ಲಿಗೇ ನಿಂತುಹೋಯಿತು.

ಬಿ.ಎಂ.ಶ್ರೀ ಅವರು ಸುಧಾರಿಸಲು ಬಯಸಿದ ಕನ್ನಡ ಲಿಪಿಯಲ್ಲಿ ರಚಿಸಿದ ಕವಿತೆಯ ಸಾಲುಗಳನ್ನು ಗಮನಿಸೋಣ.

ಕನ್‌ನಡದ ಬೕವುಟ
ಒೕಹೊ ಕನ್‌ನಡ ನೕಡು, ಅೕಹ ಕನ್‌ನಡನುಡಿ!
ಎೕರಿಸಿ, ಹೕರಿಸಿ, ಕನ್‌ನಡದ ಬೕವುಟ!

ಹೕರಿಸಿ, ತೂೕರಿಸಿ, ಕೆಚ್‌ಚೆದೆಯ ಬೕವುಟ!
ಗೕಳಿಯಲಿ ಫಟಫಟ, ದೕಳಿಯಲಿ ಚಟಚಟ,
ಉರಿಯಿತೋ ಉರಿಯಿತು ಹಗೆಯ ಹಟ ಮನೆ ಮಟ,
ಹೕಳ್ ಹೕಳ್ ಸುರಿಯಿತು ಹಗೆಯ ಬೕಡಕ್‌ಕಟ!
ಬೕಳ್ ಕನ್‌ನಡ ತೕಯ್!
ಎೕಳ್ ಕನ್‌ನಡ ತೕಯ್
ಅೕಳ್ ಕನ್‌ನಡ ತೕಯ್!
ಕನ್‌ನಡಿಗರೊಡತಿ ಒೕ ರೕಜೕಶ್‌ವರೀ!

**ಸಂಶೋಧಕರಾಗಿ - ವಿಮರ್ಶಕರಾಗಿ**

'ಬಿ. ಎಂ. ಶ್ರೀಯವರನ್ನು ವಿಮರ್ಶಕರನ್ನಾಗಿ ಮತ್ತು ಸಂಶೋಧಕರನ್ನಾಗಿ ಗುರುತಿಸಿ, ಅವರ ವಿಮರ್ಶಾ ತತ್ವಗಳನ್ನು ಸಂಗ್ರಹಿಸಿ ವಿಶ್ಲೇಷಿಸುವ ಯಾವುದೇ ಪ್ರಯತ್ನವಾದರೂ, 'ವಿಮರ್ಶೆ' ಎಂಬ ಚಟುವಟಿಕೆಯನ್ನು 'ಸಾಹಿತ್ಯವನ್ನು ಕುರಿತ ಸಾಮಾನ್ಯ ಚಿಂತನೆ' ಎಂಬ ನೆಲೆಯಲ್ಲಿ ವ್ಯಾಖ್ಯಾನಿಸಬಹುದು. ಇಂದು ನಾವು 'ವಿಮರ್ಶೆ ಎಂಬ ಶಬ್ದ ಪಡೆದಿರುವ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ನೆಲೆಗಳನ್ನು ಶ್ರೀ ಅವರಲ್ಲೂ ಗುರುತಿಸಲು ಸಾಧ್ಯವಾಗುವುದಾದರೂ, ಇಂದಿನ ವಿಮರ್ಶೆಯ ಪರಿಕರಗಳನ್ನು ಅವರಲ್ಲಿ ನಿರೀಕ್ಷಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಕನ್ನಡ ವಿಮರ್ಶೆಯ ಮೊದಲ ಹೆಜ್ಜೆಗಳನ್ನು ಮಾತ್ರ ಶ್ರೀ ಅವರ ಬರಹಗಳಲ್ಲಿ ಕಾಣಬಹುದು. ಅವರು ರೂಢಿಸಿದ ಚಿಂತನೆಗಳು ನಾಲ್ಕು ದಶಕಗಳ ಕಾಲವಾದರೂ ಕನ್ನಡ ವಿಮರ್ಶಾ ಚಿಂತನೆಯ ಒಂದು ಪ್ರವಾಹವನ್ನಾದರೂ ಪ್ರಭಾವಿಸಿತ್ತು ಎಂಬುದು ಗಮನಾರ್ಹ.'

ಶ್ರೀ ಅವರ ಸಾಹಿತ್ಯವನ್ನು ಕುರಿತು ಬರೆದ ಪುಸ್ತಕ ಮೊದಲು ಪ್ರಕಟಗೊಂಡದ್ದು ೧೯೧೯ರಲ್ಲಿ. ಅಲ್ಲಿಂದ ಮುಂದೆ ಅವರು ಸುಮಾರು ಎರಡು ದಶಕಗಳವರೆಗೆ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಬರೆದಿದ್ದಾರೆ. ಇವರ ಬರಹಗಳಲ್ಲಿ

ಪ್ರಮುಖವಾಗಿ ಗಮನಿಸಬಹುದಾದ ಅಂಶಗಳೆಂದರೆ ೧) ಕನ್ನಡದ ಅಭಿಮಾನವನ್ನು ಉಕ್ಕಿಸಲು ಆಡಿದ ಮಾತುಗಳು ೨) ಕನ್ನಡವನ್ನು ಹೇಗೆ ಬೆಳೆಸಬೇಕು ಎನ್ನುವ ಕುರಿತು ನಡೆಸಿದ ಆಲೋಚನೆಗಳು ಮತ್ತು ೩) ಸಂಶೋಧನಾ ಬರಹಗಳು, ಶ್ರೀ ಅವರ ವಿಮರ್ಶಾದೃಷ್ಟಿ ವಿಶೇಷವಾಗಿ ತೌಲನಿಕ ಅಧ್ಯಯನಕ್ಕೆ ಸಂಬಂಧ ಪಟ್ಟಿದ್ದಾಗಿರುತ್ತದೆ. ಇವರ ರುದ್ರ ನಾಟಕಗಳು, ಇಂಗ್ಲಿಷ್ ಗೀತೆಗಳು ವಿಶೇಷವಾಗಿ ಆಂಗ್ಲ ಸಾಹಿತ್ಯದ ಪ್ರಭಾವದಿಂದ ಮೂಡಿಬಂದವುಗಳು. 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಶ್ರೀ ಅವರ ವಿಮರ್ಶೆಗೆ ಹಾಗೂ ಸಂಶೋಧನೆಗೆ ಉತ್ತಮ ಉದಾಹರಣೆಗಳು.

**ಕನ್ನಡದ ಬಗೆಗಿನ ಒಲವು, ಕರ್ನಾಟಕ ಕುರಿತ ವಿಚಾರಗಳು, ಕನ್ನಡ ಸೇನಾನಿ.**

ಶ್ರೀಯವರು ಕನ್ನಡದ ಒಬ್ಬ ಸಮರ್ಥ ಸೇನಾನಿ. ಕನ್ನಡದ ಹಿತ ಸಾಧನೆಗಾಗಿ ಆರಂಭವಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು. ಕನ್ನಡ ಸಾಹಿತ್ಯ ಪರಿಷತ್ತು ೧೯೧೫ ರಲ್ಲಿ ಭಾರತರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಮುಂದಾಲೋಚನೆಯಿಂದ ಆರಂಭವಾದ ಸಂಸ್ಥೆ, ಕನ್ನಡಿಗರೂ ಹೊರನಾಡ ಕನ್ನಡಿಗರೂ ಸೇರಿ ಕನ್ನಡ ಸಾಹಿತ್ಯ ಸಂಸ್ಕೃತಿಗಳನ್ನು ಸಂರಕ್ಷಿಸಿ ಅಭಿವೃದ್ಧಿಗೊಳಿಸಿಕೊಳ್ಳುವುದಕ್ಕಾಗಿ ಸ್ಥಾಪಿತವಾದ ಕನ್ನಡಿಗರ ಪ್ರಾಥಮಿಕ ಸಂಸ್ಥೆ. ಆರಂಭದಿಂದಲೂ ಪರಿಷತ್ತಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರು ಪರಿಷತ್ತಿನ ಅಭಿವೃದ್ಧಿಗಾಗಿ ದುಡಿದಿದ್ದರು. ೧೯೩೮ ರಲ್ಲಿ ಶ್ರೀಕಂಠಯ್ಯನವರು ಉಪಾಧ್ಯಕ್ಷರಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಪರಿಷತ್ತಿನ ಸ್ವರೂಪವನ್ನೇ ಬದಲಾಯಿಸಿದರು.

ಕನ್ನಡಿಗರಾದ ನಾವು ಸಂಘಟಿತರಾಗಬೇಕು. ನಮ್ಮ ನಾಡು ನುಡಿಗೆ ಸೇವೆ ಸಲ್ಲಿಸಲು ಜಾತಿ, ಧರ್ಮ, ಭೇದ ಮರೆತು ಹೋರಾಡಬೇಕೆಂಬುದು ಶ್ರೀ ಯವರ ಬಯಕೆಯಾಗಿತ್ತು. 'ಕನ್ನಡಂ ಗೆಲ್ಗೆ' 'ಕನ್ನಡಂ ಬಾಳ್ಗೆ' ಎಂಬುದು ನಮ್ಮ ನಿತ್ಯ ಮಂತ್ರವಾಗಬೇಕೆಂಬುದು, ಪ್ರತಿಯೊಬ್ಬ ಕನ್ನಡಿಗನೂ ಕನ್ನಡಮ್ಮನ ಪೂಜಾರಿಯಾಗಬೇಕು, ಆಕೆಯ ಆಶೀರ್ವಾದ ಪಡೆದು ಭರತಮಾತೆಯ ಪೂಜೆಗೆ ಮುಂದಾಗಬೇಕೆಂದು ಶ್ರೀಯವರ ಮಹತ್ವಾಕಾಂಕ್ಷೆಯಾಗಿತ್ತು.

**"ಕನ್ನಡ ಬಾವುಟ'**

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಸಲ್ಲಿಸಿದ ಸೇವೆಯನ್ನು ಬೆಲೆಕಟ್ಟಲು ಸಾಧ್ಯವಿಲ್ಲ. ಹಲವಾರು ವರ್ಷಗಳ ಕಾಲ ಸಾಹಿತ್ಯ ಪರಿಷತ್ತಿನ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಅದರ ಆಧಾರ ಸ್ತಂಭವಾಗಿ ನಿಂತು ನಾಡು ನುಡಿಗೆ ಸಲ್ಲಿಸಿದ ಸೇವೆ ಅನನ್ಯವಾದುದು. ಬಿ.ಎಂ.ಶ್ರೀ. ಅವರು ಸಾಮಾನ್ಯ ಜನತೆಗೆ ಕನ್ನಡ ಸಾಹಿತ್ಯವನ್ನು, ಕನ್ನಡ ನಾಡು ನುಡಿಯ ಇತಿಹಾಸವನ್ನು ಪರಿಚಯಿಸುವ ದೃಷ್ಟಿಯಿಂದ ಗ್ರಂಥಪ್ರಕಟಣೆಯ ಕೆಲಸವನ್ನು ಆರಂಭಿಸಿದರು. 'ಕನ್ನಡ ಬಾವುಟ'ದ ಕಲ್ಪನೆ ಶ್ರೀ ಅವರದು. ಕನ್ನಡ ನಾಡಿನ ಭೂಪಟವನ್ನು ಒಳಗೊಂಡಂತೆ ಒಂದು ಬಾವುಟವನ್ನು ಸಿದ್ಧಪಡಿಸಿ ಅದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಲಾಂಛನವಾಗಿ

ರೂಪಿಸಿದರು. ಇದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಉತ್ಸವ ಸಮಾರಂಭಗಳಲ್ಲಿ ಹಾರಿಸುವದನ್ನು ಪ್ರಾರಂಭಿಸಿದರು.

'ಏರಿಸಿ ಹಾರಿಸಿ ಕನ್ನಡದ ಬಾಹುಟ!
ಓಹೋ ಕನ್ನಡ ನಾಡು, ಆಹಾ ಕನ್ನಡ ನುಡಿ!
ಹಾರಿಸಿ, ತೋರಿಸಿ, ಕೆಚ್ಚೆದೆಯ ಬಾಹುಟ'

ಎಂದು ಬಾಹುಟದ ಮೇಲೆ ಗೀತೆಯನ್ನು ರಚಿಸಿ ಹಾಡಿ ಕನ್ನಡಿಗರ ಹೃದಯದಲ್ಲಿ ಬಿಸಿ ರಕ್ತವನ್ನು ಉಕ್ಕಿಸಿದರು.

'ಬಾಲ್ ಕನ್ನಡ ತಾಯ್!
ಏಳ್ ಕನ್ನಡ ತಾಯ್!
ಆಳ್ ಕನ್ನಡ ತಾಯ್!
ಕನ್ನಡಿಗರೊಡತಿ ಈ ರಾಜೇಶ್ವರಿ'

ಎಂದು ಪ್ರತಿಯೊಬ್ಬ ಕನ್ನಡಿಗನ ಎದೆಯಲ್ಲೂ ಪೌರುಷದ ವೀರಾವೇಶವನ್ನು ತುಂಬಿದರು.

**“ಕನ್ನಡ ಬಾವುಟ'ದ ಸಂಕಲನ.**

ಶ್ರೀಯವರ ಆಲೋಚನೆ ಕೇವಲ ಕನ್ನಡದ ಬಾಹುಟವನ್ನು ಹಾರಿಸುವುದಕ್ಕೆ ಮಾತ್ರ ಸೀಮಿತವಾಗಲಿಲ್ಲ. ಕ್ರಿ.ಶ. ಏಳನೇ ಶತಮಾನದಿಂದ ಆಧುನಿಕ ಸಾಹಿತ್ಯದವರೆಗಿನ ಶಾಸನಗಳು, ಪೂರ್ವಸಾಹಿತ್ಯ, ನಾಡಪದಗಳು ಹಾಗೂ ಆಧುನಿಕ ಕವಿತೆಗಳ ಒಂದು ಪ್ರಾತಿನಿಧಿಕ ಸಂಕಲನವನ್ನು ಸಿದ್ಧಪಡಿಸಬೇಕೆಂದು ತೀರ್ಮಾನಿಸಿದರು. ಆದಿಯಿಂದ ಇಂದಿನವರೆಗಿನ ಕನ್ನಡ ಕವಿಗಳನ್ನೆಲ್ಲ ಒಂದೆಡೆ ಸೇರಿಸಿ ಒಂದು ಸಂಕಲನವನ್ನು ತರುವುದರ ಮೂಲಕ ಕನ್ನಡಿಗರನ್ನೆಲ್ಲಾ ಭಾವನಾತ್ಮಕವಾಗಿ ಬೆಸೆಯಬೇಕೆನ್ನುವುದು ಶ್ರೀಯವರ ಕನಸಾಗಿತ್ತು. ಇದೇ ರೀತಿ ಕನ್ನಡ ನಾಡಿನ ಇತಿಹಾಸವನ್ನು ಕನ್ನಡದ ಪ್ರಸಿದ್ಧ ಇತಿಹಾಸಕಾರರಿಂದ ಬರೆಯಿಸಿ ಮೂರು ಸಂಪುಟಗಳಲ್ಲಿ 'ಕನ್ನಡ ನಾಡಿನ ಚರಿತ್ರೆ' ಎನ್ನುವ ಅಪೂರ್ವ ಗ್ರಂಥಗಳನ್ನು ಪ್ರಕಟಿಸಿದರು. ಇವು ಇಂದಿಗೂ ಆಕರ ಗ್ರಂಥಗಳಾಗಿ ಹಲವಾರು ಬಾರಿ ಮುದ್ರಣಗಳನ್ನು ಕಂಡಿವೆ.

**“ಕನ್ನಡ ನುಡಿ'**

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಒಂದು ಪ್ರಾತಿನಿಧಿಕ ಸಂಸ್ಥೆ. ಪರಿಷತ್ತಿನ ಮುಖವಾಣಿಯಾಗಿ 'ಕನ್ನಡ ನುಡಿ' ಎನ್ನುವ ಹೆಸರಿನಲ್ಲಿ ಪರಿಷತ್ತಿನ ಒಂದು ಪತ್ರಿಕೆಯನ್ನು ಆರಂಭಿಸಿದರು. ಕನ್ನಡ ಸುದ್ದಿ, ಕನ್ನಡ ಸಾಹಿತ್ಯ ಮತ್ತು ಭಾಷೆಗೆ ಸಂಬಂಧಿಸಿದ ಸಮಕಾಲೀನ ವಿದ್ಯಮಾನಗಳನ್ನು ಈ ಪತ್ರಿಕೆಯ ಮೂಲಕ ಸದಸ್ಯರಿಗೆ ಪರಿಚಯಿಸತೊಡಗಿದರು. ಕನ್ನಡ ಸಾಹಿತ್ಯ ಮತ್ತು ಭಾಷೆಗೆ ಸಂಬಂಧಪಟ್ಟಂತೆ ಈ ಪತ್ರಿಕೆ ಒಂದು ಉತ್ತಮ ಮಾಧ್ಯಮವಾಗಿ ಪರಿಣಮಿಸಿತು. ಕನ್ನಡ ನಾಡಿನ ಜನತೆಗೆ ವಿಚಾರಪೂರ್ಣ ಲೇಖನಗಳನ್ನು, ಸಾಂಸ್ಕೃತಿಕ

ಆಶಯಗಳನ್ನು ಪ್ರತಿಯೊಬ್ಬರ 'ಮನೆಯ ಬಾಗಿಲಿಗೆ ತಿಳಿವಿನ ಬೆಳಕನ್ನು, ಕನ್ನಡ ನುಡಿಯ ಹಣತೆಯನ್ನು ಒಯ್ಯುವ' ಕೆಲಸವನ್ನು ಮಾಡಿತು ಎಂದು ಅದರ ಪ್ರಥಮ ಸಂಪಾದಕರಾಗಿದ್ದ ಅ.ನ.ಕೃ ತಮ್ಮ ಸಂಪಾದಕವಾಣಿಯಲ್ಲಿ ದಾಖಲಿಸಿದ್ದಾರೆ. ಶ್ರೀಯವರು 'ಕನ್ನಡ ನುಡಿ' ಕನ್ನಡದ ಗೆಜೆಟಿಯರ್ ಆಗಬೇಕೆಂದು ಕನಸು ಕಂಡಿದ್ದರು.

**ಕನ್ನಡ ಸಾಹಿತ್ಯ ಪರೀಕ್ಷೆಗಳು.**

ಕನ್ನಡ ಸಾಹಿತ್ಯ ಕನ್ನಡ ಸಂಸ್ಕೃತಿ ಕನ್ನಡ ಜನಪದರ ಹೃದಯವನ್ನು ಮುಟ್ಟಬೇಕು. ಹಾಗೆ ಮಾಡಬೇಕಾದರೆ ಕನ್ನಡಿಗರು ಓದು ಬರಹವನ್ನು ತಿಳಿಯಬೇಕು. ಓದು ಬರಹ ಬಲ್ಲವರಿಗೆ ಕನ್ನಡ ಸಾಹಿತ್ಯದಲ್ಲಿ ಪ್ರೀತಿ ಹುಟ್ಟುವಂತೆ ಮಾಡಬೇಕೆಂದು ಶ್ರೀಯವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ಸಾಹಿತ್ಯ ಪರೀಕ್ಷೆಗಳನ್ನು ಪ್ರಾರಂಭಿಸಿದರು. ಕಾವ, ಜಾಣ, ಅಣುಗ (ಈಗ ನಡೆಯುತ್ತಿಲ್ಲ) ಹಾಗೂ 'ರತ್ನ' ಎನ್ನುವ ಉನ್ನತ ಮಟ್ಟದ ಪರೀಕ್ಷೆಗಳನ್ನು ಆರಂಭಿಸಿದ ಕೀರ್ತಿ ಶ್ರೀ ಅವರಿಗೆ ಸಲ್ಲುತ್ತದೆ.

**'ಬಿ.ಎಂ.ಶ್ರೀ ಅಚ್ಚುಕೂಟ'**

ಪರಿಷತ್ತಿನ ಪ್ರಕಟಣೆಗಳಿಗಾಗಿ ಶ್ರೀಯವರು ಆರು ಸಾವಿರ ರೂಪಾಯಿಗಳನ್ನು ದಾನ ಮಾಡಿದರು ಹಾಗೂ ಒಂದು ಪ್ರತ್ಯೇಕವಾದ ಅಚ್ಚುಕೂಟವನ್ನು ಸ್ಥಾಪಿಸಿದ ಕೀರ್ತಿ ಶ್ರೀಯವರಿಗೆ ಸಲ್ಲುತ್ತದೆ. ಇದು ಮುಂದೆ 'ಬಿ.ಎಂ.ಶ್ರೀ ಅಚ್ಚುಕೂಟ'ವೆಂದು ಹೆಸರು ಪಡೆದು ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲ ಪ್ರಕಟಣೆಗಳು ಇಲ್ಲಿಯೇ ಮುದ್ರಣಗೊಳ್ಳುತ್ತಿರುವುದು ಎಲ್ಲರಿಗೂ ತಿಳಿದ ವಿಚಾರವಾಗಿದೆ.

---

## ಅಧ್ಯಾಯ ಆರು: ಉಪಸಂಹಾರ

**ಬಿ.ಎಂ.ಶ್ರೀಯವರ ಭಾಷಾ ಪಾಂಡಿತ್ಯ.**

'ಬಿ.ಎಂ.ಶ್ರೀ'ಯವರು ಇಂಗ್ಲಿಷ್ ಸಾಹಿತ್ಯವನ್ನ ಆಳವಾಗಿ ಅಧ್ಯಯನ ಮಾಡಿದವರು. ಕನ್ನಡ, ತಮಿಳು, ಸಂಸ್ಕೃತ ಮತ್ತು ಗ್ರೀಕ್ ಸಾಹಿತ್ಯದ ಪರಿಚಯ ಅವರಿಗೆ ಇತ್ತು. ಹಳಗನ್ನಡ ಸಾಹಿತ್ಯ, ವ್ಯಾಕರಣ, ಅಲಂಕಾರ, ಛಂದಸ್ಸು ಇವುಗಳನ್ನು ಆಳವಾಗಿ ಅಧ್ಯಯನ ಮಾಡಿ ವಿದ್ವತ್ತನ್ನು ಸಂಪಾದಿಸಿದ್ದರು. ಹಳಗನ್ನಡದಲ್ಲಿ 'ಬಿ.ಎಂ.ಶ್ರೀ. ಅವರಿಗೆ ಆಸಕ್ತಿ ಮೂಡಲು ಅವರ ಗುರುಗಳಾದ ಶ್ರೀ ವರದಾಚಾರ್ಯರ ಬೋಧನೆಯ ಪ್ರೇರಣೆಯೂ ಕಾರಣವಾಗಿತ್ತು. ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಕಾಳಿದಾಸನ ನಾಟಕಗಳೂ ಸೇರಿದಂತೆ ಹಲವಾರು ಸಂಸ್ಕೃತ ಕಾವ್ಯಗಳನ್ನು ಓದಿ ಅರ್ಥಮಾಡಿಕೊಂಡಿದ್ದರು. ಸಂಸ್ಕೃತವನ್ನು ಶ್ರೀಯವರು ಹೇಗೆ ಕಲಿತರು

ಎನ್ನುವುದಕ್ಕೆ ದಾಖಲೆಗಳಿಲ್ಲ. ಉನ್ನತ ಮಟ್ಟದಲ್ಲಿ ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡಲು ಸಂಸ್ಕೃತದ ಜ್ಞಾನ ಅವಶ್ಯಕವೆನ್ನುವುದನ್ನು ಶ್ರೀಯವರು ಮನಗಂಡಿದ್ದರು. ಈ ಕಾರಣದಿಂದ ಅವರು ಮುಂದೆ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಆದಮೇಲೆ ಕನ್ನಡ ಎಂ.ಎ. ಪದವಿಗೆ ಸಂಸ್ಕೃತದ ಕಲಿಕೆಯನ್ನು ಕಡ್ಡಾಯ ಮಾಡಿದರು. ಈ ಹಿನ್ನೆಲೆಯಿಂದ ನೋಡಿದರೆ ಶ್ರೀಯವರಿಗೆ ಸಂಸ್ಕೃತದ ಬಗ್ಗೆ ಪ್ರೀತಿ ಇರುವುದು ತಿಳಿಯುತ್ತದೆ. ಕನ್ನಡದ ಅಭಿವೃದ್ಧಿಗೆ ಸಂಸ್ಕೃತದ ಕಲಿಕೆ ಅಗತ್ಯ ಎಂದು ನಂಬಿದ್ದರು. ಆದರೆ ಸಂಸ್ಕೃತದಿಂದ ಕನ್ನಡಕ್ಕೆ ಎಷ್ಟು ಉಪಕಾರವಿದೆಯೋ ಅಷ್ಟೇ ಅಪಕಾರವಿದೆಯೆಂದು ಧೈರ್ಯವಾಗಿ ಹೇಳುತ್ತಿದ್ದರು. ಇದು ಅನೇಕ ಬಾರಿ ಸಂಸ್ಕೃತ ಪ್ರೇಮಿಗಳನ್ನು ಕೆರಳಿಸುತ್ತಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಕ್ರಮದಲ್ಲಿ ಸಂಸ್ಕೃತ ದ್ವಿತೀಯ ಭಾಷೆಯಾಗಿ ಕನ್ನಡದೊಂದಿಗೆ ಐಚ್ಛಿಕವಾಗಿ ಕನ್ನಡದ ಸ್ಥಾನಕ್ಕೆ ಧಕ್ಕೆಯುಂಟುಮಾಡುತ್ತಿದೆ ಎಂದು ಸೆನೆಟ್ ಸಭೆಗಳಲ್ಲಿ ಹೋರಾಟಮಾಡುತ್ತಿದ್ದರು. ಕನ್ನಡಕ್ಕೆ ಯಾವಕಡೆಯಿಂದಲಾದರೂ, ಯಾರಿಂದಲಾದರೂ ಅನ್ಯಾಯವಾದರೆ ಮುಂಚೂಣಿಯಲ್ಲಿ ನಿಂತು ಹೋರಾಟಮಾಡುತ್ತಿದ್ದರು. 'ಕನ್ನಡ ನನಗೆ ಮುಂದು, ಉಳಿದುದು ಏನಿದ್ದರು ಅದರ ಹಿಂದು. ಕನ್ನಡದ ಕಾವಲು ನಾಯಿ ನಾನು. ಅದಕ್ಕೆ ಕಾವು ತಟ್ಟಿದರೆ ಬಗಳುವುದುಂಟು; ಕಚ್ಚುವ ನಾಯಲ್ಲ' ಎಂದು ಕನ್ನಡ ವಿರೋಧಿಗಳಿಗೆ ಎಚ್ಚರಿಕೆ ನೀಡಿದ್ದರು.

ಸಂಸ್ಕೃತದಂತೆ, ಇಂಗ್ಲಿಷ್ ಬಗೆಗೂ ಅವರ ನಿಲುವು ಖಚಿತವಾಗಿತ್ತು. ಇಂಗ್ಲಿಷ್ ಪ್ರಾಧ್ಯಾಪಕರಾಗಿ ಇಂಗ್ಲಿಷ್ ಕಾವ್ಯ, ನಾಟಕ ಇತರ ಸಾಹಿತ್ಯ ಪ್ರಕಾರಗಳ ಸೊಬಗನ್ನು ಅವರು ಸವಿದಿದ್ದರು. ಈ ಪ್ರಕಾರಗಳೆಲ್ಲವೂ ಕನ್ನಡಕ್ಕೆ ಆಮದಾಗಿ ಬರಬೇಕೆಂಬುದು ಅವರ ಬಯಕೆ ಆಗಿತ್ತು. 'ಇಂಗ್ಲಿಷ್ ಸಾಹಿತ್ಯವೇ ಜೀರ್ಣವಾದ ನಮ್ಮ ಕಾವ್ಯಮಾಲೆಯನ್ನು ಕೈಕೊಟ್ಟು ಎತ್ತಬೇಕು. ಇಂಗ್ಲಿಷ್ ಸಾಹಿತ್ಯವೇ ಸಂಸ್ಕೃತ ಸಾಹಿತ್ಯದಿಂದ ನಮ್ಮ ಕಾವ್ಯಮಾಲೆಗೆ ಇಳಿದಿರುವ ದೋಷವನ್ನು ಪರಿಹಾರ ಮಾಡಬೇಕು' ಎಂದು ಸಲಹೆ ಮಾಡಿದರು. 'ಕನ್ನಡ ಕಾವ್ಯಕ್ಷೇತ್ರದಲ್ಲಿ ಕನ್ನಡ ಕಾವ್ಯವನ್ನು ಕೈಕೊಟ್ಟು ಎತ್ತಿ' ಬಿ.ಎಂ.ಶ್ರೀಯವರು ಮೇಲುಪಂಕ್ತಿ ಹಾಕಿದರು. 'ಅವಳ ತೊಡಿಗೆ ಇವಳಿಗಿಟ್ಟು ಹಾಡ' ಬಯಸಿದರು. ಇದರ ಪರಿಣಾಮವೇ 'ಇಂಗ್ಲಿಷ್ ಗೀತೆಗಳು'. 'ಪಡುವ ಕಡಲ ಹೊನ್ನ ಹೆಣ್ಣು -ನನ್ನ ಜೀವದುಸಿರು ಕಣ್ಣು' ಎಂದು ಸಾರಿದರೂ, ಜನಸಾಮಾನ್ಯರಿಗೆ, ಕನ್ನಡ ನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ, ಸಂಸ್ಕೃತವಲ್ಲ. ಇಂಗ್ಲಿಷ್ ಅಲ್ಲ, ಹಿಂದಿಯಲ್ಲ, ಕನ್ನಡ' ಎಂದು ಕನ್ನಡಿಗರಿಗೆ ತಾರಕ ಮಂತ್ರವನ್ನು ಉಪದೇಶಿಸಿದರು. ಕನ್ನಡದ ಬಾವುಟವನ್ನು ಎತ್ತಿ ಹಿಡಿದು ವಿರುದ್ಧ ಶಕ್ತಿಗಳ ಎದುರು ಹೋರಾಡಿದ ಪ್ರಥಮ ನಾಯಕರಾಗಿ ಶ್ರೀಯವರು ಕಂಗೊಳಿಸುತ್ತಾರೆ. ಕನ್ನಡದ ಸರ್ವಾಂಗೀಣ ಪ್ರಗತಿಗೆ ಅವರು ಅಂದು ನೀಡಿದ ಸಲಹೆಗಳು ಇಂದಿಗೂ ಪ್ರಸ್ತುತವೆನ್ನುವಂತಿವೆ. ಅವರು ನೀಡಿದ ಸಲಹೆಗಳನ್ನು ಈ ರೀತಿ ಸಂಗ್ರಹಿಸಬಹುದು.

**ಕನ್ನಡದ ಸರ್ವಾಂಗೀಣ ಪ್ರಗತಿಗೆ ಅವರು ನೀಡಿದ ಸಲಹೆಗಳು.**

೧) ನಮ್ಮ ಪ್ರಾಚೀನ ಸಾಹಿತ್ಯ ಭಂಡಾರವನ್ನು ಸಂರಕ್ಷಿಸುವುದು.( ಕಾವ್ಯ ಶಾಸ್ತ್ರ ಗ್ರಂಥಗಳು ಸೇರಿದಂತೆ)

೨) ಈ ರೀತಿ ಸಂರಕ್ಷಿಸಿದ ಸಾಹಿತ್ಯವನ್ನು ವಿಮರ್ಶಿಸಿ ಮೌಲ್ಯಯುತವಾದುದನ್ನು ಸ್ವೀಕರಿಸುವುದು.

ಇ) ಪ್ರಾಚೀನ ಕಾವ್ಯಗಳನ್ನು ಶೇಖರಿಸಿ ಅಚ್ಚುಹಾಕುವುದು. ಹಾಗೂ ಇವುಗಳನ್ನು ಆಧರಿಸಿ ಆಧುನಿಕ ಕಾಲದ ಅಗತ್ಯಕ್ಕೆ ತಕ್ಕ ಹಾಗೆ,

ಅ) ಭಾಷಾ ಚರಿತ್ರೆ

ಆ) ಹಳ-ಹೊಸಗನ್ನಡ ನಿಘಂಟು.

ಇ) ಹಳ-ಹೊಸಗನ್ನಡ ವ್ಯಾಕರಣ.

ಈ) ರಸ-ಅಲಂಕಾರ.

ಉ) ಕಾವ್ಯ ಲಕ್ಷಣ.

ಊ) ಕಾವ್ಯ ವಿಮರ್ಶೆ.

ಋ) ಛಂದಸ್ಸು.

ಎ) ಕಾವ್ಯ ಮಾಲೆಯ ಚರಿತ್ರ, ಇವುಗಳನ್ನು ರಚಿಸುವುದು.

ಏ) ಮಕ್ಕಳಿಗಾಗಿ ಪ್ರಾಚೀನ ಕಾವ್ಯದ ಉತ್ತಮ ಭಾಗಗಳನ್ನು ಸಂಕ್ಷಿಪ್ತವಾಗಿ ಪ್ರಕಟಿಸುವುದು.

ಐ) ಹೊಸ ಕೃತಿಗಳ ರಚನೆ.

ಈ ರೀತಿ ಹೊಸ ಕೃತಿಗಳ ರಚನೆಯಲ್ಲಿ ಬಳಕೆಯಲ್ಲಿರುವ ಹೊಸಗನ್ನಡ ಪದಗಳನ್ನೇ ಪ್ರಯೋಗಕ್ಕೆ ತರಬೇಕು. ನೆಲೆನಿಂತಿರುವ ಸಂಸ್ಕೃತ ಶಬ್ದಗಳನ್ನು ಬಳಕೆಗೆ ತರಬೇಕು. ಅವುಗಳಿಗೆ ಪರ್ಯಾಯವಾಗಿ ತದ್ಭವಗಳನ್ನು ಬಳಸಬಾರದು. ಸಾಹಿತ್ಯ ರಚನೆಯಲ್ಲಿ ಗ್ರಾಮ್ಯ ಭಾಷೆ ಇರಬಾರದು. ಕರ್ನಾಟಕದ ಉದ್ದಗಲಕ್ಕೂ ಇರುವ, ಜನರಿಗೆ ಅರ್ಥವಾಗುವ, ಬಳಕೆಯಲ್ಲಿರುವ ಅಥವಾ ರೂಢಿಯಲ್ಲಿರುವ ಶಬ್ದ/ ಭಾಷೆಯನ್ನು ಬಳಸಬೇಕು. ಇದು ಮುಂದೆ ನೆಲೆ ನಿಂತು ಸಮಗ್ರ ಭಾಷೆಯಾಗುತ್ತದೆ. 'ರೈಲನ್ನು ರೈಲೆಂದೇ ಕರೆಯುವುದು ಉತ್ತಮ, ಹೊಗೆಬಂಡಿ ಅಥವಾ ಹೊಗೆಗಾಡಿ ಎನ್ನುವುದು ಮಧ್ಯಮ; ಧೂಮಶಕಟ ಎನ್ನುವುದು ಅಧಮ' ಎನ್ನುವುದು ಶ್ರೀಯವರ ನಿಲುವು.

ಒ) ಸಂಸ್ಕೃತದ ಪೋಷಣೆಯಿಂದ ಕಾವ್ಯ ಬೆಳೆದಂತೆ ಗ್ರೀಕ್, ಲ್ಯಾಟಿನ್, ಇಂಗ್ಲಿಷ್ ಮುಂತಾದ ಭಾಷಾ ಸಾಹಿತ್ಯದ ಶ್ರೀಮಂತ ಕೃತಿಗಳನ್ನು ಕನ್ನಡದ ಬೊಕ್ಕಸಕ್ಕೆ ಭಾಷಾಂತರದಿಂದ ತುಂಬುವುದು.

ಓ) ಸಂಸ್ಕೃತದ ಅಮೂಲ್ಯ ಕೃತಿಗಳಾದ ರಾಮಾಯಣ, ಮಹಾಭಾರತ, ಶ್ರುತಿ ಸ್ಮೃತಿ ಉಪನಿಷತ್ತುಗಳನ್ನು ಭಾಷಾಂತರಿಸುವುದು.

ಶ್ರೀಯವರು ತಮ್ಮ ಎಲ್ಲಾ ಕೃತಿ ಲೇಖನಗಳಲ್ಲಿ ಭಾಷಣಗಳಲ್ಲಿ ಟಿಪ್ಪಣಿಗಳಲ್ಲಿ ಕನ್ನಡದ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಬದುಕಿದಷ್ಟು ಕಾಲವೂ ಕನ್ನಡದ, ಕನ್ನಡಿಗರ ಒಳಿತಿಗಾಗಿ ಹಂಬಲಿಸಿ ಹಾರೈಸಿ ಹಾತೊರೆದು ನಿರ್ದಿಷ್ಟವಾದ ಮಾತುಗಳಲ್ಲಿ ಹೇಳಿದ್ದಾರೆ. 'ಕನ್ನಡಕ್ಕೆ ಒಂದು ಕಟ್ಟು' ಎನ್ನುವ ಅವರ ಲೇಖನಗಳಲ್ಲಿ, ಕನ್ನಡ ಶಬ್ದಕೋಶವನ್ನು ಹೇಗೆ ಬಳಸಬೇಕು, ಬೆಳೆಸಬೇಕು ಉಳಿಸಬೇಕು ಎನ್ನುವುದನ್ನು, ವ್ಯಾಕರಣ ನಿಯಮವನ್ನು ಗ್ರಂಥಕರ್ತರು, ಬರಹಗಾರರು ಪಾಲಿಸಬೇಕಾದ ಅಗತ್ಯ ನೀತಿ ನಿಯಮಗಳನ್ನು ಸಾರವತ್ತಾಗಿ ಹೇಳಿದ್ದಾರೆ.

ಶ್ರೀಯವರು ೧೯೨೮ ರಲ್ಲಿ ಕಲಬುರ್ಗಿಯಲ್ಲಿ ನಡೆದ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರಾಗಿ ಮಾಡಿದ ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಎನ್ನುವ ಭಾಷಣ ಐತಿಹಾಸಿಕವೂ ಮಹತ್ವಪೂರ್ಣವೂ ಆದುದು. ನಮ್ಮ ಪೂರ್ವ ಸಾಹಿತ್ಯದಲ್ಲಿ ಸಾರವತ್ತಾದ ಭಾಗವನ್ನು ಉಳಿಸಿಕೊಂಡು ಇತರ ದೇಶಗಳ ಶ್ರೇಷ್ಠ ಸಾಹಿತ್ಯದಿಂದ ಸಾರವನ್ನು ಹೀರಿ ಹೊಸಕಾಲಕ್ಕೆ ಅಗತ್ಯವಾದ ಹೊಸ ಸಾಹಿತ್ಯವನ್ನು ಸೃಷ್ಟಿಮಾಡುವ ಕಡೆ ಗಮನ ಹರಿಸಬೇಕೆನ್ನುವುದು ಭಾಷಣದ ಸಾರ.

**ಬಿ. ಎಂ. ಶ್ರೀಯವರ ಕೆಲವು ಮಾರ್ಗದರ್ಶಕ ಕೃತಿಗಳು.**

ಬಿ. ಎಂ. ಶ್ರೀಯವರು ತಮ್ಮ ಸಾಹಿತ್ಯ ಕೃಷಿಯಲ್ಲಿ ಕೆಲವು ಮಾರ್ಗದರ್ಶಕ ಕೃತಿಗಳನ್ನು ರಚಿಸಿ ಮೇಲುಪಂಕ್ತಿಯನ್ನು ಹಾಕಿದರು. ಭಾರತೀಯ ಸಾಹಿತ್ಯದಲ್ಲಿ ರುದ್ರನಾಟಕದ ಕಲ್ಪನೆಯೇ ಇರಲಿಲ್ಲ. ಪಂಪರಾಮಾಯಣದ ರಾವಣ, ರನ್ನನ ಗದಾಯುದ್ಧದ ದುರ್ಯೋಧನ ಇವರಲ್ಲಿ ಇರುವ ರುದ್ರನಾಯಕನ ಗುಣವನ್ನು ಮೊದಲು ಗುರುತಿಸಿ 'ದುರಂತ ರಾವಣ' ಎನ್ನುವ ಲೇಖನವನ್ನು ಬರೆದರು. ರನ್ನನ ಗದಾಯುದ್ಧ (ಸಾಹಸ ಭೀಮವಿಜಯ) ಕಾವ್ಯವನ್ನು ಆಧರಿಸಿ 'ಗದಾಯುದ್ಧ ನಾಟಕಂ' ರಚಿಸಿದರು. ಗ್ರೀಕ್ ರುದ್ರನಾಟಕದ ಮಹತ್ವವನ್ನು ಮನಗಂಡು ಸಾಫೋಕ್ಲೀಸನ (ಏಜಾಕ್ಸ್) ನಾಟಕವನ್ನು ಆಧರಿಸಿ ಸ್ವತಂತ್ರವೆನ್ನಬಹುದಾದ 'ಅಶ್ವತ್ಥಾಮನ್' ನಾಟಕವನ್ನು ಕನ್ನಡ ಸಾಹಿತ್ಯಲೋಕಕ್ಕೆ ಪರಿಚಯಿಸಿದರು. ಶ್ರೀಯವರ ಹಳಗನ್ನಡ ಪಾಂಡಿತ್ಯಕ್ಕೆ ಅವರು 'ಅಶ್ವತ್ಥಾಮನ್' ನಾಟಕದಲ್ಲಿ ಪ್ರಯೋಗಿಸಿರುವ ಹಳಗನ್ನಡ ಶೈಲಿ ಸಾಕ್ಷಿಯಾಗಿದೆ. 'ಇಂಗ್ಲಿಷ್ ಗೀತೆಗಳು' ಕನ್ನಡ ಸಾಹಿತ್ಯಲೋಕದಲ್ಲಿ ಹೊಸ ಸೃಷ್ಟಿಗೆ ಉತ್ತಮ ಮಾದರಿಯನ್ನು ಒದಗಿಸಿದೆ. ವಿದ್ವಾಂಸರ ನೆರವಿನಿಂದ ಪಂಪ ಭಾರತ, ಪಂಪ ರಾಮಾಯಣ, ಕರ್ನಾಟಕ ಕಾದಂಬರಿ ಮುಂತಾದ ಕಾವ್ಯಗಳ ಪರಿಷ್ಕೃತ ಸಂಗ್ರಹಗಳನ್ನು ಪ್ರಕಟಿಸಿ ಹಳಗನ್ನಡ ಸಾಹಿತ್ಯದ ಸಾರಸಂಗ್ರಹಕ್ಕೆ ಅವಕಾಶ ಮಾಡಿಕೊಟ್ಟರು. ಅವರು ಸಂಪಾದಿಸಿದ 'ಕನ್ನಡ ಕೈಪಿಡಿ' ಹಳಗನ್ನಡ ವ್ಯಾಕರಣ, ಅಲಂಕಾರಶಾಸ್ತ್ರ, ಛಂದಸ್ಸು, ಭಾಷಾ ಚರಿತ್ರೆ ಇವುಗಳನ್ನೊಳಗೊಂಡ ಒಂದು ಉತ್ತಮ ಕೈಪಿಡಿಯಾಗಿದೆ. ಕನ್ನಡದ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇಂಥ ಇನ್ನೊಂದು ಕೃತಿ ಇಲ್ಲ ಎನ್ನುವಂತಿದೆ. ಕನ್ನಡ ಕೈಪಿಡಿಯ ಎರಡನೆಯ ಭಾಗವಾದ 'ಕನ್ನಡ ಸಾಹಿತ್ಯ ಚರಿತ್ರೆ' ಇದೊಂದು ಮಾರ್ಗದರ್ಶಕ ಕೃತಿ, ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದಾಗ 'ಕನ್ನಡ ಬಾವುಟ' 'ಕನ್ನಡ ನಾಡ ಚರಿತ್ರೆ' ಎನ್ನುವಂತಹ

ಕೃತಿಗಳನ್ನು ಹೊರತಂದರು. 'ಕನ್ನಡ ನುಡಿ' ಎನ್ನುವ ವಾರ ಪತ್ರಿಕೆಯನ್ನು ಅ.ನ.ಕೃ. ಅವರ ಸಂಪಾದಕತ್ವದಲ್ಲಿ ಪ್ರಾರಂಭಿಸಿದರು. (ಇದು ಈಗ ಪರಿಷತ್ತಿನ ಮುಖವಾಣಿಯಾಗಿ ಮಾಸಿಕ ಪತ್ರಿಕೆಯಾಗಿ ಪ್ರಕಟವಾಗುತ್ತಿದೆ) ಗೆಜೆಟಿಯರ್ ಆಗಬೇಕೆಂದು ಕನಸು ಕಂಡರು. ಅದರ ಮುದ್ರಣಕ್ಕಾಗಿಯೆ ಅಚ್ಚುಕೂಟವನ್ನು ಸ್ಥಾಪಿಸಿದರು. ಸಂಘಗಳ ಒಕ್ಕೂಟಕ್ಕಾಗಿ ಸಂಘಗಳ ಸಮ್ಮೇಳನ, ಹಳಗನ್ನಡ ಕಾವ್ಯಗಳ ಅಧ್ಯಯನಕ್ಕಾಗಿ ವ್ಯಾಸಂಗ ಗೋಷ್ಠಿಗಳನ್ನು, ಕನ್ನಡ ಲಿಪಿಯ ಸುಧಾರಣೆಗಾಗಿ ಲಿಪಿ ಸಂಸ್ಕರಣ ಸಮ್ಮೇಳನ, ಕನ್ನಡ ಸಾಹಿತ್ಯ ಪರೀಕ್ಷೆಗಳು(ಕಾವ, ಜಾಣ, ರತ್ನ) ಮಹಿಳಾ ಶಾಖೆ - ಈ ರೀತಿ ಪರಿಷತ್ತಿನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ, ಅದನ್ನು ಕನ್ನಡಿಗರ ಸಾರ್ವಜನಿಕ ವಿದ್ಯಾಪೀಠವಾಗಿ ಬೆಳೆಸಬೇಕೆಂದು ಹಂಬಲಿಸಿ, ಪ್ರಯತ್ನಿಸಿ ಪರಿಷತ್ತಿಗಾಗಿ ಅಕ್ಷರಶಃ ತನುಮನ ಧನಗಳನ್ನು ಮುಡಿಪಿಟ್ಟರು. ಈ ಕೆಲಸಗಳಿಗೆಲ್ಲಾ ವಿಶ್ವವಿದ್ಯಾನಿಲಯದ ಅಧ್ಯಾಪಕ ವೃಂದ ಶ್ರೀಕಂಠಯ್ಯನವರಿಗೆ ನೆರವಾಗಿದ್ದರು. ಶ್ರೀಯವರ ಈ ಕೆಲಸ ನಿಜವಾಗಿಯೂ ಕ್ರಾಂತಿಕಾರಿಯಾದುವುಗಳು.

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ಬಿ.ಎಂ.ಶ್ರೀ. ಅವರ ಸಾಹಿತ್ಯ ಸೇವೆ ಅನನ್ಯವಾದುದು. ಕನ್ನಡದ ಬಗೆಗೆ ಅಭಿಮಾನ ಅಷ್ಟಾಗಿ ಇಲ್ಲದ ಕಾಲದಲ್ಲಿ ಕನ್ನಡದಲ್ಲಿ ಯೋಚಿಸುವುದೂ, ಬರೆಯುವುದೂ, ಮಾತನಾಡುವುದೂ ಹೀನಾಯವೆಂದು ಜನರು ಭಾವಿಸಿದ್ದಾಗ, ಇವರು ಕನ್ನಡದಲ್ಲಿ ಮತ್ತು ಕನ್ನಡವನ್ನು ಕುರಿತು ಯೋಚಿಸಿದರು. ಪ್ರಾಚೀನವಾದ ಈ ಸಾಹಿತ್ಯ ಅಭಿವೃದ್ಧಿ ಹೊಂದಲು ಏನು ಮಾಡಬೇಕು ಎಂದು ಚಿಂತಿಸಿದರು. ಕನ್ನಡದಲ್ಲಿ ಮಾತನಾಡಿದರೂ ಕನ್ನಡದಲ್ಲಿ ಬರೆದರೂ ಹೊಸ ಸಂಪ್ರದಾಯದ ಪ್ರವರ್ತಕರಾದರು. ಅಗಾಧವಾದ ವಿದ್ವತ್ತನ್ನು, ಬಹುಭಾಷಾ ಪ್ರಭುತ್ವವನ್ನು, ಕನ್ನಡದ ಮೇಲಿನ ಅನನ್ಯ ಪ್ರೀತಿಯನ್ನು, ಕನ್ನಡದ ಎಚ್ಚರಕ್ಕೆ ಹಾಗೂ ಏಕೀಕರಣಕ್ಕೆ ಬೇಕಾದ ಬುನಾದಿಯನ್ನು ಹಾಕಿದರು. ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ಅವರು ನಿರ್ಮಿಸಿದ ಹೊಸಗನ್ನಡ ಲೇಖಕರ ಒಂದು ಪರಂಪರೆ, ಛಂದಸ್ಸು, ಗ್ರಂಥಸಂಪಾದನೆ, ಲಿಪಿಸುಧಾರಣೆ, ಸಾಹಿತ್ಯ ಚರಿತ್ರೆ, ಸಾಹಿತ್ಯ ವಿಮರ್ಶೆ, ಜಾನಪದ ಇತ್ಯಾದಿ ವಿವಿಧ ಕ್ಷೇತ್ರಗಳಲ್ಲಿ ಅವರು ಹಾಕಿಕೊಟ್ಟ ಹೊಸದಾರಿಗಳು-ಇವೆಲ್ಲವೂ ಅವರನ್ನು ಹೊಸಗನ್ನಡದ ಆಚಾರ್ಯ ಪುರುಷನನ್ನಾಗಿ ಮಾಡಿದವು.

**'ಯುಗಪ್ರವರ್ತಕರು'.**

ಕನ್ನಡ ಪುನರುಜ್ಜೀವನದ ನೇತಾರರಾಗಿ ಬಿ.ಎಂ.ಶ್ರೀ. ಅವರು ಮಾಡಿದ ಕೆಲಸ ಗಾತ್ರದಲ್ಲಿಯೂ, ಗುಣದಲ್ಲಿಯೂ ಅಮೋಘವಾದುದು. ಕನ್ನಡ ಸಾಹಿತ್ಯ ಚಟುವಟಿಕೆಗಳ ಪ್ರೇರಕ ಶಕ್ತಿಯೆಂದರೆ ಶ್ರೀ ಅವರು, ಬಿ.ಎಂ.ಶ್ರೀ. ಅವರು ಇಲ್ಲದ ನವೋದಯವನ್ನು ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ಅವರು ಅನಿವಾರ್ಯವಾಗಿದ್ದರು. ಕನ್ನಡ ನವೋದಯ ಸಾಹಿತ್ಯವು ಬಿ.ಎಂ.ಶ್ರೀ. ಅವರಿಂದ ಶ್ರೀಮಂತವಾಯಿತು. ಅವರು ಹಾಕಿಕೊಟ್ಟ ಅನೇಕ ಸಾಹಿತ್ಯದ ಮಾದರಿಗಳು ಮುಂದಿನವರಿಗೆ ದಾರಿದೀಪವಾದವು. ಶ್ರೀ ಅವರು 'ಯುಗಪುರುಷರು', 'ಯುಗಪ್ರವರ್ತಕರು', 'ಕನ್ನಡದ ಕಣ್ವರು', 'ಆಚಾರ್ಯರು' ಎಂದೆಲ್ಲಾ ಖ್ಯಾತಿ ಪಡೆದರು.

## ಅನುಬಂಧ: ೧

**ಕನ್ನಡ ಮಾತು ತಲೆಯೆತ್ತುವ ಬಗೆ**

ಅಧ್ಯಕ್ಷರೆ, ಆರ್ಯರೆ,

ಕನ್ನಡ ವಿದ್ಯೆಯನ್ನು ವೃದ್ಧಿ ಮಾಡುವುದಕ್ಕೆ ಏರ್ಪಟ್ಟಿರುವ ಈ ಸಂಘದಲ್ಲಿ ಆ ಭಾಷೆಯ ಮುಂದಿನ ಏಳಿಗೆಯನ್ನು ಕುರಿತು ಪ್ರಸ್ತಾಪಿಸುವುದು ಹಿತವಾಗಿಯೇ ಇರುತ್ತದೆ. ಆದರೆ ಈ ವಿಷಯದಲ್ಲಿ ಉತ್ಸಾಹ ಎಲ್ಲರಿಗೂ ಒಂದೇ ಸಮವಾಗಿರುವುದಿಲ್ಲ; ಕೆಲವರು ಇದಕ್ಕೆ ವಿರೋಧಿಗಳೇ ಇರಬಹುದು; ಇದಲ್ಲದೆ ನಮ್ಮಲ್ಲಿಯೂ ಕೆಲವರಿಗೆ ಸಭೆ ಕೂಡಿದಾಗ ಉತ್ಸಾಹಕಳೆ ತುಂಬಿದ್ದು, ಮನೆಗೆ ತಿರುಗಿದಾಗ ಮಾಯವಾಗುವುದೂ ಉಂಟು. ಈ ಕಾರಣಗಳಿಂದ ಭಾಷೆಯ ಪ್ರಕೃತ ಸ್ಥಿತಿಯನ್ನು ವೃದ್ಧಿ ಮಾರ್ಗವನ್ನೂ ತಿಳಿಸುವುದಕ್ಕೆ ಮುಂಚೆ, ಸಂಘದ ಕಾರ್ಯದಲ್ಲಿ ಅಸಮಾಧಾನ ಪಡತಕ್ಕವರ ಕಾರಣಗಳೇನು, ಅಸಡ್ಡೆ ಮಾಡತಕ್ಕವರ ಕಾರಣಗಳೇನು, ಇವರಿಬ್ಬರಿಗೂ ಹೇಳಬಹುದಾದ ಸಮಾಧಾನಗಳೇನು, ಈ ಅಂಶಗಳನ್ನು ವಿಚಾರಮಾಡುವುದು ಅವಶ್ಯಕವಾಗಿದೆ.

೧. ದೇಶಭಾಷೆಗಳು ಪ್ರಬಲವಾಗುವುದಕ್ಕೆ ಇಷ್ಟವಿಲ್ಲದವರ ಅಭಿಪ್ರಾಯಗಳನ್ನು ಹೀಗೆ ಸೂಚಿಸಬಹುದು.- "ಇಂಗ್ಲಿಷ್ ಚಕ್ರಾಧಿಪತ್ಯ ನೆಲೆಯಾಗುವುದಕ್ಕೆ ಮುಂಚೆ ಇದ್ದ ಸ್ಥಿತಿ ಈಗ ಇಂಡಿಯದಲ್ಲಿ ಇಲ್ಲ. ಆಗ ಹೊರಗಿನ ಪ್ರಪಂಚದ ಸೆಲೆಯೇ ಇರಲಿಲ್ಲ. ರಾಜ್ಯವೂ ಎಂಟು ಹತ್ತು ಪ್ರಾಂತ್ಯಗಳಾಗಿ ಒಂದಕ್ಕೊಂದು ಸಂಪರ್ಕವೇ ಇಲ್ಲದೆ ಇತ್ತು. ಜೀವನ ಸುಲಭವಾಗಿ ಜರುಗುತ್ತಿತ್ತು. ಅದೆಲ್ಲಕ್ಕೂ ತಕ್ಕಹಾಗೇ ಪ್ರಪಂಚವನ್ನು ಮಾಯವೆಂದು ಎಣಿಸಿ, ಸಂಸಾರವನ್ನು ಪಾಶವೆಂದು ಹೇಳಿ ಬೇಸರಪಟ್ಟು, ಈ ಲೋಕಯಾತ್ರೆ ಎಷ್ಟು ಬೇಗ ಮುಗಿದೀತೋ ಎಂದು ಯಾವಾಗಲೂ ಕಾಡಿನ ಮೇಲೇ ದೃಷ್ಟಿಯಿಟ್ಟುಕೊಂಡು ಇರುತ್ತಿದ್ದರು. ಈಗ ಇದೊಂದೂ ನಡೆಯುವುದಿಲ್ಲ. ದೇಶಕ್ಕೆಲ್ಲಾ ಚಕ್ರವರ್ತಿ ಒಬ್ಬನಾದನು; ದೇಶವೆಲ್ಲಾ ಕಬ್ಬಿಣದಿಂದ ಕಟ್ಟಿ ಬಿಗಿದಂತೆ ಏಕವಾಯಿತು; ಕೆಂಪುಜನರ ವಿದ್ಯೆ, ವ್ಯಾಪಾರ, ಕೈಗಾರಿಕೆ, ಇವುಗಳ ಉರುಬಿನಲ್ಲಿ ನಾವು ಮೂಲೆಗೆ ಬೀಳುತ್ತಿದ್ದೇವೆ. ಅವರ ಆಳ್ವಿಕೆಯಿಂದ ಶಾಂತಿಯೇನೋ ದೊರಕಿತು. ಆದರೆ ಮಿಕ್ಕ ಪುರುಷಾರ್ಥಗಳೆಲ್ಲಾ ನಾವೇ ಶ್ರಮಪಟ್ಟು ಸಂಪಾದಿಸಿದಲ್ಲದೆ ಬರುವುವಲ್ಲ. ಹಿಂದಿನಂತೆ ಒಡೆದುಕೊಂಡೇ ಇದ್ದೆವೇ, ಬಿದ್ದೇ ಹೋಗುವೆವು; ಒಗ್ಗಟ್ಟಾದವೇ, ಇನ್ನೂ ನಿಲ್ಲುವ ಆಸೆಯುಂಟು. ಒಗ್ಗಟ್ಟು ಬಾಯಿಮಾತಿಗೆ ಬರತಕ್ಕದ್ದಲ್ಲ. ಯಾವ ಯಾವ ಭೇದಗಳಿಂದ ಆರ್ಯಭೂಮಿಯಲ್ಲಿ ಒಗ್ಗಟ್ಟು ಹುಟ್ಟಲಿಲ್ಲವೋ, ಆಯಾ ಭೇದಗಳನ್ನೆಲ್ಲಾ ಸುಟ್ಟು ಬೂದಿಮಾಡಿ ನೀರಿನಲ್ಲಿ ಕಲಸಿಬಿಡಬೇಕು. ಆಚಾರ, ಜಾತಿ, ಮತ, ಎಲ್ಲಾ ಒಂದೇ ಆಗುವಂತೆ ಪ್ರಯತ್ನಮಾಡುತ್ತ ಹೋಗಬೇಕು. ಇವೆಲ್ಲಕ್ಕೂ ಮೊದಲು ಭಾಷೆ ಒಂದಾಗಬೇಕು; ಇಂಗ್ಲಿಷ್ ಇಲ್ಲವೆ ಹಿಂದಿ ಯಾವುದೋ ಒಂದು, ಸಾಧ್ಯವಾದದ್ದು. ಮಿಕ್ಕ ಭಾಷೆಗಳು ಸತ್ತು ಹೋಗಲಿ; ಈಗ ತಾವಾಗಿಯೇ ಸಾಯುತ್ತಾ ಬಿದ್ದಿರುವುವು; ಎರಡು ದಿನ ನಾವು ತಟಸ್ಥರಾಗಿದ್ದರೆ ಹೋಗಿ ಹಳ್ಳಿಗಳಲ್ಲಿ ಅಡಗಿಕೊಳ್ಳುವುವು; ಆಗ ರಾಜಭಾಷೆಯೊಂದು ಹಿಮಾಲಯದಿಂದ ರಾಮೇಶ್ವರದವರೆಗೂ ಸ್ವೇಚ್ಛೆಯಾಗಿ

ಓಡಾಡುವುದು. ಇದು ಬಿಟ್ಟು, ನರಳುತ್ತಿರುವ ದೇಶಭಾಷೆಗಳನ್ನು ಗುಣಮಾಡಿ ತಲೆಯೆತ್ತಿಸಬೇಕು ಎನ್ನುವರು ಇಂಡಿಯದ ಒಗ್ಗಟ್ಟಿಗೆ ಅಡ್ಡಬಂದು ನಿಲ್ಲುವರು; ಅವರು ರಾಜ್ಯದ ಹಿತಚಿಂತನೆಗೆ ಮೃತ್ಯುಗಳು."

೩. ಹೀಗೆ ಯೋಚಿಸತಕ್ಕವರು ತಿಳಿಯದವರು, ಕೆಡುಕಿಗಳು, ಅಭಿಮಾನವಿಲ್ಲದವರು ಎಂದು ಹೇಳುವುದಕ್ಕಾಗುವುದಿಲ್ಲ. ಇವರು ಬಹುದೂರ ಯೋಚನೆ ಮಾಡಿ, ಒಗ್ಗಿ ಬಂದ ಪಕ್ಷಪಾತವನ್ನು ತೊರೆದು, ಅಲ್ಪಲಾಭಕ್ಕೇ ದಣಿದುಹೋಗದೆ, ರಾಜ್ಯಕ್ಕೆಲ್ಲಾ ಉತ್ತಮವಾಗಿಯೂ ಶ್ರೇಯಸ್ಕರವಾಗಿಯೂ ಇರುವ ಮಾರ್ಗವನ್ನು ಉಪದೇಶಮಾಡುತ್ತಿರುವರು. ದೇಶಭಾಷೆಗಳಲ್ಲಿ ವಿಶ್ವಾಸವುಳ್ಳವರು ಇವರಿಗೆ ಏನು ತಾನೇ ಹೇಳಲಾದೀತು? ನಮಗೆ ಒಗ್ಗಟ್ಟು ಬೇಡ ಎನ್ನಬಹುದೆ? ಒಂದು ಭಾಷೆ ಇಲ್ಲದೆ ಒಗ್ಗಟ್ಟೂ ಇಲ್ಲವಾದರೆ, ದೇಶಭಾಷೆಗಳನ್ನು ನಾವೂ ಕೈಬಿಟ್ಟೇ ತೀರಬೇಕು. ನಮ್ಮ ಪುಣ್ಯಕ್ಕೆ ಆ ನಿರ್ಬಂಧವೇನೂ ಇಲ್ಲ; ಏಕೆಂದರೆ ನಾವು ಈ ಸಿದ್ಧಾಂತವನ್ನು ಸಂಪೂರ್ಣವಾಗಿ ಒಪ್ಪಬೇಕಾದದ್ದಿಲ್ಲ. ಒಂದು ಭಾಷೆ ಇರುವುದು ಉತ್ತಮಪಕ್ಷವೇ ಸರಿ; ಆ ರೀತಿ ಇರತಕ್ಕ ಜನರು ಪುಣ್ಯವಂತರು. ಆದರೆ ಇದಕ್ಕೆ ಆಯಾ ಜನರ ಚರಿತ್ರೆ ಮೂಲಕಾರಣವಾಗಿದೆ. ಯಾವ ದೇಶದಲ್ಲಿ ಒಂದೇ ಜಾತಿಯ ಜನರು ಹೆಚ್ಚುತ್ತ ಹೋದರೋ, ಇಲ್ಲವೆ ಕೆಲವರಾದ ಪೂರ್ವ ನಿವಾಸಿಗಳಿಗೂ ತಮ್ಮ ಭಾಷೆಯನ್ನೇ ಹಿಂದೆಯೇ ಕಲಿಸಿಬಿಟ್ಟರೋ, ಅಲ್ಲಿ ಈಗ ಒಂದೇ ಭಾಷೆ ನಿಂತಿದೆ. ಇಂಡಿಯದಲ್ಲಿ ಹಾಗಾಗಲಿಲ್ಲ. ಇಲ್ಲಿ ಮುಖ್ಯವಾಗಿ ಎರಡು ಬುಡಕಟ್ಟಿಗೆ ಸೇರಿದ ಆರ್ಯಶೂದ್ರರೇ ಇದ್ದರೂ, ಅವರ ಎರಡು ಭಾಷೆಗಳೂ ಒಡೆದು ಈಗ ಮೇಲಾಗಿರತಕ್ಕುವು ಹತ್ತು ಹದಿನೈದಿರುತ್ತವೆ. ಇವುಗಳಲ್ಲಿ ದೇಶಕ್ಕೆಲ್ಲಾ ಯಾವುದಾದರೂ ಒಂದನ್ನು ಹರಡಬೇಕಾದರೆ ಮಿಕ್ಕಮಾತಿನವರು ಒಪ್ಪುವರೋ? ಅವರ ಅಭಿಮಾನವೇನಾಗಬೇಕು? ಇದಲ್ಲದೆ ಶ್ರಮವೆಷ್ಟು? ಯಾವ ಕಾಲಕ್ಕೆ ಕೊನೆ ಮುಟ್ಟಬೇಕು? ಹಾಗೆ ಮಾಡಿದರೂ ಪ್ರಜೆಗೆಲ್ಲಾ ಒಂದು ಭಾಷೆಯಾಯಿತೇ ಹೊರತು, ಎಂದಿನಂತೆ ರಾಜರ ಸಂಗಡ ಕೆಲಸ ನಡೆಯುವುದಕ್ಕೆ ಇಂಗ್ಲಿಷ್ ಕಲಿತೇ ತೀರಬೇಕು. ಒಳ್ಳೆಯದು. ಇಂಗ್ಲಿಷನ್ನೇ ಏಕೆ ದೇಶಕ್ಕೆಲ್ಲಾ ಹರಡಬಾರದು? ಆಗಬಹುದು; ಆದರೆ ಮೂವತ್ತು ಕೋಟಿ ಜನರಲ್ಲಿ ಒಂದು ಪಿಳ್ಳೆಯೂ ಬಿಡದಹಾಗೆ ಇಂಗ್ಲಿಷ್ ಮಾತನ್ನು ಆಡುವುದು ಸುಲಭಸಾಧ್ಯವೇ ಯೋಚಿಸಿ; ಆ ಯುಗ ಬರುವ ತನಕ ನಾವೇನು ಮಾಡಬೇಕು? ಕನ್ನಡಿಯಲ್ಲಿರುವ ಗಂಟಿಗಾಗಿ ಕೈಯಲ್ಲಿರುವುದನ್ನು ಬಿಟ್ಟು ಕುಳಿತು ಕೊಳ್ಳುವುದಷ್ಟೆ!

೪. ಇದನ್ನು ಬಿಟ್ಟು ಬೇರೆ ಮಾರ್ಗವನ್ನು ಹುಡುಕಿದರೆ ಅಭಿಮಾನವೂ ಉಳಿಯುತ್ತದೆ, ಅನುಕೂಲವೂ ಆಗುತ್ತದೆ. ಅದೇನೆಂದರೆ, ಸಾಮಾನ್ಯವಾದ ರಾಜಕಾರ್ಯಕ್ಕೂ, ಇಂಡಿಯ ರಾಜಕ್ಕೆಲ್ಲಾ ಸಂಬಂಧಪಟ್ಟ ವಿಷಯಗಳಿಗೂ, ಬೇರೆ ಬೇರೆ ಪ್ರಾಂತ್ಯಗಳಿಂದ ಜನ ಕಲೆಯತಕ್ಕ ಸಭೆಗಳಿಗೂ, ಬಳಸುವುದಕ್ಕೆ ಇಂಗ್ಲಿಷ್ ಭಾಷೆಯನ್ನು ಇಟ್ಟುಕೊಳ್ಳುವುದು; ಪ್ರಾಂತ್ಯಗಳಲ್ಲಿ ಹುಡುಗರು, ಹೆಂಗಸರು, ಒಕ್ಕಲಿಗರು ಎಲ್ಲರ ವಿದ್ಯಾಭಿವೃದ್ಧಿಗಾಗಿ ಆಯಾ ಜನರ ದೇಶಭಾಷೆಯನ್ನು ಇಟ್ಟುಕೊಳ್ಳುವುದು. ಎರಡಲ್ಲ, ಇಪ್ಪತ್ತು ದೇಶಭಾಷೆಗಳಿದ್ದರೂ ಒಗ್ಗಟ್ಟಿಗೆ ಕುಂದುಕವಿಲ್ಲ; ಎಲ್ಲಾ ಕಡೆಯಲ್ಲಿಯೂ ಆಡಬಹುದಾದ ಒಂದು ರಾಜಭಾಷೆಯ ಜೊತೆಗೆ ಎಷ್ಟುಬೇಕಾದರೂ ಇವು ಇರಬಹುದು. ಒಂದೇ ಏಕಭಾಷೆಯಿಲ್ಲದೆ ಏಕರಾಜ್ಯವಿಲ್ಲ ಎನ್ನುವ ಮಾತು ಸುಳ್ಳು, ಹಿಂದೆ ಸಣ್ಣ ರಾಜ್ಯಗಳಲ್ಲಿ

ಹೀಗಿತ್ತು; ಈಗಲೂ ಕೆಲವು ಕಡೆ ಹೀಗಿದೆ. ಆದರೆ ಇಪ್ಪತ್ತನೆಯ ಶತಮಾನದ ವಿಸ್ತಾರವಾದ ಚಕ್ರಾಧಿಪತ್ಯಗಳಲ್ಲಿ, ಸಮವಾದ ನಾಗರಿಕತೆಯೂ, ರಾಜಿಕ ವಿಷಯಗಳಲ್ಲಿ ಬಹುಕಾಲದಿಂದ ಕಷ್ಟಸುಖಕ್ಕೂ ಜಯಾಪಜಯಕ್ಕೂ ಸಮಭಾಗಿಗಳಾಗಿ ಮುಂದೆಯೂ ಏಕಗೃಹಕೃತ್ಯದಿಂದ ಪರಸ್ಪರ ಲಾಭವುಂಟೆಂಬ ತಿಳಿವಳಿಕೆಯೂ, ಮತ, ಜಾತಿ, ಆಚಾರ, ಭಾಷೆಗಳ ಎಲ್ಲೆಕಟ್ಟುಗಳನ್ನು ಮೀರಿ ಜನಾಂಗಗಳನ್ನು ಒಟ್ಟಿಗೆ ಬೆಸೆಯುತ್ತಿವೆ. ಈ ನಾಗರಿಕತೆ ಇಂಡಿಯಾದಲ್ಲಿ ಮೊದಲಿಂದ ಉಂಟು; ಈ ತಿಳಿವಳಿಕೆ ಈಗೀಗ ಹುಟ್ಟುತ್ತಿದೆ. ಐಕಮತ್ಯವೆಂದರೆ ಎಲ್ಲರೂ ಒಂದೇ ಪಡಿಯಚ್ಚಾಗಿ ಸ್ವತಂತ್ರವನ್ನು ನೀಗಿಕೊಳ್ಳಬೇಕೆಂದಲ್ಲ; ಭೇದವಿರಬೇಕಾದ ಕಡೆ ಭೇದವೂ, ಸಾಮ್ಯವಿರಬೇಕಾದ ಕಡೆ ಸಾಮ್ಯವೂ, ಮುಖ್ಯ ಪರಸ್ಪರ ವಿಶ್ವಾಸವಿದ್ದಲ್ಲಿ ಎರಡೂ ಐಕಮತ್ಯದಲ್ಲಿ ಸೇರಬಹುದು. ಆದಕಾರಣ, ಅಭಿಮಾನದಿಂದ ದೇಶಭಾಷೆಗಳನ್ನು ಉದ್ಧಾರಮಾಡಿ ಆಯಾ ಪ್ರಾಂತ್ಯಗಳ ಜನಸಾಮಾನ್ಯಕ್ಕೂ, ಅನುಕೂಲಕ್ಕೆ ಇಂಗ್ಲಿಷ್ ಭಾಷೆಯನ್ನು ಸ್ವೀಕರಿಸಿ ಒಗ್ಗಟ್ಟಿಗಾಗಿ ಒದ್ದಾಡುವ ಇಂಡಿಯದ ವಿದ್ಯಾವಂತರಿಗೂ, ಇಬ್ಬರಿಗೂ ಲಾಭವಾಗುವಂತೆ ನಡೆಯತಕ್ಕದ್ದೇ ಮೇಲು. ಈ ರೀತಿ ಈಗ ನಡೆಯುತ್ತಲೇ ಇದೆ. ಮುಂದೆಯೂ ಅದನ್ನೇ ಬಲಪಡಿಸಿಕೊಂಡು ಹೋಗುವುದು ಮೇಲೆಂದು ಕಾಣುತ್ತದೆ.

೫. ನಾವು ಸ್ವೀಕರಿಸತಕ್ಕ ಭಾಷೆಗಳನ್ನು ಹೇಳುತ್ತಿರುವಾಗ ಸಂಸ್ಕೃತವನ್ನು ಬಿಡುವುದಕ್ಕಿಲ್ಲ. ಇದು ನಮ್ಮ ಪೂರ್ವಿಕರಾದ ಆರ್ಯರ ಭಾಷೆ; ಇದರಲ್ಲೇ ನಮ್ಮ ಪುಸ್ತಕ ಭಂಡಾರವೆಲ್ಲಾ ಅಡಗಿದೆ ಇದನ್ನು ತಿಳಿದ ಹೊರತು ಹಿಂದಿದ್ದ ಸ್ಥಿತಿಯಾಗಲಿ, ಈಗಿನ ಸ್ಥಿತಿಗೆ ಕಾರಣವಾಗಲಿ, ಮುಂದೆ ತಿದ್ದಬೇಕಾದ ರೀತಿಯಾಗಲಿ ತಿಳಿಯುವುದಿಲ್ಲ. ಆದ್ದರಿಂದ ಇಂಡಿಯಾದಲ್ಲಿ ವಿದ್ಯಾವಂತನೆನ್ನುವ ಪ್ರತಿಯೊಬ್ಬನೂ ಇಂಗ್ಲಿಷ್, ಸಂಸ್ಕೃತ, ತನ್ನ ಕಡೆಯ ದೇಶಭಾಷೆ ಈ ಮೂರನ್ನೂ ಚೆನ್ನಾಗಿ ತಿಳಿದಿರಬೇಕು. ತನಗೆ ಹರ್ಷವೂ ಲಾಭವೂ, ದೇಶಕ್ಕೆ ಉನ್ನತಿಯೂ ಸೌಖ್ಯವೂ ಬರುವಂತೆ ಶ್ರಮ ಬೀಳಬೇಕೆನ್ನುವವನಿಗೆ ಈ ಮೂರೂ ಬಂದೇ ತೀರಬೇಕು; ಇಲ್ಲದಿದ್ದರೆ ಅಷ್ಟು ನೇರ್ಪಿಲ್ಲ.

೬. ಈ ಮೂರನ್ನೂ ಕಲಿಸತಕ್ಕ ಭಾರ ಯೂನಿವರ್ಸಿಟಿಯ ಪಂಡಿತರ ಮೇಲೆ ಬಿದ್ದಿದೆ ಉಳಿಸಿಕೊಂಡು ತೇಜಸ್ಸನ್ನು ಹೊಂದಿಸುವ ಭಾರ ವಿದ್ಯಾವಂತರ ಮೇಲಿದೆ. ಆದರೆ ಈ ಎರಡು ಕಡೆಯಿಂದಲೂ ಇವಕ್ಕೆ ಸರಿಯಾದ ಶ್ರದ್ಧೆ ಕಾಣಬರುವುದಿಲ್ಲ. ಇಂಗ್ಲಿಷೇನೋ ಬಲವಾಗುತ್ತಿದೆ; ಮಿಕ್ಕ ನಮ್ಮ ಭಾಷೆಗಳೆರಡೂ ಕುಗ್ಗುತ್ತಿವೆ. ಇಂಗ್ಲಿಷ್ ಕಲಿಯುವ ಹುಡುಗರೆಲ್ಲಾ ಹಿಂದೆ ಕನ್ನಡವನ್ನಾಗಲಿ, ಸಂಸ್ಕೃತವನ್ನಾಗಲಿ ಒಂದನ್ನಾದರೂ ಕಲಿಯುತ್ತಿದ್ದರು. ಈಗ ಅದೂ ಹೋಯಿತು. ಕನ್ನಡ, ಸಂಸ್ಕೃತಗಳನ್ನು ಈಗ ಒಟ್ಟಿಗೆ ಕಲಿಯುತ್ತಾರಲ್ಲ ಎನ್ನಬಹುದು; ಇದೇನೋ ಸರಿಯೆ; ಆದರೆ ಎಷ್ಟು ಜನ! ಹೀಗೆ ಮಾಡಿದ್ದರಿಂದ ಮೇಲೆ ಮೇಲೆ ತೇಲಿಸಿಕೊಂಡು ಓದಿ ಬಿ.ಎ. ಡಿಗ್ರಿ ಪಡೆದು ತಾವಾಗಿ ಒಂದು ಗ್ರಂಥವನ್ನು ನೋಡಿಕೊಳ್ಳಲಾರದ ವಿದ್ಯಾರ್ಥಿಗಳು ಹೋಗಿ, ಪ್ರಚಂಡಪಂಡಿತರು ಬಂದು ಭಾಷೆಯನ್ನು ಉದ್ಧರಿಸುತ್ತಾರೆ, ಎಂದು ಯೋಚಿಸಿ ಏರ್ಪಡಿಸಿದ ಹಾಗೆ ತೋರುತ್ತದೆ. ಹೇಳಿಕೆಯಲ್ಲೇನೋ ಇದು ಮುದ್ದಾಗಿದೆ; ನಡವಳಿಕೆ ತಾನೇ ಅಷ್ಟು ಮುದ್ದಾಗಿಲ್ಲ, ಸಂಸ್ಕೃತ-ಕನ್ನಡವನ್ನು ಆರಿಸಿಕೊಂಡವರು ಈ ಏರ್ಪಾಟಿನಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆಯಬಹುದು, ನಿಜ; ಆದರೆ ಆರಿಸಿಕೊಳ್ಳುವವರು ಯಾರಾದರೂ ಉಂಟೋ, ತಿಳಿಯದೆ

ಆರಿಸಿಕೊಂಡು ಆಮೇಲೆ ಕೊರಗದವರು ಉಂಟೋ? ಪ್ರಶಸ್ತವಾದ ಗ್ರಂಥಗಳಿಂದ ತುಂಬಿ, ಬಹುಮಾನಕ್ಕೆ ಪಾತ್ರವಾದ ಭಾಷೆಗಳನ್ನು ತೆಗೆದುಕೊಳ್ಳುವುದೂ ಒಂದು ರೀತಿ; ಇದರ ಮೇಲೆ, ಎರಡೂ ಇಲ್ಲದೆ, ದುರ್ಬಲವಾಗಿ, ಸಂಸ್ಕೃತ ಪಂಡಿತರಿಂದಲೂ, ಇಂಗ್ಲಿಷ್ ವಿದ್ಯಾರ್ಥಿಗಳಿಂದಲೂ, ಲೋಕವ್ಯಾಪಾರದಲ್ಲಿ ತೊಡರಿಕೊಂಡ ಜನ ಸಾಮಾನ್ಯದಿಂದಲೂ ಅಸಡ್ಡೆ ಮಾಡಿಸಿಕೊಂಡು, ಕೈಕೊಟ್ಟು ಎತ್ತುವರಿಲ್ಲದೆ ಮುರಿದು ಬೀಳುತ್ತಿರುವ ಕನ್ನಡದ ವಿಷಯ ಹೇಳಬೇಕಾದದ್ದೇ ಇಲ್ಲ. ಕೇವಲ ಜ್ಞಾನ ವಿಕಾಸಕ್ಕಾಗಿಯೇ ಯಾರೂ ಕನ್ನಡವನ್ನು ಓದುವುದಿಲ್ಲ; ಜೀವನಕ್ಕೆ ಮಾರ್ಗವೋ, ಅದು ಕನಸಿಗೂ ಬರಲಿಲ್ಲ. ಜ್ಞಾನವೂ ಇಲ್ಲ, ಜೀವನವೂ ಇಲ್ಲ. ಇನ್ನು ಯಾವ ಪುರುಷಾರ್ಥಕ್ಕೆ ಇದನ್ನು ಕಲಿಯುವುದು? ಒಳ್ಳೆಯದು, ಮುಂದಾದರೂ ವೃದ್ಧಿಯಾದೀತೆಂದು ಅಭಿಮಾನದಿಂದ ಬಹುಮಾನದ ಆಶೆಯನ್ನು ತೊರೆದು, ವರ್ಷಕ್ಕೆ ಮೂರು ನಾಲ್ಕು ಜನ ಸೇರುತ್ತಾರಲ್ಲಾ. ಅವರೆಲ್ಲರೂ ಭಾಷಾಸೇವೆಯಲ್ಲಿ ಬದ್ಧಕಂಕಣರಾಗುತ್ತಾರೆ ಎಂದೇ ಭಾವಿಸೋಣ. ಆಯಿತು, ಇವರ ಪ್ರಯತ್ನವನ್ನೂ ಇವರ ಪಾಂಡಿತ್ಯದ ಫಲವನ್ನೂ ಮೆಚ್ಚತಕ್ಕವರು ಯಾರು? ಕನ್ನಡವನ್ನು ಹಿಡಿದದ್ದಕ್ಕಾಗಿ ಇವರನ್ನು ಆಡಿಕೊಳ್ಳುತ್ತಾ, ಹುಟ್ಟುಗನ್ನಡವನ್ನೂ ಮರೆಯುತ್ತಾ, ದೊಡ್ಡಮನುಷ್ಯರಾಗುವ ಇವರ ಸಹಪಾಠಿಗಳೇ ಅಲ್ಲವೇ? ಇದು ಹಾಗಾಯಿತು ಎಂದರೆ, ಊರ ಕಿವಿಗೆಲ್ಲಾ ಹತ್ತಿಯಿಟ್ಟು, ಒಬ್ಬನಿಗೆ ವೀಣೆ ಹೇಳಿದ ಹಾಗಾಯಿತು ಸರಸ್ವತೀ ದೇವಿ. ಜನರಿಗೆ ಹಿರಿಯರಿಂದ ಬರುವ ಒಡವೆಗಳಲ್ಲಿ ಭಾಷೆ ಒಂದು; ಅದು ಚೆನ್ನಾಗಿದ್ದಷ್ಟೂ ಭೂಷಣ. ಅದರಲ್ಲಿ ಎಲ್ಲರಿಗೂ ಪರಿಶ್ರಮವಿದ್ದು, ಪ್ರಮುಖರಾದವರಿಗೆ ಪೂರ್ಣಜ್ಞಾನವಿದ್ದರೆ, ಅವರಿಗೆ ಲಾಭವೂ, ಇವರಿಗೆ ಉತ್ಸಾಹವೂ ಉಂಟಾಗಿ, ಭಾಷೆಯೂ ಉತ್ಕೃಷ್ಟವಾಗುತ್ತದೆ. ಹಾಗೆ ಗರಿಬೆಳೆದು ಪೋಷಣೆಯನ್ನು ಕೇಳದ ಕಾಲ ಬಂದಾಗ ನೋಡಿಕೊಳ್ಳೋಣ. ಬಲವಂತದಿಂದ ಬದುಕಿಸಿಕೊಂಡು ಪ್ರಾಣವನ್ನು ಹುಯ್ಯುವ ಕಾಲದಲ್ಲಿ, ಅಭಿಮಾನವಿದ್ದವರು ಓದಿ ಎಂದು ಪರೀಕ್ಷೆ ಮಾಡತಕ್ಕದು ನ್ಯಾಯವೂ ಅಲ್ಲ; ವಿವೇಕವೂ ಅಲ್ಲ. ಇದರ ಕೆಡಕು ಆಗಲೇ ಕಾಣುತ್ತಿದೆ; ಬೇಗ ಕಣ್ಣುಬಿಟ್ಟು ನೋಡಿ ಯೂನಿವರ್ಸಿಟಿಯವರು ಸಮರ್ಪಕವಾದ ಏರ್ಪಾಟನ್ನು ಮಾಡಲೆಂದು ಹಾರೈಸಬೇಕಾಗಿದೆ.

೭. ಕನ್ನಡ ವಿದ್ಯೆಯನ್ನು ಕಲಿಸತಕ್ಕವರು ಅದಕ್ಕೆ ತಂದ ಅಪಾಯವನ್ನು ನೋಡಿದ್ದೇವಷ್ಟೆ; ಅದನ್ನು ಹಿಂದೆ ಓದಿ ಬಿರುದು ಪಡೆದವರು ಮಾಡುವ ಸಹಾಯವೇನು ನೋಡೋಣ. ಇವರಿಗೆ ಕನ್ನಡದ ಏಳಿಗೆಯ ಆತಂಕವೇ ಇಲ್ಲ. ಇಂಗ್ಲಿಷ್ ಕಾವ್ಯದ ಉತ್ತಮ ಗುಣಗಳನ್ನು ಭೋಗಿಸಿ, ಅದರ ಅಂದವನ್ನು ಕಂಡ ಇವರ ಕಣ್ಣಿಗೆ, ಇಂಪನ್ನು ಕೇಳಿದ ಇವರ ಕಿವಿಗೆ ಕನ್ನಡ ಸೊಗಸದು, ಓದುವುದು ಆನಂದಕ್ಕೆ, ಇಲ್ಲ ಅರ್ಥಕ್ಕೆ, ಇವರ ಮನಸ್ಸಿನಲ್ಲಿ ಇಂಗ್ಲಿಷಿನಿಂದ ಎರಡೂ ಉಂಟು; ಕನ್ನಡದಿಂದ ಒಂದೂ ಇಲ್ಲ. ನಿಮ್ಮ ತಾಯಿಮಾತಿನಲ್ಲಿ ನಿಮಗೆ ಅಕ್ಕರೆಯೇ ಇಲ್ಲವಲ್ಲ ಎಂದು ಕೊರಗಿನಿಂದ ನಾವು ಆಕ್ಷೇಪಣೆ ಎತ್ತಿದರೆ- "ದಿಟ, ಮಾಡುವುದೇನು, ನಾವೂ ನಾಲ್ಕುದಿನ ಅದಕ್ಕೆ ಮಣ್ಣು ಹಾಕಿದೆವು. ಅಪ್ಪ ನೆಟ್ಟ ಆಲದಮರ ಎಂದು ನೇತುಹಾಕಿಕೊಳ್ಳೋಣವೇ! ಕೆಲಸಕ್ಕೆ ಬಾರದ ಮಾತು; ಎಲ್ಲೋ ಸಿಕ್ಕಿ ಹೋಳು ಒಡೆದಿದ್ದಾರೆ. ಬರವಣಿಗೆಯನ್ನು ನೋಡೇವೇ, ಮೇಲೆ ತೋಟ ಶೃಂಗಾರ, ಒಳಗೆ ಗೋಣಿಸೊಪ್ಪು, ಯಾವ ಕವಿಯ ಕವನವೇ ತೆಗೆಯಿರಿ, ಲೋಕಶ್ರೇಷ್ಠವಾದ ನೀತಿಗಳಾಗಲಿ, ದಿವ್ಯಜೀವನಕ್ಕೆ ಮೇಲುಪಂಕ್ತಿಯಾದ ಚರಿತ್ರೆಗಳಾಗಲಿ, ರಮ್ಯವಾದ ಸಹಜವರ್ಣನೆಗಳಾಗಲಿ ಮನಸ್ಸು ಮುಳುಗಿಹೋಗುವ ಕಲ್ಪನೆಗಳಾಗಲಿ, ಯಾವುದಾದರೂ ಒಂದು

ನಮ್ಮ ಹೃದಯವನ್ನು ಆನಂದಪ್ರವಾಹದಲ್ಲಿ ತೊಳೆದು, ದುಃಖಮಯವಾದ ಈ ಸಂಸಾರದಲ್ಲೇ ಸ್ವರ್ಗಸುಖವನ್ನು ತಂದುಕೊಡುವಂತದು ಇದೆಯೇ? ಹಿತವಾದ ಸಾರ್ಥಕವಾಗಿ ಹೊತ್ತು ಕಳೆಯಬಹುದಾದ ವಚನ ಕಾವ್ಯಗಳುಂಟೇ? ಹಿಂದಿನ ಕಾಲದ ಸತ್ಯವಾದ ವೃತ್ತಾಂತವಿಲ್ಲ; ನೀತಿ ಹೇಳಿ ಪ್ರಪಂಚಧರ್ಮವನ್ನು ಚಿತ್ರಿಸುವ ಕಟ್ಟುಕಥೆ ಇಲ್ಲ; ಸಾಮಾನ್ಯವಾದ ವ್ಯವಹಾರಜ್ಞಾನವನ್ನು ಕೊಡುವ ಪ್ರಸಂಗವಿಲ್ಲ; ಅದ್ಭುತ ಇಲ್ಲ ತುಚ್ಛವಾದ ಮಹಾತ್ಮೆಯಿಂದ ಪೊಳ್ಳಾಗದಂತ ದೇಶದ ಮಹನೀಯರ ಜೀವನಚರಿತ್ರೆ ಇಲ್ಲ; ಎಲ್ಲಕ್ಕಿಂತ, ಮನುಷ್ಯನ ಜೀವನೋಪಾಯಕ್ಕೂ ಸುಖಲೋಲುಪ್ತಿಗೂ ಅನುಕೂಲಿಸತಕ್ಕ ಶಾಸ್ತ್ರಗಳ ಪರಿಚಯಕ್ಕೆ ಅವಕಾಶವಿಲ್ಲ. ಈ ನಮ್ಮ ಕನ್ನಡವನ್ನು ಏನು ಕೊಳ್ಳೆ ಹೋಗುತ್ತದೆಂದು ಕಾಪಾಡಬೇಕು; ಕಷ್ಟಬಿದ್ದು ಹೆಚ್ಚಿಸಬೇಕು? ಅದರಲ್ಲಿ ನಮಗೆ ವೈರವೂ ಇಲ್ಲ, ವಿಶ್ವಾಸವೂ ಇಲ್ಲ. ಅದು ಇದ್ದರೆಷ್ಟು, ಹೋದರೆಷ್ಟು? ನಿಮಗೆ ಇನ್ನೇನೂ ಕೆಲಸವಿಲ್ಲದಿದ್ದರೆ, ಅದನ್ನು ಹಚ್ಚಿಸಿಕೊಂಡು ಹೊತ್ತು ಕಳೆಯಿರಿ, ನಮಗೆ ದುಃಖವಿಲ್ಲ. ನಮ್ಮ ಪಾಲಿಗೆ ಸಾಕಾದಷ್ಟು ಕನ್ನಡ ತಾಯ ಹಾಲಿನಲ್ಲೇ ಬೆರೆದು ಬಂದು ಹೋಯಿತು; ಅಷ್ಟು ಆಡುತ್ತೇವೆ. ಸಾಲದ್ದಕ್ಕೆ ಇಂಗ್ಲಿಷ್ ಹಿಂದೂಸ್ತಾನಿ ಜೋಡಿಸುತ್ತೇವೆ. ಕಾಗದಗಳು ಬೇಕಾದರೆ ಇಂಗ್ಲಿಷಿನಲ್ಲಿ ಬರೆಯುತ್ತೇವೆ. ಏನೋ ಎರಡು ದಿನ ನಾಲ್ಕು ಜನಕ್ಕೆ ಮೇಲಾಗಿ ಬಾಳಿ ಹೊರಟು ಹೋಗುತ್ತೇವೆ. ನಿಮ್ಮ ಕನ್ನಡದಿಂದ ನಮಗೆ ಆಗಬೇಕಾದದ್ದು ಏನೂ ಇಲ್ಲ; ಆ ಹಾಳು ಕನ್ನಡಕ್ಕೆ ನಾವು ಪಟ್ಟ ರಗಳೆಯೇ ಸಾಕಾಗಿದೆ; ಒಂದು ಸಲ ಪರೀಕ್ಷೆ ಕೂಡ ಆಗದೆ ಹೋಗುವ ಸಂಕಟಕ್ಕೆ ಬಂದುಬಿಟ್ಟಿತು. ನಮ್ಮ ಹುಡುಗರನ್ನೂ ಏತಕ್ಕೆ ಗೋಳು ಹುಯ್ದುಕೊಳ್ಳುತ್ತೀರಿ?" ಎಂದು ಹಾಸ್ಯಮಾಡುತ್ತಾ ಉತ್ತರ ಹೇಳುವರು.

೮. ಆರ್ಯರೆ, ಇವರ ಮಾತನ್ನು ನಾವು ಮನಸ್ಸಿಗೆ ತೆಗೆದುಕೊಂಡರೆ ಒಳ್ಳೆಯದೆಂದು ತೋರುತ್ತದೆ. ಏಕೆಂದರೆ ಅದು ಬಲುಮಟ್ಟಿಗೆ ವಾಸ್ತವ. ಬಲುಮಟ್ಟಿಗೆ ಅದನ್ನು ನಾವು ಒಪ್ಪಬೇಕಾಗುತ್ತದೆ. ಆಕ್ಷೇಪಣೆಗೆ ಗಮನಕೊಡುವುದರಿಂದ ಮುಂದೆ ಯಾವ ದೋಷಗಳನ್ನು ಬಿಟ್ಟು, ಯಾವ ಗುಣಗಳನ್ನು ಸೇರಿಸಿ, ಸರ್ವಜನಸಮ್ಮತವಾಗುವಂತೆ ಕನ್ನಡ ಕಾವ್ಯಮಾಲೆಯನ್ನು ಬೆಳೆಸಬಹುದೋ ಆ ಮಾರ್ಗ ಕಣ್ಣಿಗೆ ಹೊಳೆಯುತ್ತದೆ. ಅವರಿಗೂ ನಮಗೂ ಇಷ್ಟೇ ಭೇದ, ಕನ್ನಡ ಪುಸ್ತಕಗಳಲ್ಲಿ ಅವರಿಗೆ ಬರಿಯ ಹುಳುಕೇ ಕಾಣುತ್ತದೆ; ನಮಗೆ ಅಷ್ಟಿಲ್ಲ. ಆದರೂ ಬಲವಾದ ಕೊರತೆಗಳುಂಟೆಂದು ನಾವೂ ಬಲ್ಲೆವು. ಹುಳುಕನ್ನು ಕಂಡು ಅವರು ವಾತ್ಸಲ್ಯವನ್ನು ತೊರೆದಿದ್ದಾರೆ. ನಮಗೆ ಆ ಹುಳುಕೇ ವಾತ್ಸಲ್ಯವನ್ನು ಹೆಚ್ಚಿಸುತ್ತಿದೆ. ಇತರ ಹವ್ಯಾಸಗಳಲ್ಲಿ ಅವರು ಮಗ್ನರಾಗಿ ಕನ್ನಡದ ಪಾಡು ಏನು ಎನ್ನುವ ಚಿಂತೆಯೇ ಅವರಿಗೆ ಹತ್ತುವುದಿಲ್ಲ; ನಮಗೆ ಮೊದಲಿಂದಲೂ ಕನ್ನಡದಲ್ಲಿ ಬಳಕೆಯೂ ಅಕ್ಕರೆಯೂ ಸಡಗರವೂ ಹುಟ್ಟಿ ಎಂದಿಗೆ ನಾವೂ ಕೈಯಲ್ಲಾದಷ್ಟು ಸೇವೆ ಮಾಡಿ ಕನ್ನಡವನ್ನು ಒಳ್ಳೆಯ ಪದವಿಗೆ ತಂದೇವು ಎಂದುಕೊಳ್ಳುತ್ತೇವೆ. ಮುಖ್ಯ ಭಾಷೆಯಲ್ಲದಿದ್ದರೂ, ತನ್ನ ಪ್ರಾಂತ್ಯದಲ್ಲಿ ತಾನು ಉಪಭಾಷೆಯಾಗಿರುವಂತೆ ಆದರೂ ಮಾಡಬೇಕು. ಹೀನಸ್ಥಿತಿಯನ್ನು ನೋಡಿ ಕೈಬಿಡಬಾರದು; ದೋಷಗಳನ್ನೇ ಎತ್ತಿಹಾಕುತ್ತಾ ಅಲ್ಲಗಳೆಯಬಾರದು; ಭಾಷೆಯ ಮತ್ತು ಕಾವ್ಯಮಾಲೆಯ ಪೂರ್ವೋತ್ತರವನ್ನು ತಿಳಿದು, ಅವು ಮುಂದೆ ಶೋಭಿಸಿ ತಮ್ಮ ಸತ್ವದಿಂದಲೇ ಜನರು ಮೋಹಿಸುವಂತೆ ಮಾಡುವುದಕ್ಕಾಗಿ, ಎಲ್ಲರೂ ಅಭಿಮಾನಪಟ್ಟುಕೊಂಡು ಯೋಗ್ಯತಾನುಸಾರ ಸಹಾಯಮಾಡಬೇಕು. ಹಳ್ಳಕ್ಕೆ ಬಿದ್ದ ಹುಲಿಗೆ ತಲೆಗೊಂದು ಕಲ್ಲು ಎನ್ನುವ ಗಾದೆಯ

ಉಪದೇಶಕ್ಕೆ ಸರಿಯಾಗಿ ನಡೆಯಬಾರದು. ನಮ್ಮ ಭಾಷೆಯನ್ನು ನಾವು ಎತ್ತದೇ ಹೋದರೆ ಎತ್ತುವರು ಯಾರು? ಎತ್ತುವುದಕ್ಕೆ ನಿಂತರೆ, ತಡೆಯುವರು ಯಾರು?

೯. ಇದಲ್ಲದೆ, ನಮ್ಮ ಕನ್ನಡವನ್ನು ಮುಂದಕ್ಕೆ ತರುವುದಕ್ಕೆ ಬೇಕಾದ ಹೆಮ್ಮೆಯೂ ಹೆಬ್ಬುಬ್ಬೂ ನಮ್ಮಲ್ಲಿ ಉಂಟು. ನಮ್ಮ ಮಾತೇನೂ ನೆನ್ನೆಮೊನ್ನೆಯ ಕಾಡುಮಾತಲ್ಲ; ನಮ್ಮ ಕಾವ್ಯಮಾಲೆ ಓದುಬರಹ ಬರದ ಒಡ್ಡರು ಹೇಳುವ ಕುರುಕುಪದವೂ ಅಲ್ಲ. ಆರ್ಯರು ಇಂಡಿಯಕ್ಕೆ ಬರುವುದಕ್ಕೆ ಮೊದಲೇ ಇಲ್ಲಿ ದ್ರಾವಿಡ ಭಾಷೆ ನೆಲೆಸಿತ್ತು; ಈಚೆಗೆ ಒಡೆದು ಮುಖ್ಯವಾಗಿ ತೆಲುಗು, ತಮಿಳು, ಕನ್ನಡ, ಮಲೆಯಾಳ ಎಂದು ನಾಲ್ಕು ಕವಲಾಗಿದೆ. ಇವುಗಳು ಪ್ರತಿಯೊಂದರಲ್ಲಿಯೂ ವಿಸ್ತಾರವಾದ ಗ್ರಂಥಮಾಲೆ ಹುಟ್ಟಿದೆ. ಕನ್ನಡದಲ್ಲಿ ಸುಮಾರು ಐದು ಆರನೆಯ ಶತಮಾನದಿಂದಲೂ ಕಾವ್ಯಗಳನ್ನು ಬರೆದಿದ್ದಾರೆಂದು ಸ್ಪಷ್ಟವಾಗಿದೆ. ಹನ್ನೆರಡನೆಯ ಶತಮಾನದ ಕೊನೆಯವರೆಗೆ ಪುಸ್ತಕಗಳೆಲ್ಲಾ ಹಳಗನ್ನಡದಲ್ಲಿಯೂ, ಈಚೆಗೆ ಸಾಧಾರಣವಾಗಿ ಹೊಸಗನ್ನಡದಲ್ಲಿಯೂ ಬರೆದಿರುತ್ತವೆ; ಕೆಲವರು ಹಳಗನ್ನಡವನ್ನು ಕಲಿತು ಆಗಾಗ್ಗೆ ಅದರಲ್ಲಿ ಬರೆದಿರುವುದೂ ಉಂಟು. ನಮ್ಮ ಹಿರಿಯರು ಹೇಳಿಕೊಳ್ಳುತ್ತಿದ್ದ ಇತಿಹಾಸಗಳೂ, ನಂಬುತ್ತಿದ್ದ ಮತಗಳೂ, ನಡೆಯುತ್ತಿದ್ದ ಆಚಾರಗಳೂ, ಈ ಪುಸ್ತಕಗಳಲ್ಲಿ ಕಾಣಬರುತ್ತವೆ. ಇದಲ್ಲದೆ, ಕಾವ್ಯಲಕ್ಷಣ, ವ್ಯಾಕರಣ, ನಿಘಂಟು ಕೆಲವು ಪ್ರಕೃತಿಶಾಸ್ತ್ರಗಳು ಕೂಡ ಸಿಕ್ಕುತ್ತವೆ. ಈ ಭಂಡಾರವನ್ನೆಲ್ಲಾ ಕೂಡಿಟ್ಟು ಕಾಪಾಡಿಕೊಂಡು ಮುಂದೆ ಹೆಚ್ಚಿಸುತ್ತಾ ಹೋಗುವುದು ಬಿಟ್ಟು ಇದ್ದಬದ್ದದ್ದನ್ನೆಲ್ಲಾ ಕೆರೆಯಲ್ಲಿ ಮುಳುಗಿಸಿ ಕೈ ಬೀಸಿಕೊಂಡು ಮನೆಗೆ ಬರುವಷ್ಟು ಮರುಳುತನ ಎಲ್ಲಾದರೂ ಉಂಟೆ?

೧೦. ಆದರೆ, ಈ ರೀತಿ ನಮ್ಮ ಕಾವ್ಯಮಾಲೆಯನ್ನು ಬಲಮಾಡಬೇಕೆಂದು ಹೊರಡುವವರು ಮೊದಲು ಗಮನಿಸತಕ್ಕ ಅಂಶಗಳು ಕೆಲವಿದೆ. ಭಾಷೆಯಲ್ಲೂ ಕಾವ್ಯಮಾಲೆಯಲ್ಲೂ ಇರತಕ್ಕ ಗುಣಗಳನ್ನು ಉಳಿಸಿಕೊಳ್ಳಬೇಕೆಂದು ಹೇಳಬೇಕಾಗಿಯೇ ಇಲ್ಲ; ಅವನ್ನು ತೆಗೆದು ತೋರಿಸಬೇಕಾಗಿಯೂ ಇಲ್ಲ. ಆದರೆ ಇವು ಎರಡೂ ಯಾವ ಆಶ್ರಯದಲ್ಲಿ ಯಾವ ಸಂದರ್ಭಗಳಲ್ಲಿ ಬೆಳೆದುವು? ಇವುಗಳಲ್ಲಿ ಅಡಗಿರತಕ್ಕ ದೋಷಗಳೇನು? ಮುಂದೆ ಇವಕ್ಕೆ ಸೇರತಕ್ಕ ಗುಣಗಳು ಯಾವುವು? ಈ ವಿಚಾರವನ್ನು ನಿಷ್ಪಕ್ಷಪಾತದಿಂದ ಮಾಡುವುದು ಒಳ್ಳೆಯದು. ಹಾಗೆ ಮಾಡಿ ಕೆಲವು ವಿಧಿಗಳನ್ನು ಏರ್ಪಡಿಸಿಕೊಳ್ಳದೆ ಹೋದರೆ, ನೀವು ಎಷ್ಟೇ ಪುಸ್ತಕ ಬರೆಯುತ್ತಾ ಹೋಗಿ, ವಿದ್ಯಾವಂತರು ನಿಮ್ಮ ಕಡೆ ಕಣ್ಣೆತ್ತಿ ಕೂಡ ನೋಡುವುದಿಲ್ಲ. ಸಾಮಾನ್ಯ ಜನರಿಗಂತೂ ಅದರ ಸೆಲೆಯೇ ತಿಳಿಯುವುದಿಲ್ಲ.

೧೧. ಕನ್ನಡ ಭಾಷೆ ಪ್ರಬಲವಾಗುವುದಕ್ಕೆ ಸಂಸ್ಕೃತವೇ ಆಧಾರವೆಂದು ಎಲ್ಲರೂ ಬಲ್ಲ ವಿಷಯವಾಗಿದೆ. ಆರ್ಯರು ದಕ್ಷಿಣಕ್ಕೆ ಬಂದು ದ್ರಾವಿಡರಲ್ಲಿ ಉತ್ತಮವಾದ ನಾಗರಿಕತೆಯನ್ನು ಹರಡಿದರು. ಆ ನಾಗರಿಕತೆಗೆ ತಕ್ಕ ಭಾವಗಳಿಗೆ ಶಬ್ದಗಳನ್ನು ಹೊಂದಿಸಿಕೊಟ್ಟು ಭಾಷೆಯನ್ನು ಪುಷ್ಟಿಮಾಡಿದರು; ಬರಹವನ್ನು ಕಲಿಸಿಕೊಟ್ಟರು; ಕಾವ್ಯಸ್ವರೂಪವನ್ನು ತೋರಿಸಿಕೊಟ್ಟರು; ಆ ಕಾವ್ಯಕ್ಕೆ ಬೇಕಾದ ವೃತ್ತಗಳನ್ನೂ ಅಲಂಕಾರ ವ್ಯಾಕರಣಗಳನ್ನೂ, ಪುರಾಣ ಇತಿಹಾಸಗಳನ್ನೂ ಒದಗಿಸಿಕೊಟ್ಟರು. ಈ ರೀತಿ ಉಳದ ಹೊಲದಲ್ಲಿ ಬೆಳೆಮಾಡಿ ನಾಡೆಲ್ಲಾ

ಜೀವಕಳೆಯಿಂದ ತುಂಬಿ ತುಳುಕಾಡುವಂತೆ ಮಾಡಿಟ್ಟರು. ತಮ್ಮ ಸಂಸ್ಕೃತ ಭಾಷೆಯ ಮತ್ತು ಕಾವ್ಯದ ಬಲದಿಂದ ದ್ರಾವಿಡ ಜನರಿಗೆ ಲಾಭವನ್ನು ಕಾಣಿಸಿದರೇ ಹೊರತು ನಷ್ಟವೇನೂ ತರಲಿಲ್ಲ:- ಅವರ ಭಾಷೆ ಪುಷ್ಟಿಯಾಯಿತು. ಅವರ ಜ್ಞಾನ ವೃದ್ಧಿಯಾಯಿತು, ಅವರ ಮತ ಶ್ರೇಷ್ಠವಾಯಿತು. ಆದರೆ ಕನ್ನಡದಲ್ಲಿ ಕಾವ್ಯಗಳನ್ನು ಬರೆಯತೊಡಗಿದ ಜೈನರು ಮತ್ತು ಬ್ರಾಹ್ಮಣರು ಇದೇ ರೀತಿ ಕರ್ಣಾಟಕದ ಶ್ರೇಯಸ್ಸನ್ನು ಕೋರಲಿಲ್ಲ. ಇವರೂ ಮತವಿಷಯವಾದ ತತ್ತ್ವಗಳನ್ನು ಜನರಿಗೆ ಬೋಧಿಸಿದ್ದು ನಿಜ; ಆದರೆ ಇವರ ಗ್ರಂಥಗಳೆಲ್ಲಾ ಮುಕ್ಕಾಲುಪಾಲು ವಸ್ತುವಿನಲ್ಲಾಗಲಿ, ಭಾವಗಳಲ್ಲಾಗಲಿ, ಶೈಲಿಯಲ್ಲಾಗಲಿ ಜನಸಾಮಾನ್ಯಕ್ಕೆ ರುಚಿಸುವಂತೆ ಬರೆಯದೇ ಇರುವುದು ವ್ಯಸನ ಪಡತಕ್ಕದ್ದಾಗಿದೆ. ಇವರ ಗ್ರಂಥಗಳನ್ನು ಸಾಮಾನ್ಯಜನರು ಓದುತ್ತಿದ್ದರೋ- ಎಲ್ಲರೂ ಓದುವುದೆಲ್ಲಿ ಬಂತು?- ಓದಿಸಿ ಕೇಳುತ್ತಿದ್ದರೋ ಇಲ್ಲವೋ ಹೇಳುವುದು ಕಷ್ಟ, ಸಾಮಾನ್ಯ ಜನರೆಂದರೆ ದಕ್ಷಿಣದಲ್ಲಿ ಆರ್ಯರಲ್ಲ ಶೂದ್ರರು, ಶೂದ್ರರನ್ನು ಕಂಡರೆ ಆರ್ಯರಿಗೆ ತಿರಸ್ಕಾರ ಈಗಲೂ ಇದೆ; ಹಿಂದೆ ಇನ್ನೂ ಹೆಚ್ಚೇ ಇದ್ದಿರಬೇಕು. ಈ ಶೂದ್ರರು ತಮ್ಮನ್ನು ಗೌರವದಿಂದ ಕಾಣುವುದಕ್ಕೆ ಎಷ್ಟು ಬೇಕೋ ಅಷ್ಟು ಅವರಿಗೆ ಉಪದೇಶವನ್ನು ಬರೆಯಲಿಲ್ಲ. ರಾಜಸಭೆಗಳಲ್ಲಿ ಸುಖಪುರುಷನಾದ ಪೋಷಕನಿಗೆ ಹೊಗಳುಭಟ್ಟರಾಗಿ ತಮ್ಮೊಳಗೆ ಒಬ್ಬರನ್ನೊಬ್ಬರು ಜರೆಯುತ್ತಾ, ಸಂಸ್ಕೃತ ಕವಿಗಳನ್ನು ತಲೆಮೆಟ್ಟಿ ಹಾರಿದೆವೆಂದು ಪ್ರತಿಷ್ಠೆ ಕೊಚ್ಚುತ್ತಾ ಹತ್ತು ಎಳೆ ಸಂಸ್ಕೃತ ಒಂದು ಎಳೆ ಕನ್ನಡ ಹೀಗೆ ಕೂಡಿಸಿ ಬರಿಯ ಶಬ್ದಾಡಂಬರದ ಮಗ್ಗವನ್ನು ಹೆಣೆಯುತ್ತಾ, ದೊಡ್ಡ ಬಿರುದುಗಳನ್ನೂ ಧನವನ್ನೂ ಅಗ್ರಹಾರಗಳನ್ನೂ ಪಡೆಯುವುದಕ್ಕಾಗಿ ಸಂಸ್ಕೃತ ಪಂಡಿತರಾದ ಕವಿಗಳು ಈ ಗ್ರಂಥಗಳನ್ನು ಬರೆದದ್ದು. ರಾಜರ ಪ್ರಾಬಲ್ಯ ಮುರಿದು ಹೋದ ಹಾಗೆಲ್ಲಾ ಈ ಕವಿಗಳ ಅಬ್ಬರವೂ ಅಡಗುತ್ತ ಬಂತು. ಶಿವಭಕ್ತರ ಕಾಲದಿಂದ ಸ್ವಲ್ಪಮಟ್ಟಿಗೆ ಅತಿ ಪಾಂಡಿತ್ಯಕ್ಕೆ ಹೋಗದೆ ಜನಮಂಡಲಿಗಾಗಿ ಬರೆದ ಕಾವ್ಯಗಳು ದೊರಕುತ್ತದೆ. ಆದರೆ ಪಾಂಡಿತ್ಯ ಅತಿವೃಷ್ಟಿಯಾಗಿ ಬ್ರಾಹ್ಮಣ ಜೈನರ ಕಾವ್ಯಗಳು ನರೆತುಕೊಂಡುವು. ಲಿಂಗಾಯಿತರ ಕಾವ್ಯಗಳು ಪಾಂಡಿತ್ಯ ಸಾಲದೆ ಬಂದು ಕಣ್ಣಿಗೆ ಒಣಬರಲಾಗಿ ನಿಂತುಕೊಂಡಿವೆ. ಈಚೀಚೆಗಂತೂ ಏನು ಇಕ್ಕಟ್ಟಿನಲ್ಲಿ ಸಿಕ್ಕಿದೆವು! ಹಿಂದಿನ ಸಂಸ್ಕೃತದ ಪ್ರಾಬಲ್ಯವೂ ಅದರ ಕಾವ್ಯಮಾರ್ಗವೂ ಕುಗ್ಗಿ ಹೋದುವು: ಮುಂದೆ ಇಂಗ್ಲಿಷಿನ ಪ್ರಾಬಲ್ಯವೂ ಅದರ ಕಾವ್ಯಮಾರ್ಗವೂ ಹೆಚ್ಚುವಂತೆ ತೋರುತ್ತದೆ. ಆದರೆ ಇದು ಇನ್ನೂ ದೃಢವಾಗಿ ಎಲ್ಲರ ಮನಸ್ಸಿಗೂ ಹತ್ತಿಲ್ಲ. ನಮಗೇನೋ ಇದು ಸ್ವತಸ್ಸಿದ್ಧವಾಗಿ ಕಾಣುತ್ತದೆ; ಇಂಗ್ಲಿಷ್ ಸಾಹಿತ್ಯವೇ ಜೀರ್ಣವಾದ. ನಮ್ಮ ಕಾವ್ಯಮಾಲೆಯನ್ನು ಕೈಕೊಟ್ಟು ಎತ್ತಬೇಕು. ಇಂಗ್ಲಿಷ್ ಸಾಹಿತ್ಯವೇ ಸಂಸ್ಕೃತ ಸಾಹಿತ್ಯದಿಂದ ನಮ್ಮ ಕಾವ್ಯಮಾಲೆಗೆ ಇಳಿದಿರುವ ದೋಷಗಳನ್ನು ಪರಿಹಾರ ಮಾಡಬೇಕು.

೧೨. ಹಾಗೆ ಪರಿಹಾರವಾಗತಕ್ಕ ದೋಷಗಳು ಯಾವುವು ವಿಚಾರಿಸೋಣ. ಇವನ್ನು ಮುಖ್ಯವಾಗಿ ಕಾವ್ಯಗಳ ವಸ್ತು, ರೀತಿ, ಭಾವ, ವರ್ಣನೆ, ಶೈಲಿ, ರೂಪ ಎಂದು ಆರು ಬಗೆಯಾಗಿ ತೆಗೆದುಕೊಳ್ಳಬಹುದು:

(೧) ಕಾವ್ಯವಸ್ತುವಿನ ವಿಷಯದಲ್ಲಿ ಎಲ್ಲಾ ಹಳೆಯ ಕಥೆಗಳೇ ಹೊರತು ಹೊಸಹೊಸ ಸಂಗತಿಗಳು ಯಾವ ಕವಿಯಲ್ಲಿಯೂ ಸಿಕ್ಕುವುದಿಲ್ಲ. ಜನರ ಬಾಳಿಕೆಯಲ್ಲಿ ನಡೆಯತಕ್ಕ ವಿಚಿತ್ರಗಳನ್ನು ಅನುಸರಿಸಿ ಕಥೆಯನ್ನು ಕಟ್ಟಿ

ಕುತೂಹಲವನ್ನು ಹುಟ್ಟಿಸಬಲ್ಲ ಕವಿಯೇ ಇಲ್ಲ. ರಾಮಾಯಣಗಳೆಷ್ಟು, ಭಾರತಗಳೆಷ್ಟು, ಇನ್ನೂ ಇವನ್ನು ಬರೆಯತಕ್ಕವರು ಇದ್ದಾರಲ್ಲ! ಇವುಗಳಿಂದ ಭಾಗಗಳನ್ನು ತೆಗೆದು ಕವನ ಮಾಡಿ ದಣಿಯದವರು ಎಷ್ಟು ಮಂದಿ ! ಆಯಾ ಮತದ ಪುರಾಣ, ಇತಿಹಾಸ, ಇವು ಬಿಟ್ಟರೆ ಬೇರೆ ಹಾಡತಕ್ಕ ದಾಸರೇ ಇಲ್ಲವೋ!

(೨) ಕಾವ್ಯರೀತಿಯೂ ಅಷ್ಟೆ. ಎಲ್ಲಾ ಒಂದೇ ಕ್ರಮ. ಸೂತ್ರಕ್ಕೆ ಸ್ವತಂತ್ರವನ್ನು ಮಾರಿಕೊಂಡ ಕವಿಗಳಿಗೆ ಚಮತ್ಕಾರ ಏನು ಇದ್ದೀತು? ಒಂದರ ಪಡಿಯಚ್ಚು ಒಂದು; ಇಲ್ಲದಿದ್ದರೆ ಮಹಾಕಾವ್ಯವಾಗುವ ಪಾಪ ಉಂಟೆ? ಕವಿಯ ಕಂಠಕ್ಕೆ ಸೂತ್ರವೆಂಬ ಹೆಬ್ಬಾವು ನುಲಿದುಕೊಂಡು ಬಿಗಿಯುತ್ತ ಹೋದಹಾಗೆಲ್ಲಾ ಕೀಲುಕೊಟ್ಟಂತೆ ಹೊರಡುತ್ತವೆ ನೋಡಿ ಒಂದಾದ ಮೇಲೊಂದು - ದೇವತಾಸ್ತುತಿ, ಆತ್ಮಶ್ಲಾಘನೆ, ಕುಕವಿನಿಂದೆ, ಸಮುದ್ರವರ್ಣನೆ, ದೇಶ, ಮರ, (ಅದರಲ್ಲೂ ಹೂವಿನಂಗಡಿ, ಸೂಳೆಗೇರಿ ಮರೆಯುವುದೇ ಇಲ್ಲ). ರಾಜ, ರಾಣಿ, ಮಕ್ಕಳ ಬಯಕೆ, ವರ, ಮಗುವಿನ ಆಟ, ಹೀಗೆ ತೇರಿನ ಹೊರಜಿಯಂತೆ ಎಷ್ಟು, ಕಾವ್ಯದ ಉದ್ದಕ್ಕೂ! ಹದಿನೆಂಟು ವರ್ಣನೆಯಲ್ಲಿ ಒಂದು ತಪ್ಪಿದ್ದರೂ ಮುಕ್ಕಾಯಿತು. ಸಂಸಾರವನ್ನು ತೊರೆದ ಸನ್ಯಾಸಿಯ ಕಥೆಯಾದರೂ ಸರಿಯೆ, ಒಂದು ರಾತ್ರಿ ಬೆಳದಿಂಗಳಲ್ಲಿ ಅಲೆತ. ಹಿಂದಿನ ದಿನ ನೀರಿನಲ್ಲಿ ಆಟ, ಎಂದರೆ ಎರಡು ಆಶ್ವಾಸ ಮಲಗಿಹೋಯಿತು ಆ ಕಡೆ, ಭಕ್ತಿಯಿಂದ ಓದುವ ಅಜ್ಜಂದಿರಿಗೆ ಏನು ಪುಣ್ಯಕಥೆ! ಹೀಗೆ ಒಂದೇ ಕ್ರಮವನ್ನು ಹಿಡಿದರೆ ಒಬ್ಬ ಕವಿಯನ್ನು ಓದಿದ ಮೇಲೆ ಇನ್ನೊಬ್ಬನನ್ನು ಏಕೆ ಓದಬೇಕು? ಅದೂ ಬೇಡ, ಸಾಹಿತ್ಯದರ್ಪಣವನ್ನು ಓದಿಬಿಟ್ಟರೆ ಸಾಲದೆ?

(೩) ಒಂದೇ ಕಥೆ, ಒಂದೇ ಕ್ರಮವಾದರೂ ಭಾವಗಳೇನಾದರೂ ಹೊಸವು ಕಲಿಯಬಹುದೇ? ಅಯ್ಯೋ ಪಾಪ, ಎಲ್ಲಿ ಬಂದಾವು! ನಾಟಕವೇ, ನಾಯಕ, ನಾಯಕಿಯರು ಹೀಗೇ ಇರಬೇಕು. ಇಂಥ ಮಾತೇ ಆಡಬೇಕು. ಇಷ್ಟು ಸಲವೇ ಮೂರ್ಛೆ ಬೀಳಬೇಕು. ಕಾವ್ಯವೇ, ಕವಿಸಮಯಗಳು, ಭದ್ರ ಅಲಂಕಾರ ಕಂಠಪಾಠವಾಗಿರಲಿ, ಬಾಯಿಬಿಟ್ಟರೆ ಒಂದು ಮುತ್ತು ಸುರಿಯಬೇಕು, ಆಡಿದ ಹಾಗೆ ಪೆಚ್ಚಾಗಿ ಪದ್ಯವನ್ನು ಬರೆದವನೂ ಒಬ್ಬ ಪಂಡಿತನೇ? ಆ ವಿಜಾತೀಯವಾದ ಶ್ಲೇಷೆ, ವಿರೋಧಾಭಾಸಗಳಿಗೆ ಬರೆದವನೂ ಒಬ್ಬ ಪಂಡಿತನೇ? ಆ ವಿಜಾತೀಯವಾದ ಶ್ಲೇಷೆ, ವಿರೋಧಾಭಾಸಗಳಿಗೆ ಇವರಿಲ್ಲದಿದ್ದರೆ ಆಸರೆ ಇನ್ನೆಲ್ಲಿ? ಸವೆದ ದಾರಿಯಿಂದ ಕದಲಕೂಡದು, ಅದೇ ಭಾವವನ್ನು ಹಿಂದಿನವನು ಹೇಳಿದ್ದಾನೋ, ಇರಲಿ, ಬೇರೆ ಮಾತಿನಲ್ಲಿ ಜೋಡಿಸಿ ಬಿಟ್ಟರೆ ಆಯಿತು. ಕವಿಯ ಪಟ್ಟ ಬಂತು ನಿಜ, ನಮಗೂ ಬೇಸರ ಬಂತು, ತಲೆನೋವು ಬಂತು; ಅದರ ಹಿಂದೆ ತಾತ್ಸಾರ, ವಿರೋಧ ಇವೂ ಬಂದುವು.

(೪) ಇನ್ನು ವರ್ಣನೆಯನ್ನು ಕುರಿತು ಹೇಳಬೇಕಾಗಿಲ್ಲ ಕಣ್ಣಿಗೆ ಹಬ್ಬವಾದ ಸೃಷ್ಟಿಯ ಅಂದಚಂದಗಳನ್ನು ಸಹಜವಾಗಿ ಚಿತ್ರಿಸುವ ಕೌಶಲವನ್ನೇ ಅರಿಯರು ನಮ್ಮ ಕವಿಗಳು, ಎಲ್ಲಕ್ಕೂ ಕಿವಿ ಮೂಗು ಹರಿದು, ಕೊಂಬು ಕೋಡು ಹತ್ತಿಸಿ ವಿಕಾರ ಮಾಡುತ್ತಾರೆ. ಇವರ ಉತ್ಪ್ರೇಕ್ಷೆಗಳೂ ಅತಿಶಯೋಕ್ತಿಗಳೂ ಲೋಕದಲ್ಲಿ ಯಾರೂ ಕಾಣದಂತವು. ಇದ್ದದ್ದನ್ನು ಇದ್ದಹಾಗೆ ಹೇಳುವುದು ಎಷ್ಟು ಅಪೂರ್ವವೆಂದರೆ, ಎಲ್ಲಾದರೂ ಪ್ರಜ್ಞೆತಪ್ಪಿ

ಬಂದುಬಿಟ್ಟರೆ, ಅದನ್ನೂ ಸ್ವಭಾವೋಕ್ತಿ ಎಂಬ ಅಲಂಕಾರವನ್ನಾಗಿ ತಿಳಿಯುತ್ತಾರೆ. ಇನ್ನೊಂದು ಸಂಗತಿ ಹೇಳದೇ ಬಿಡುವುದಕ್ಕಿಲ್ಲ: ಅನೇಕ ಗ್ರಂಥಗಳಲ್ಲಿ ಲಜ್ಜೆಯನ್ನು ಕೂಡ ಮೀರಿ ಬರೆದಿರತಕ್ಕ ಭಾಗಗಳು ಬರುವುದರಿಂದ, ಮಕ್ಕಳಿಗಾಗಲಿ, ಹೆಂಗಸರಿಗಾಗಲಿ, ಮರ್ಯ್ಯಾದೆಯುಳ್ಳ ಗಂಡಸರಿಗಾಗಲಿ ಅವನ್ನು ಓದಹೇಳುವುದೇ ಅವಿವೇಕವಾಗಿದೆ.

(೫) ಶೈಲಿಯ ಪ್ರಸ್ತಾಪ ಹಿಂದೆಯೇ ಬಂದಿತ್ತು. ಎಲ್ಲೋ ಸಂಸ್ಕೃತದಲ್ಲಿ ಬರೆಯುವುದಕ್ಕೆ ಹೊರಟು, ಮರೆತು ಕನ್ನಡದ ಪ್ರತ್ಯಯಗಳನ್ನು ಹತ್ತಿಸಿದ ಹಾಗೆ ಕಾಣುತ್ತದೆ. ಪುಟ್ಟವಾಗಿಯೂ ಇಂಪಾಗಿಯೂ, ತಿರುಳುಳ್ಳವಾಗಿಯೂ ಇರುವ ಕನ್ನಡ ಮಾತುಗಳನ್ನು ಮೂಲೆಗೆ ತಳ್ಳಿ, ಎರಡುಮೂರು ಪಾದ ಉದ್ದವಾದ ಸಂಸ್ಕೃತ ಸಮಾಸಗಳ ಆಡಂಬರದಿಂದ ಅನ್ಯಾಯವಾಗಿ ಭಾಷೆಯನ್ನು ಹಿಂದು ಮಾಡಿದರಲ್ಲ! ಸಂಸ್ಕೃತದ ಆರ್ಭಟವಿಲ್ಲದೆ ಕನ್ನಡದಲ್ಲಿ ಗ್ರಂಥವನ್ನೇ ಬರೆಯುವುದಕ್ಕೆ ಆಗುವುದಿಲ್ಲ ಎಂದು ಬಾಯಿಬಡಿಯುವರಲ್ಲ! ದಿಟ, ಈ ಕಾಲದ ಭಾಷೆ ಯಾವುದೂ ಬೆರಕೆಯಾಗದೆ ಶುದ್ಧವಾಗಿಲ್ಲ; ಆದರೆ ಯಾವ ಮಾತುಗಳನ್ನು ಜನಮಂಡಲಿ ಪರಭಾಷೆಯೆಂಬ ಗಮನವೇ ಇಲ್ಲದೆ ಬಳಸುವುದೋ ಅವೆಲ್ಲಾ ಕನ್ನಡಕ್ಕೆ ಸೇರಿಹೋದವು. ಅಷ್ಟುಬಿಟ್ಟು, ಬೇಡವಾದ ಕಡೆ ಕೂಡ, ಸಂಸ್ಕೃತ ಬಲ್ಲೆವೆಂಬ ಕೊಬ್ಬಿನಿಂದ ಸ್ವಚ್ಛೆಯಾಗಿ ಶಬ್ದಗಳನ್ನು ಗಿಡಿದು, ಹತ್ತುಜನ ತಮ್ಮ ಪುಸ್ತಕವನ್ನು ಮುಟ್ಟದಂತೆ ಮಾಡಿಕೊಂಡರಲ್ಲ! ಇದಲ್ಲದೆ ಕನ್ನಡದ ಭಾಷೆಯ ಕ್ರಮಕ್ಕೆ ಸರಿಹೋಗದ ಕರ್ಮಣಿ ಮೊದಲಾದ ಪ್ರಯೋಗಗಳನ್ನು ಅಡಕುತ್ತಿರುವರಲ್ಲ! ಇದೇನು ಕನ್ನಡವೋ ನೀವೇ ನೋಡಿ:

"ವಿಲುಠತ್ ಘಂಟಾಪಟಿಷ್ಠಧ್ವನಿಬಧಿರಿತದಿಂಡಲಂ ಕರ್ಣತಾಳಾ
ನಿಲಲೋಲಲ್ಲೋಚಿಮಾಲಾಂಬರಸರಿದುದಕಂ ಪುಷ್ಕರೋಚ್ಚಾಟನವ್ಯಾ
ಕುಲಿತ ಬ್ರಹ್ಮಾಸನಾಂಭೋರುಹವತಿವಿತತಾಯೋಗ ರತ್ನಪ್ರಭಾಪಿಂ
ಗಲಿತಸ್ವರ್ಗಾಂತರಾಳಂ ಹಿಮಗಿರಿಧವಳಂ ಬಂದುದಿಂದ್ರದ್ವಿಪೇಂದ್ರಂ"

ಈ ಕನ್ನಡವನ್ನು ನೋಡಿ:

"ಮಹಾರಾಜಾ ದುರ್ಯ್ಯೋಧನನು ನಿಮ್ಮಿಂದ ಈ ಸ್ಥಳದಲ್ಲಿ ನೋಡಲ್ಪಟ್ಟನೆ?" "ದುರ್ಯ್ಯೋಧನನ ತೊಡೆಗಳೆಂಬ ಸ್ತಂಭಗಳನ್ನು ಮುರಿಯತಕ್ಕದ್ದರಲ್ಲಿ ನಿಶ್ಚಿಸಲ್ಪಟ್ಟ ವಿಜಯವುಳ್ಳ ಭೀಮಸೇನನು"

ಅಯ್ಯೋ ಕನ್ನಡ ಮಾತಾಡುವ ಜನರಾ, ನಿಮಗಾಗಿ ಪುಸ್ತಕವನ್ನು ಬರೆಯುವರು ಯಾರೂ ಕಾಣಲಿಲ್ಲ; ತಮ್ಮ ಪಾಂಡಿತ್ಯವನ್ನು ತಮ್ಮಂತಹ ಪಂಡಿತರಲ್ಲಿ ಮೆರೆಯುವುದಕ್ಕೇ ಬರೆಯುವಂತೆ ಕಾಣುತ್ತದೆ.

(೬) ಕಾವ್ಯದ ರೂಪವೋ ಸಾಮಾನ್ಯವಾಗಿ ಎಲ್ಲಾ ಪದ್ಯವೇ. ಜನರು ಹೆಚ್ಚಾಗಿ ಮೋಹಿಸತಕ್ಕವು ನಾಟಕಗಳು, ವಚನಕಾವ್ಯಗಳು. ಇವೆರಡೂ ಕನ್ನಡದಲ್ಲಿ ಕಡಮೆ. ಹೆಸರಿಗೊಂದು ಹಿಂದಿನ ನಾಟಕವಿದೆ; ಸಂಸ್ಕೃತ ಆಡುವುದು ನಿಂತುಹೋದ ಎರಡು ಸಾವಿರ ವರ್ಷದ ಮೇಲೂ ಅದೇ ಭಾಷೆಯಲ್ಲಿ ಬರೆಯುತ್ತಿದ್ದರೇ

ಹೊರತು, ಜನರು ಆಡುವ ದೇಶಭಾಷೆಗಳಲ್ಲಿ ಬರೆಯುವ ಯೋಚನೆಯೇ ಯಾರಿಗೂ ಬರಲಿಲ್ಲ. ಇದೊಂದರಿಂದಲೇ ಪಂಡಿತರಿಗೆ ಪಾಮರರ ಮೇಲೆ ಇದ್ದ ಮಮತೆ ಎಷ್ಟು ಎನ್ನುವುದು ಹೊರಪಡುತ್ತದೆ. ವಚನ ಕಾವ್ಯಗಳೂ ಎಲ್ಲೋ ಕೆಲವು ಇವೆ; ಆದರೆ ಇವೂ ಛಂದಸ್ಸಿಲ್ಲದ ಪದ್ಯಕಾವ್ಯಗಳೆಂದೇ ಹೇಳಬಹುದು. ಸುಲಭಶೈಲಿಯಲ್ಲಿ ಲೌಕಿಕ ವಿಷಯಗಳನ್ನು ರಂಜನೆ ಮಾಡತಕ್ಕುವು ಇಲ್ಲವೇ ಇಲ್ಲ. ಈಗೀಗ ಈ ಕೊರತೆಗಳನ್ನು ಹೋಗಲಾಡಿಸುವ ಪ್ರಯತ್ನದಲ್ಲಿರುತ್ತಾರೆ.

೧೩. ಮೇಲೆ ಹೇಳಿದ ದೋಷಗಳಿಂದ ನಮ್ಮ ಕಾವ್ಯಮಾಲೆಯನ್ನು ಸಾಧಾರಣ ಜನರು ಓದಿ ಅರ್ಥಮಾಡಿಕೊಳ್ಳಲೇ ಆರರು; ಇಂಗ್ಲಿಷ್ ಬಲ್ಲ ವಿದ್ಯಾವಂತರು ಎಳ್ಳಷ್ಟಾದರೂ ಹರ್ಷವಿಲ್ಲ ಲಾಭವಿಲ್ಲ, ಎಲ್ಲಾ ಕೃತ್ರಿಮ, ಅಸಂಬದ್ಧ, ಎಂದು ಕೈಬಿಟ್ಟುಬಿಟ್ಟರು; ಸಂಸ್ಕೃತ ವಿದ್ವಾಂಸರಂತೂ ಕನ್ನಡದಲ್ಲೇನಿದೆ ಸ್ವಾರಸ್ಯ, ಸಂಸ್ಕೃತದ ಎಂಜಲು, ಉಗಿದ ಕಬ್ಬಿನ ಸಿಪ್ಪೆ ಎಂದು ಧಿಕ್ಕರಿಸುತ್ತಾರೆ. ಮುಖ್ಯ, ನಮ್ಮ ಕಾವ್ಯಮಾಲೆ ಕೀಳೆಂದೂ ನಿಸ್ಸಾರವೆಂದೂ ತೆಗೆದೆಸೆಯುವ ಹೊತ್ತು ಬಂದಿದೆ. ಸಾವಿರ ವರ್ಷದಿಂದ ಬೆಳೆದು ಬಂದದ್ದನ್ನು ಹಾಗೆ ಎಂದಿಗೂ ಬಿಡತಕ್ಕದ್ದಲ್ಲ. ಜನರೆಲ್ಲ ಮುಂದಾದರೂ ಪುಸ್ತಕದ ಕಡೆ ಆಸಕ್ತಿಯಿಡುವಂತೆ ಮಾಡಿಯೇ ತೀರಬೇಕು; ಇಂಗ್ಲಿಷ್ ಮತ್ತು ಸಂಸ್ಕೃತ ಪಂಡಿತರು ಸರಿಯಾದ ಮಾರ್ಗದಲ್ಲಿ ಅವರಿಗೆ ಹಿತವಾದ ಪುಸ್ತಕಗಳನ್ನು ಒದಗಿಸಿಕೊಟ್ಟು ದೇಶಾಭಿಮಾನಿಗಳಾಗಬೇಕು. ಈ ಕಾರ್ಯಸಾಧನೆಯಲ್ಲಿ ನಾವು ಮಾಡಬೇಕಾಗಿರುವ ಕೆಲಸಗಳೇನು, ಅದನ್ನು ತಿಳಿಸುತ್ತೇನೆ.

೧೪. ಮೊದಲು, ಹಿಂದಿನಿಂದ ಬಂದ ಕಾವ್ಯಗಳನ್ನು ಏನು ಮಾಡುವುದು? ಇದು ನಮ್ಮ ಹಿರಿಯರು ಗಳಿಸಿದ ಸ್ವತ್ತು- ಬಡತನವೋ, ಸಿರಿಯೋ, ಇದ್ದದ್ದನ್ನು ಉಳಿಸಿಕೊಂಡು, ಮುಂದಕ್ಕೆ ಹೆಚ್ಚಿಸುತ್ತಾ ಹೋಗಬೇಕು. ಇದಲ್ಲದೆ ಇವು ತೋರ ಕೆಲಸಕ್ಕೆ ಬಾರದುವೂ ಅಲ್ಲ. ಪೂರ್ವದ ಶಾಸನಗಳಿಂದ ಮೈಸೂರಿನ ಚರಿತ್ರೆಯನ್ನು ಕೂಡಿಸಬಹುದು; ಕಾವ್ಯಗಳಲ್ಲಿ ಚರಿತ್ರಾಂಶಗಳೂ, ಆಚಾರ ವ್ಯವಹಾರಗಳೂ, ದೇಶಕಾಲ ಭೇದಗಳೂ ತಿಳಿಯುತ್ತವೆ; ಮತಸಂಬಂಧವಾದ ವಿಷಯಗಳು ಎಷ್ಟೋ ಅಡಕವಾಗಿವೆ. ಇದರ ಜೊತೆಗೆ, ಭಾಷೆಯ ಚರಿತ್ರೆಯನ್ನೂ ಕಾವ್ಯಮಾಲೆಯ ಬೆಳವಣಿಗೆಯನ್ನೂ ಸಂಗ್ರಹಿಸುವ ಅವಶ್ಯಕತೆ ಬೇರೆ ಇದೆ. ತಾಯಿಬೇರನ್ನು ಕಡಿದು ಮರವನ್ನು ಚಿಗುರಿಸುವುದಕ್ಕೆ ಹೇಗೆ ಆಗಲಾರದೋ, ಹಾಗೆಯೇ ನಮ್ಮ ಪೂರ್ವವನ್ನು ಅಳಿಸಿಬಿಟ್ಟು ಭವಿಷ್ಯಕ್ಕೆ ಹಾರುವುದಕ್ಕೆ ಆಗಲಾರದು. ಆದ್ದರಿಂದ ಪೂರ್ವದ ಕಾವ್ಯಗಳ ವಿಷಯದಲ್ಲಿ ಹೀಗೆ ಮಾಡಬೇಕು.

(೧) ದೇಶದಲ್ಲಿ ಹುಳು ತಿಂದುಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು. ಈ ಕೆಲಸವನ್ನು ಮೈಸೂರು ಸರ್ಕಾರದವರೂ, ಕಾವ್ಯಮಂಜರಿ, ಕಾವ್ಯಕಲಾನಿಧಿಗಳ ಸಂಪಾದಕರೂ ಆಗಲೇ ಮಾಡುತ್ತಲೇ ಇದ್ದಾರೆ. ಇವರಿಗೆ ಎಲ್ಲರೂ ಕೃತಜ್ಞರಾಗಿರತಕ್ಕದ್ದೆ.

(೨) ಈ ಲಕ್ಷ್ಯಗ್ರಂಥಗಳೆಲ್ಲಾ ಅಚ್ಚಾದಮೇಲೆ ಎಲ್ಲವನ್ನೂ ಕೊನೆಮುಟ್ಟೆ ಶೋಧಿಸಿ, ಹೊಸದಾಗಿ ಲಕ್ಷಣಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು, ಇವು ಯಾವುವೆಂದರೆ- ಭಾಷೆಯ ಚರಿತ್ರೆ, ಹಳ

ಹೊಸಗನ್ನಡದ ವ್ಯಾಕರಣ, ನಿಘಂಟು, ರಸ, ಅಲಂಕಾರ, ಕಾವ್ಯಸ್ವರೂಪ, ಕಾವ್ಯ ವಿಮರ್ಶೆ, ಛಂದಸ್ಸು, ಕಾವ್ಯಮಾಲೆಯ ಚರಿತ್ರೆ, ಈ ಲಕ್ಷಣಗಳನ್ನು ಕಲ್ಪಿಸತಕ್ಕವರು ಹಿಂದಿನ ಸಂಸ್ಕೃತಮಾರ್ಗವನ್ನೂ, ಈಗಿನ ಇಂಗ್ಲಿಷ್ ಮಾರ್ಗವನ್ನೂ, ಪ್ರಕೃತದಲ್ಲಿ ಜನರ ಸ್ವಭಾವ ಅಭಿಪ್ರಾಯ ಲಾಭಗಳನ್ನೂ, ಗಣನೆಗೆ ತಂದು, ಸರ್ವಮತವನ್ನೂ ತೂಕಮಾಡಿ, ವಿಪರೀತಕ್ಕೆ ಹೋಗದೆ, ಉತ್ತಮ ಪಕ್ಷವನ್ನೇ ಹಿಡಿಯತಕ್ಕದ್ದಾಗಿದೆ.

(೩) ಪೂರ್ವಕಾವ್ಯಗಳಲ್ಲಿ ಉತ್ತಮಭಾಗಗಳನ್ನು ಆದುಕೊಂಡು ಬಾಲಶಿಕ್ಷೆಗಾಗಿ ಉಪಯೋಗಿಸುವುದು ಮತ್ತು ಇದಕ್ಕೆ ಕೈನೆರವಾಗಿ ಐದಾರು ಹಳಗನ್ನಡದ ಪಾಠಪುಸ್ತಕಗಳನ್ನು ಏರ್ಪಡಿಸುವುದು.

ಇಷ್ಟು ಕೆಲಸ ಮಾಡಿದಲ್ಲಿ, ಜನರಿಗೆ ಹಳಗನ್ನಡ ಸುಲಭವಾಗುತ್ತದೆ. ಏಕೆಂದರೆ, ಹಳಗನ್ನಡಕ್ಕೂ ಹೊಸಗನ್ನಡಕ್ಕೂ ಶಬ್ದಗಳು ಕೆಲವು ಬಿಟ್ಟುಹೋಗಿರುವುದು. ರೂಪಕೊಂಚ ಮಾರ್ಪಟ್ಟಿರುವುದು ಇಷ್ಟೇ; ಹೊರತು ಎರಡೂ ಬೇರೆ ಭಾಷೆ ಎನ್ನುವಷ್ಟು ಭೇದವೇನು ಇಲ್ಲ. ಕಾವ್ಯಗಳ ವಿಷಯದಲ್ಲಿ, ಎಲ್ಲಾ ಕಾವ್ಯಮಾಲೆಗಳ ಲಕ್ಷಣಗಳನ್ನೂ ಒರೆಹಚ್ಚಿ ತೆಗೆಯುವುದರಿಂದ, ಸಹಜವಾದ ರೀತಿಯಲ್ಲಿ ಗುಣದೋಷ ವಿವೇಚನೆ ಹುಟ್ಟುತ್ತದೆ. ಪೂರ್ವದ ಕಥೆಗಳೂ, ಅಭಿಪ್ರಾಯಗಳೂ ಮರೆತು ಹೋಗುವುದಿಲ್ಲ.

೧೫. ಹಿಂದಿನ ಭಂಡಾರವನ್ನು ಹೀಗೆ ಕಾಪಾಡಿಕೊಂಡು ಕ್ರಮಪಡಿಸುವುದಲ್ಲದೆ, ಮುಂದಕ್ಕೆ ಉತ್ತಮ ಕಾವ್ಯಗಳು ಸಾಧ್ಯವಾಗುವಂತೆ ಈಗಿನಿಂದ ಉಳುಮೆ ಮಾಡಬೇಕು. ಕೆಲವರು ಹೊಸ ಮಾರ್ಗ ಆಗಲೇ ದೇಶದಲ್ಲಿ ಬೇರೂರಿತೆಂದೂ, ಬೇಕಾದಷ್ಟು ಜನ ಕವಿಗಳು ಆಗಲೇ ಹುಟ್ಟಿರುವರೆಂದೂ ತಿಳಿಯುತ್ತಾರೆ. ಇದರಲ್ಲಿ ನನಗೆ ನಂಬಿಕೆ ಸಾಲದು. ನನ್ನ ಬುದ್ಧಿಗೆ ಈಗ ಇನ್ನೂ ನಮಗೆ ವ್ಯವಸಾಯಕಾಲವೇ ಹೊರತು ಫಲಬಿಡುವ ಕಾಲವಲ್ಲ. ಅದು ಹೇಗಾದರೂ ಇರಲಿ, ಮುಂದೆ ಎಲ್ಲರೂ ನಮ್ಮ ಕನ್ನಡ ಎಂದು ಹೆಮ್ಮೆಪಟ್ಟುಕೊಂಡು ಓದಬಹುದಾದ ಪುಸ್ತಕಗಳನ್ನು ಬರೆಯತಕ್ಕವರು ಈ ಅಂಶಗಳನ್ನು ನೆನಪಿನಲ್ಲಿ ಇಟ್ಟಿದ್ದರೆ ಒಳ್ಳೆಯದು:

(೧) ಭಾಷೆಯ ವಿಚಾರದಲ್ಲಿ ಹೊಸಗನ್ನಡವನ್ನೇ ಬರೆಯಬೇಕು. ಹಳಗನ್ನಡದಲ್ಲಿ ನನಗೂ ಅಕ್ಕರೆ ಉಂಟು; ತಿಳಿಯಾದ, ಬಿಗಿಯಾದ, ತಿರುಳಾದ, ಇಂಪಾದ ಆ ನುಡಿಯನ್ನು ಕೈಬಿಡುವುದೆಂದರೆ ನನಗೂ ವ್ಯಸನವೆ. ಮುಂದೆ ಜನರಲ್ಲಿ ಆದರೆ ತಿಳಿವಳಿಕೆ ಹೆಚ್ಚಿದ ಮೇಲೋ, ಇಲ್ಲ, ಕೇವಲ ವಿದ್ಯಾವಂತರೇ ತಿಳಿಯಬೇಕಾದ 'ತತ್ವಗಳಿಗಾಗಿಯೋ ಇಲ್ಲ, ಪರಮೋತ್ಕೃಷ್ಟವಾದ ಕಾವ್ಯ, ನಾಟಕ, ಗೀತೆಗಳಿಗಾಗಿಯೋ ಅದನ್ನು ಉಪಯೋಗಿಸಬಹುದು. ಆದರೆ ಸದ್ಯಕ್ಕೆ ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯುವುದರಲ್ಲಿ ಯಾವ ಬುದ್ಧಿವಂತಿಕೆಯೂ ಇಲ್ಲ. ಹೊಸಗನ್ನಡವನ್ನೇ ಎಲ್ಲರೂ ಹಿಡಿಯಬೇಕು. ಅದಕ್ಕೆ ಹಳಗನ್ನಡ ಬೆರಕೆಯಾಗಲಿ, ಜನರ ಬಾಯಲ್ಲಿ ಬಳಕೆಗೆ ಬಂದಿರುವಷ್ಟು ಮಟ್ಟಿಗಲ್ಲದೆ ಹೆಚ್ಚಿನ ಪುಸ್ತಕದ ಸಂಸ್ಕೃತವಾಗಲಿ ತದ್ಭವವಾಗಲಿ ಸೇರಕೂಡದು. ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರೂ ಉತ್ತಮ ಜಾತಿಯವರೂ ಆಡತಕ, ಸ್ಫುಟವಾದ ಕನ್ನಡವನ್ನು ಗ್ರಂಥ ಭಾಷೆಯಾಗಿ ತಿರುಗಿಸಿಬಿಟ್ಟರೆ ಅಚ್ಚುಹಾಕುವುದರಿಂದಲೂ ಮಕ್ಕಳಿಂದ ಕಲಿಸುವುದರಿಂದಲೂ ಇದೇ ನೆಲೆಯಾಗಿ ನಿಂತು ಎತ್ತಲೂ ಹರಡುತ್ತದೆ. ಮುಂದಿನ ಗ್ರಂಥಗಳಿಗೆಲ್ಲಾ ಒಂದೇ ಸಮವಾದ ಭಾಷೆ ಸಿಕ್ಕುತ್ತದೆ. ಅನ್ಯಶಬ್ದಗಳನ್ನು ವಿಶೇಷವಾಗಿ ಸೇರಿಸಬಾರದಾದರೂ, ಜನಗಳು ರೂಢಿಗೆ

ತಂದ ಮಾತುಗಳನ್ನು ಸಮಯೋಚಿತವಾಗಿ ಒಪ್ಪಿಕೊಳ್ಳಬೇಕು. ಕೈಯಲ್ಲಾದ ಮಟ್ಟಿಗೆ ಮಾತುಗಳನ್ನು ಕಲ್ಪನೆ ಮಾಡಬಾರದು; ಹಾಗೆ ಮಾಡಿದರೂ ಕನ್ನಡ ಮಾತುಗಳನ್ನೇ ಬಳಸುತ್ತಿರುವ ಸಂಸ್ಕೃತಪದಗಳನ್ನೇ ಕೂಡಿಸುವುದು ಅನುಕೂಲ. ರೈಲನ್ನು ರೈಲೆಂದೇ ಕರೆಯುವುದು ಉತ್ತಮ; ಹೊಗೆಬಂಡಿ, ಹೊಗೆಗಾಡಿ ಎನ್ನುವುದು ಮಧ್ಯಮಃ ಧೂಮಶಕಟವೆನ್ನುವುದು ಅಧಮ. ಮುಖ್ಯ, ಬರೆಯುವವರು ಕಠಿಣ ಪದಗಳಲ್ಲಿ ಕೈವಲ್ಯವುಂಟೆಂದು ಮೋಸಹೋಗದೆ, ಅರ್ಥದಲ್ಲಿ ಬುದ್ಧಿಯನ್ನು ಓಡಿಸಿ ಪ್ರೌಢತನವನ್ನು ತೋರಿಸಿದರೆ ಎಲ್ಲರೂ ಬದುಕಿಕೊಂಡಾರು.

(೧) ಭಾಷೆಯನ್ನು ಈ ತರದಲ್ಲಿ ಸೋಸುವುದಕ್ಕೆ ಉದ್ದೇಶವೇನೆಂದರೆ, ಎಲ್ಲಾ ಜನರೂ ಓದಬೇಕೆನ್ನುವುದೇ. ರಾಜರಿಗೇ ಆಗಲಿ ಪಂಡಿತರಿಗೇ ಆಗಲಿ, ಬರೆಯತಕ್ಕ ಕಾಲ ಹೋಯಿತು. ಈಗ ಹೆಂಗಸರು, ಗಂಡಸರು, ಚಿಕ್ಕವರು, ದೊಡ್ಡವರು, ಬ್ರಾಹ್ಮಣರು, ಒಕ್ಕಲಿಗರು, ಅಷ್ಟರೂ ಓದುವಂತೆ ಬರೆಯಬೇಕು. ಇದರಿಂದ ಇನ್ನೂ ಕೆಲವು ಗುಣಗಳು ತಾವಾಗಿಯೇ ಬರುತ್ತವೆ: ಸುಲಭವಾಗಿ ಬರೆಯುವುದು. ಎಲ್ಲರಿಗೂ ಇಷ್ಟವಾದ ಸಂಗತಿಗಳನ್ನು ತೆಗೆಯುವುದು, ವಿಪರೀತವಾಗಿ ಲಕ್ಷಣದ ಮೇಲೆ ದೃಷ್ಟಿಯಿಡದೆ ಇರುವುದು, ವಿವೇಕವಾಗಿ ಉಪಯೋಗವಾದ ವಿಚಾರಗಳನ್ನೂ ಹರಡುವುದು, ಇವೇ ಮುಂತಾದವು.

(೨) ಗ್ರಂಥವಿಷಯ ಪ್ರಯೋಜನವಾದ ಅಂಶವಾಗಿರಬೇಕು. ಸಮಾಜದ ಏಳಿಗೆಗೆ ನೆರವಾಗುವಂತೆ ಇರಬೇಕು. ಧರ್ಮವಿಚಾರದಲ್ಲಿ ಮೂರ್ಖತನವನ್ನು ಹೋಗಿಸುವ ಇಂಡಿಯದ ಪೂರ್ವಕಾಲದ ಚರಿತ್ರೆ, ಮತಗಳ ಬೆಳವಣಿಗೆ ಮತ್ತು ಆಗಾಗಿನ ಮಾರ್ಪಾಟುಗಳು, ಒಗ್ಗಟ್ಟನ್ನೂ ರಾಜಭಕ್ತಿಯನ್ನೂ ಹುಟ್ಟಿಸತಕ್ಕ ನೀತಿತತ್ತ್ವಗಳು, ಜೀವನಕ್ಕೆ ಸುಖವನ್ನು ತರುವ ವೈದ್ಯ, ನ್ಯಾಯ, ಶಿಲ್ಪ ಮೊದಲಾದ ಕುಶಲ ಶಾಸ್ತ್ರಗಳು, ಬುದ್ಧಿಯನ್ನು ಕುದುರಿಸಿ ಮೂಢಭಕ್ತಿಯನ್ನು ಕಿತ್ತುಹಾಕುವ ಪ್ರಕೃತಿ ಶಾಸ್ತ್ರಗಳು, ಇವು ಮೊದಲಾದುವನ್ನು ಸಂಸ್ಕೃತದಿಂದಲೂ ಇಂಗ್ಲಿಷಿನಿಂದಲೂ ಗ್ರಹಿಸಿದ ವಿದ್ವಾಂಸರು ಮಿಕ್ಕವರಿಗೆ ಅವರು ಆಡುವ ಮಾತಿನಲ್ಲಿ ತಿಳಿಸತಕ್ಕದ್ದು.

(೪) ಲಾಭವೇ ಗ್ರಂಥಕ್ಕೆ ಗುರಿಯಲ್ಲ; ಹರ್ಷವೂ ಆಗಿರುವುದರಿಂದ ವಿನೋದವಾಗಿ ಹೊತ್ತು ಕಳೆಯುವುದಕ್ಕೆ ಕಟ್ಟುಕಥೆಗಳನ್ನೂ, ಕಾದಂಬರಿಗಳನ್ನೂ, ಸರಸವಾದ ಪ್ರಸಂಗಗಳನ್ನೂ ಬರೆಯಬೇಕು. ಇವಕ್ಕೆಲ್ಲಾ ಇಂಗ್ಲಿಷಿನಲ್ಲಿ ತುಂಬ ಸಹಾಯ ದೊರೆಯುತ್ತವೆ. ಈ ಬಗ್ಗೆ ಮೈಸೂರಿನ ಗ್ರಂಥಮಾಲೆ, ಕರ್ಣಾಟಕಚಂದ್ರಿಕೆ. ಧಾರವಾಡದ ವಾಗ್ಭೂಷಣ ಇವು ಮುಂದಾಳಾಗಿ ಹೊರಟಿವೆ. ಇನ್ನೂ ಅಭಿವೃದ್ಧಿಗೆ ಅವಕಾಶವುಂಟು. ಆದರೆ ಸದ್ಯಕ್ಕೆ, ನನಗೆ ತೋರುವುದರಲ್ಲಿ. ದೊಡ್ಡ ಕವನಗಳನ್ನಾಗಲಿ, ಸ್ವಂತ ನಾಟಕಗಳನ್ನಾಗಲಿ ಬರೆಯತಕ್ಕದ್ದಲ್ಲ. ಬಾವಿಯಲ್ಲಿ ಸೀನೀರು ಸಿಕ್ಕುತ್ತಿರುವಾಗ ಕಡಲಲ್ಲಿ ಹೋಗಿ ಉಪ್ಪುನೀರು ಕುಡಿಯತಕ್ಕದ್ದಲ್ಲ. ದೊಡ್ಡತನಕ್ಕೆ ಬೆರಗಾಗಿ ನಮ್ಮ ಯೋಗ್ಯತೆಯನ್ನು ಏಕೆ ಮೀರಬೇಕು? ಅಂದವಾದ ಹೂವು ಬೇರು ಕೊನೆ ಬಲಿತ ಮೇಲೆ ಅರಳುವುದೇ ಹೊರತು, ಬಿತ್ತವನ್ನು ನೆಟ್ಟು ಬೆಳಿಗ್ಗೆ ಬಿಡಲಾರದು, ಕವಿ ಎನ್ನಿಸಿಕೊಳ್ಳುವುದಕ್ಕೆ ಎಲ್ಲರಿಗೂ ಆಸೆಯೇ, ಯಾರಿಗಿಲ್ಲ? ಆದರೆ ಅದಕ್ಕೆ ಕಾಲ ಬೇಕು, ಪ್ರಾಪ್ತಿ ಬೇಕು, ಬರಿಯ ವೃತ್ತಗಳ ಹೆಣಿಗೆಯೊಂದೇ ಸಾಲದು, ಹಳ್ಳಿಯವರು ಆಡುವ ಗಾದೆ ಸಾಮತಿಗಳನ್ನು ಹಳಗನ್ನಡದಲ್ಲಿ ಕಂದಗಳು ಮಾಡಿ ನೇಯುವುದಕ್ಕಿಂತ ಗಂಭೀರವಲ್ಲವೆ ಮಾಗಿಯ ಕೋಗಿಲೆಯಂತೆ ಬಾಯಿ ಹೊಲಿದುಕೊಂಡಿರುವುದು?

(೫) ಮತ್ತೊಂದು ಭಾಗದಲ್ಲಿ ಗ್ರಂಥ ನಮ್ಮಲ್ಲಿ ಅಪೂರ್ವ-ಹಿರಿಯವರ ಬದುಕುಗಳು. ಹಿಂದೆ ನಮ್ಮಲ್ಲಿ ಎಷ್ಟೋ ಜನ ಆಚಾರ್ಯರೂ, ಕವಿಗಳೂ, ಶೂರರೂ ಇದ್ದರು. ಅವರ ಕಾಲವೇ ತಿಳಿಯದ ಹಾಗೆ ಆಗಿದೆ; ಅವರ ಚರಿತ್ರೆಯೆಂದರೆ ಪೊಳ್ಳು ಹರಟೆಯೂ ಕುದ್ರಮಹತ್ವಗಳೂ ಆಗಿದೆ. ಇದನ್ನೆಲ್ಲಾ ವಿಚಾರಮಾಡಿ ಸರಿಪಡಿಸಬೇಕು. ಸತ್ಯದಿಂದ ಎಂದಿಗೂ ಲೋಪವಿಲ್ಲ; ಅವರು ಬಾಳಿದ ರೀತಿ, ಅವರ ನಡೆನುಡಿಗಳು, ಅವರು ಹಿಡಿದು ಸಾಧಿಸಿದ ಮಹತ್ಕಾರ್ಯಗಳು, ಇವೆಲ್ಲಾ ಇದ್ದದ್ದಿದ್ದಂತೆ ತಿಳಿದರೆ ಹುಡುಗರಲ್ಲಿ ಹುರುಡೂ, ಜನರಲ್ಲಿ ಸ್ವದೇಶಪ್ರೇಮವೂ, ಆತ್ಮಗೌರವವೂ ಮೊಳಕೆ ಹಾಕುತ್ತವೆ.

(೬) ಹೆಚ್ಚು ಆಡಿದ್ದರಿಂದೇನು? ಹೇಗೆ ಆದಿಯಿಂದಲೂ ಸಂಸ್ಕೃತದ ಶಿಕ್ಷೆಯಲ್ಲೂ, ಸಂಸ್ಕೃತದ ಪೋಷಣೆಯಲ್ಲೂ ಕಾವ್ಯಮಾಲೆಯನ್ನು ಬೆಳೆಸಿದವೊ, ಹಾಗೆ ಈಗ ದೈವಯತ್ನದಿಂದ ಲಭಿಸಿರುವ ಇಂಗ್ಲಿಷಿನ ಶಿಕ್ಷೆಯಲ್ಲೂ, ಇಂಗ್ಲಿಷಿನ ಪೋಷಣೆಯಲ್ಲೂ, ಅದನ್ನು ಬೆಳೆಸಬೇಕು. ಇಂಗ್ಲಿಷರ ಕಾವ್ಯಮಾಲೆ ಪರಮೋಷ್ಟವಾದದ್ದು; ಗ್ರೀಕ್, ಲ್ಯಾಟಿನ್, ಜರ್ಮನ್, ಫ್ರೆಂಚ್, ಸಂಸ್ಕೃತ ಮುಂತಾದ ಭಾಷೆಗಳಿಂದ ಸಾರವನ್ನು ಹೀರಿ ಮುಷ್ಟಿಯಾದದ್ದು. ಇದರ ಗುಣವನ್ನು ಕಲಿತು, ಇದರ ಐಶ್ವರ್ಯದಲ್ಲಿ ಭಾಗಿಗಳಾಗಿ ಬೇಕಾದ ರೀತಿಯಲ್ಲಿ ಭಾಷಾಂತರಗಳಿಂದ ಕನ್ನಡದ ಬೊಕ್ಕಸವನ್ನು ತುಂಬಿಟ್ಟರೆ, ಮುಂದೆ ಸ್ವದೇಶಮಾರ್ಗವೂ ವಿದೇಶಮಾರ್ಗವೂ ಕಲೆತು ಒಂದಾಗಿ, ಎರಡರಲ್ಲೂ ಒಗ್ಗದುವು ವಕ್ರವಾದುವು ಬಿಟ್ಟುಹೋಗಿ, ಅತ್ಯುತ್ತಮವಾದ ಕಾವ್ಯಮಾಲೆ ನಮ್ಮಲ್ಲೂ ನಿಲ್ಲುವುದಕ್ಕೆ ಸಂದೇಹ ತೋರುವುದಿಲ್ಲ.

(೭) ಭಾಷಾಂತರವನ್ನು ಹೇಳುತ್ತಿರುವಾಗ ಸಂಸ್ಕೃತವನ್ನು ನಾವು ಮರೆಯುವುದಿಲ್ಲ. ಇದರಲ್ಲಿ ಸಂಸ್ಕೃತ ಪಂಡಿತರು ಧಾರಾಳವಾಗಿ ಕನ್ನಡಿಗರನ್ನು ಉದ್ಧಾರ ಮಾಡಬಹುದು. ಮತ ವಿಷಯವಾಗೂ, ನೀತಿವಿಷಯವಾಗೂ, ಆಚಾರಸಂಸ್ಕಾರಗಳ ವಿಷಯವಾಗೂ ಈಗ ದೇಶದಲ್ಲಿ ಎಲ್ಲೆಲ್ಲೂ ಚರ್ಚೆ ನಡೆಯುತ್ತಿದೆಯಷ್ಟೆ. ಜೀವಕ್ಕೆ ಹೇಗೆ ಕರ್ಮ ಪಾಶ ಬಿಡುವುದಿಲ್ಲವೋ, ಹಾಗೆ ಏನು ಮಾಡಿದರೂ ಪೂರ್ವದ ಪ್ರಭಾವದಿಂದ ನಾವು ತಪ್ಪಿಸಿಕೊಳ್ಳಲಾರೆವು. ಆದದ್ದರಿಂದ ಏನು ತಿದ್ದುಪಾಟು ಆಗಬೇಕಾದರೂ ಪೂರ್ವಪದ್ಧತಿಯನ್ನು ಸಮಗ್ರವಾಗಿ ಪರಿಶೋಧಿಸಿದಲ್ಲದೆ ಯತ್ನವಿಲ್ಲ. ಇದಕ್ಕಾಗಿ ಸಂಸ್ಕೃತದಲ್ಲಿ ವಿದ್ವಾಂಸರಾದವರು ನಿಸ್ಸಾರವಾದ ಕಾವ್ಯನಾಟಕಗಳ ಭಾಷಾಂತರವನ್ನು ಬಿಟ್ಟು, ಆಳಿದ ಮಹಾಸ್ವಾಮಿಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ಇವರ ಹೆಸರಿನಲ್ಲಿ ಭಾಗವತ, ಭಾರತ, ರಾಮಾಯಣಗಳನ್ನು ಪ್ರತಿಯೊಂದು ಮನೆಯಲ್ಲಿಯೂ ಹೆಂಗಸರೂ ಕೂಡ ಓದಿಕೊಳ್ಳುವಂತೆ ಮಾಡಿರುವ ರೀತಿಯಲ್ಲಿ, ಅಮೂಲ್ಯವಾದ ಶ್ರುತಿ, ಸ್ಮೃತಿ, ಉಪನಿಷತ್ತು, ಪುರಾಣಗಳನ್ನೂ, ಆಚಾರ್ಯರ ಭಾಷ್ಯಗಳನ್ನೂ ಅನ್ಯಮತಗಳ ತತ್ತ್ವಗಳನ್ನೂ ನಿಷ್ಪಕ್ಷಪಾತವಾಗಿ ಭಾಷಾಂತರ ಮಾಡಿಕೊಟ್ಟರೆ ಜನಗಳ ಜ್ಞಾನೋದಯವೇ ಅಲ್ಲದೆ ಕನ್ನಡ ಕಾವ್ಯಮಾಲೆಯ ಸಮೃದ್ಧಿಯಾಗುತ್ತದೆ. ಪ್ರಕೃತದಲ್ಲಿ ನಮ್ಮ ದೇಶಕ್ಕೆ ಇದಕ್ಕಿಂತ ಶ್ರೇಷ್ಠವಾದ ಉಪಕಾರ ನನಗೆ ತೋರುವುದಿಲ್ಲ.

೧೬. ಆರ್ಯರೇ, ಬಿದ್ದುಹೋಗಿರುವ ನಮ್ಮ ಮಾತೃಭಾಷೆಯನ್ನು ತಲೆಯೆತ್ತಿಸುವುದು ಸುಲಭವಾದ ಕೆಲಸವಲ್ಲ; ಅಲ್ಲೊಬ್ಬರು, ಇಲ್ಲೊಬ್ಬರು, ಎರಡು ಪಂಕ್ತಿಯನ್ನು ಗೀಚಿ ಅಚ್ಚಿಗೆ ತರುವುದರಿಂದ ಸಾಗತಕ್ಕ ಕೆಲಸವೂ ಅಲ್ಲ. ಮಾತೃಭಾಷೆಯನ್ನು ಸಾಯಿಸುವ ಮಾತನ್ನು ಇಲ್ಲಿಗೇ ಬಿಟ್ಟು ಬಿಡೋಣ. ಈಗ ಎಲ್ಲಾ ರಾಜ್ಯಗಳಲ್ಲೂ ಎಲ್ಲಾ

ಜನರಿಗೂ ಓದುಬರಹವನ್ನು ಕಲಿಸಿ ತಿಳಿವಳಿಕೆಗೆ ದಾರಿ ಮಾಡಬೇಕೆಂದು ಹೊರಟಿರುತ್ತಾರೆ. ಇದಕ್ಕೆ ಮಾತೃಭಾಷೆಯನ್ನು ಬಿಟ್ಟರೆ ಆಗುವುದಿಲ್ಲ. ಇದಲ್ಲದೆ ಪ್ರಪಂಚದಲ್ಲಿ ಅಭಿಮಾನವುಳ್ಳ ಯಾವ ಜನವೂ ತಮ್ಮ ಭಾಷೆಯನ್ನು ತಾವೇ ಹಳಿದು ಬಿಟ್ಟು ತೊರೆಯುವುದಿಲ್ಲ. ಎಲ್ಲೋ ಒಂದು ಕೋಟಿ ಜನ ಆಡುವ ಭಾಷೆ ಎನ್ನುತ್ತೀರೇನೋ?-ಗ್ರೀಸಿನಲ್ಲಿ, ಅದರಲ್ಲೂ ಅಥೆನ್ಸ್ ಪಟ್ಟಣದಲ್ಲಿ, ಗ್ರೀಕ್ ಕಾವ್ಯಮಾಲೆಯನ್ನು ಬೆಳೆಸಿದ ಜನ ಎಷ್ಟಿದ್ದರು? ಅವರ ಕಾವ್ಯಮಾಲೆಯ ವಿಸ್ತಾರವೇನು, ಪ್ರಾಶಸ್ತ್ಯವೇನು? ಬಹಳ ಹೀನದೆಶೆಯಲ್ಲಿದೆ ಎಂದು ಹೇಳುತ್ತೀರೇನೋ?- ಐನೂರು ವರ್ಷಗಳ ಹಿಂದೆ ಇಂಗ್ಲಿಷ್ ಕಾವ್ಯಮಾಲೆ ಯಾವ ಸ್ಥಿತಿಯಲ್ಲಿ ಇತ್ತು? ಉಳಿಯುತ್ತದೆಯೋ ಇಲ್ಲವೋ ಎಂದು ಇದ್ದರು; ಈಗ ಅದರ ಪ್ರಾಬಲ್ಯಕ್ಕೆ ಆ ಜನರ ಪ್ರಾಬಲ್ಯವೂ ಎಲ್ಲೆಯಿಲ್ಲ. ಆಲದ ಬಿಳಿಲನ್ನು ನೋಡಿದ್ದೀರಷ್ಟೆ; ಬಳಲುತ್ತಾ ಗಾಳಿಗೆ ತೂರಾಡುವವಾಗ ಉಗುರಿನಲ್ಲಿ ಜಿಗುಟಿ ಹಾಕಬಹುದೆಂದು ತೋರುತ್ತದೆ; ನೆಲಕ್ಕೆ ಮಟ್ಟಿಗೆ ತಗಲಲಿ; ತಾಯಿಮರ ಒಲವು ಬಂದರೆ ಅದಕ್ಕೆ ದೊಡ್ಡ ಊರೆಯಾಗಿ ತಡೆಯುತ್ತದೆ. ನಮ್ಮ ಅದೃಷ್ಟ ನಮ್ಮ ಕೈಯಲ್ಲೇ ಅಡಗಿದೆ. ಬಲದಿಂದ, ಸಾಹಸದಿಂದ ಕೆಲಸಕ್ಕೆ ಹೊಕ್ಕರೆ ಯಾವುದು ಹರಿಯುವುದಿಲ್ಲ? ಕೆಲಸವೇನೋ ಕಷ್ಟಸಾಧ್ಯವೆ; ಆದರೆ ವಿಶ್ವಾಸಪಟ್ಟು, ಸರಿಯಾದ ಮಾರ್ಗದಲ್ಲಿ ಶ್ರಮಪಡತಕ್ಕ ಜನ ಒಂದು ಆದರೆ ನಮ್ಮ ಕಾವ್ಯಮಾಲೆಗೂ ಉತ್ತಮ ದೆಶೆ ಬಂದೇ ಬರುವುದು. ಆಗ್ಗೆ ಅದು ನಮಗೊಂದು ಕಿರೀಟವಾಗುವುದು; ಜನರಿಗೆಲ್ಲಾ ಒಂದು ಚೆನ್ನದ ಕಟ್ಟಾಗುವುದು; ಮಕ್ಕಳಿಗೆ ಆನಂದವನ್ನೂ, ದಿವ್ಯವಾದ ಬೋಧನೆಯನ್ನೂ ಬೀರುತ್ತಾ, ಬಿತ್ತುತ್ತಾ, ದೇಶದ ಘನತೆಗೆ ಆಧಾರವಾಗುವುದು. ಆಗ್ಗೆ ಇನ್ನೊಂದು ಸಾರಿ, ಹಿಂದೆ ಆರ್ಯಭೂಮಿಯಲ್ಲಿದ್ದ ಋಷಿಗಳೂ, ವೀರರೂ ಜನ್ಮವೆತ್ತುವರು; ಎತ್ತಿ, ರಾಜ್ಯದಲ್ಲಿ ಧರ್ಮವನ್ನೂ ಶಾಂತಿಯನ್ನೂ ನೆಲೆಗೊಳಿಸುವರು. ಏಕೆಂದರೆ, ಲೋಕವೆಲ್ಲಾ ಬಗ್ಗುವುದು ಶ್ರೇಷ್ಠವಾದ ಬುದ್ಧಿಗೆ ತಾನೇ; ಆ ಬುದ್ಧಿ ತಾವರೆಯ ಹಾಗೆ ಅರಳುವುದು ಕಾವ್ಯರತ್ನದ ಬೆಳಕಿನಿಂದಲೇ.

(ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಸಭೆಯಲ್ಲಿ ಮಾಡಿದ ಉಪನ್ಯಾಸ ಡಿಸೆಂಬರ್, ೧೯೧೧)

---

**ಅನುಬಂಧ -೨**

## ಬಿ.ಎಂ.ಶ್ರೀ. : ಜೀವನ ಮತ್ತು ಸಾಧನೆ

೩-೧-೧೮೮೪ : ಜನನ. ತಾಯಿ ಭಾಗೀರಥಮ್ಮನವರ ತವರೂರು ತುಮಕೂರು ಜಿಲ್ಲೆ ಸಂಪಿಗೆಯಲ್ಲಿ, ಸ್ವಂತ ಊರು ಮಂಡ್ಯ ಜಿಲ್ಲೆ ಬೆಳ್ಳೂರು.

೧೯೦೨ರವರೆಗೆ : ಬಾಲ್ಯ, ಪ್ರಾಥಮಿಕ ವಿದ್ಯಾಭ್ಯಾಸ, ತಂದೆ ಮೈಲಾರಯ್ಯನವರ ಜೊತೆ ಶ್ರೀರಂಗಪಟ್ಟಣದಲ್ಲಿ.

೧೯೦೩ : ಎಫ್. ಎ.

೧೯೦೪ : ಬೆಳ್ಳೂರು ರಾಮಸ್ವಾಮಿಯವರ ಮಗಳು ದೇವಮ್ಮ ಅವರೊಡನೆ ವಿವಾಹ.

೧೯೦೬ : ಬಿ. ಎ., ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ.

೧೯೦೭ : ಬಿ. ಎಲ್., ಮದರಾಸು ವಿಶ್ವವಿದ್ಯಾಲಯದಲ್ಲಿ.

೧೯೦೯ : ಎಂ. ಎ. (ಇಂಗ್ಲಿಷ್).

೧೨-೧-೧೯೧೦ : ಇಂಗ್ಲಿಷ್ ಅಧ್ಯಾಪಕರಾಗಿ ನೇಮಕ, ಮೈಸೂರು ಮಹಾರಾಜಾ ಕಾಲೇಜಿನಲ್ಲಿ.

೧೯೧೧ : 'ಕನ್ನಡ ಮಾತು ತಲೆಯೆತ್ತುವ ಬಗೆ' ಧಾರವಾಡದ ಭಾಷಣದ ಮೂಲಕ ಕನ್ನಡ ಚಳವಳಿಗೆ ಕರೆ. ಇದೇ ಸುಮಾರಿನಲ್ಲಿ ಒಬ್ಬನೇ ಮಗ ತಮ್ಮಯ್ಯನಿಗೆ ಅಚಾತುರ್ಯದಿಂದ ಕಣ್ಣು ಹೋದದ್ದು.

೧೯೧೨ (?) : Rhetoric Notes ಪ್ರಕಟಣೆ.

೧-೧-೧೯೧೪ : ಇಂಗ್ಲಿಷ್ ಅಸಿಸ್ಟೆಂಟ್ ಪ್ರೊಫೆಸರ್.

ಸು. ೧೯೧೫ : ಹೆಂಡತಿ ದೇವಮ್ಮ ಅವರ ನಿಧನ.

೧೯-೨-೧೯೧೯ : ಇಂಗ್ಲಿಷ್ ಜೂನಿಯರ್ ಪ್ರೊಫೆಸರ್.

೧೯೨೧ : 'ಇಂಗ್ಲಿಷ್ ಗೀತಗಳು' ಪ್ರಕಟನೆ.

೧-೭-೧೯೨೩ : ಎರಡನೇ ದರ್ಜೆ ಇಂಗ್ಲಿಷ್ ಪ್ರೊಫೆಸರ್.

೧೯೨೬ : 'ಗದಾಯುದ್ಧ ನಾಟಕಂ' ಪ್ರಕಟಣೆ ಮತ್ತು ತಮ್ಮ ಗುರುಗಳಾದ ವರದಾಚಾರ್ಯರಿಗೆ ಸನ್ಮಾನ ಮಾಡಿ ಗೌರವಿಸಿದ್ದು.

೧-೧೧-೧೯೨೬ ರಿಂದ : ಮೈಸೂರು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್.

೧-೭-೧೯೩೦

೧೯೨೭ : ಕನ್ನಡ ಎಂ.ಎ. ತರಗತಿಗಳ ಪ್ರಾರಂಭ ಮತ್ತು ಗೌರವ ಕನ್ನಡ ಪ್ರಾಧ್ಯಾಪಕರು.

೧೯೨೮ : ೧೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು (ಕಲಬುರ್ಗಿ).

೧೯೩೦ :'ಅಶ್ವತ್ಥಾಮನ್' ಪ್ರಕಟಣೆ.

೧-೭-೧೯೩೦ : ಪ್ರಥಮದರ್ಜೆ ಪ್ರಾಧ್ಯಾಪಕರಾಗಿ ಬೆಂಗಳೂರು ಸೆಂಟ್ರಲ್ ಕಾಲೇಜಿಗೆ ವರ್ಗ, ಮತ್ತು ಮೊದಲನೇ ಮಗಳು ಶಾರದಮ್ಮ ಅವರ ಪತಿ ಎನ್.ಆರ್. ಗುಂಡಪ್ಪ ಅವರ ನಿಧನ, ಮಗಳು, ಮಕ್ಕಳು ತಾತನ ಆಶ್ರಯ.

೧೯೩೧ : ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಗ್ರಂಥಮಾಲೆ ಆರಂಭ.

೧೯೩೪ : ಪುತ್ತೂರು ದಸರಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ.

೧೯೩೫ : 'ಪಾರಸಿಕರು' ಪ್ರಕಟಣೆ.

೧೯೩೬ : ಕನ್ನಡ ಛಂದಸ್ಸಿನ ಚರಿತ್ರೆ (ಕನ್ನಡ ಕೈಪಿಡಿ ೧ನೇ ಭಾಗದಲ್ಲಿ) ಪ್ರಕಟನೆ.

೧೯೩೮-೧೯೪೨ : ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಅಚ್ಚುಕೂಟ ಸ್ಥಾಪನೆ ೫೦೦೦-೦೦ ರೂಪಾಯಿಗಳ ಸಹಾಯ. 'ಕನ್ನಡ ನುಡಿ' ಆರಂಭ, ಕನ್ನಡ ಸಾಹಿತ್ಯ ಪರೀಕ್ಷೆಗಳ ಏರ್ಪಾಡು. ಮಹಾರಾಜರಿಂದ 'ರಾಜಸೇವಾಸಕ್ತ' ಬಿರುದು, ಕನ್ನಡ ಬಾವುಟ (ಸಂ) ಪ್ರಕಟಣೆ.

೧೯೪೦ : ಪ್ರಾಚ್ಯ ವಿದ್ಯಾ ಸಮ್ಮೇಳನ (ತಿರುಪತಿ) ಕನ್ನಡ ವಿಭಾಗದ ಅಧ್ಯಕ್ಷರು.

೧೯೪೧ : ಶ್ರೀ ಅಭಿಮಾನಿಗಳಿಂದ ಕನ್ನಡದಲ್ಲಿ ಮೊದಲ ಅಭಿನಂದನ ಗ್ರಂಥ 'ಸಂಭಾವನೆ' ಸಮರ್ಪಣೆ. (೫೭ನೇ ಹುಟ್ಟುಹಬ್ಬದಂದು)

೧೯೪೭ : ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರು, ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿ, ಪರಿಷತ್ತಿನ ಸ್ಥಾನದಿಂದ ಬಿಡುಗಡೆ.

೧೯೪೩ : 'ಹೊಂಗನಸುಗಳು' ಪ್ರಕಟಣೆ.

೧೯೪೪ : ಧಾರವಾಡದ ಕಲಾ ಕಾಲೇಜಿನಲ್ಲಿ (ಈಗ ಜೆ.ಎಸ್.ಎಸ್.ಕಾಲೇಜು) ಪ್ರಾಚಾರ್ಯರು. ೫-೧-

೧೯೪೬ : ಧಾರವಾಡದಲ್ಲಿ ಹೃದಯಾಘಾತದಿಂದ ಮರಣ.

೧೯೪೭ : 'ಕನ್ನಡ ಸಾಹಿತ್ಯ ಚರಿತ್ರೆ' (ಕನ್ನಡ ಕೈಪಿಡಿ ೨ನೇ ಭಾಗ) ಪ್ರಕಟಣೆ.

೧೯೪೮ : “ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ', ಇಸ್ಲಾಂ ಸಂಸ್ಕೃತಿಗಳ ಪ್ರಕಟಣೆ.

೧೯೮೦ : ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ ಸ್ಥಾಪನೆ.

೧೯೮೩ : ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ 'ಶ್ರೀಸಾಹಿತ್ಯ' ಪ್ರಕಟಣೆ.

೧೯೮೪ : ಬಿ.ಎಂ. ಶ್ರೀ ಜನ್ಮಶತಮಾನೋತ್ಸವ.

## ಅನುಬಂಧ- ೩

### ಆಧಾರ ಗ್ರಂಥಗಳು.

೧) ಬಿ.ಎಂ.ಶ್ರೀಕಂಠಯ್ಯ, ಎ.ಎನ್.ಮೂರ್ತಿರಾವ್, ಕನ್ನಡ ಸಾಹಿತ್ಯ ಪರಿಷತ್ತು.

೨) ೨೦೦೯. ಶ್ರೀ ಸಾಹಿತ್ಯ (ಆಚಾರ್ಯ ಬಿ.ಎಂ.ಶ್ರೀಕಂಠಯ್ಯ ಅವರ ಸಮಗ್ರ ಕೃತಿ ಸಂಪುಟ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ) ೧೯೮೩

೩) ನಾಡೋಜ ಬಿ.ಎಂ.ಶ್ರೀ. ಎಂ.ವಿ.ಸೀತಾರಾಮಯ್ಯ, ೧೯೮೪

೪) ಆಚಾರ್ಯ ಬಿ.ಎಂ.ಶ್ರೀ. ಎಲ್.ಎಸ್.ಶೇಷಗಿರಿರಾವ್, ೧೯೮೪

೫) ಶ್ರೀನಿಧಿ (ಬಿ.ಎಂ.ಶ್ರೀ ಅವರ ಜನ್ಮಶತಮಾನೋತ್ಸವದ ನೆನಪಿನ ಸಂಪುಟ)೧೯೮೫

೬) ಸಾಲುದೀಪಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೧

೭) ಬಿ.ಎಂ.ಶ್ರೀಕಂಠಯ್ಯ, ಪ್ರೊ. ಡಿ. ಲಿಂಗಯ್ಯ, ೨೦೦೫

೮) ಸಮಾಲೋಕನ-ತೀ.ನಂ.ಶ್ರೀ. ಸಮಗ್ರ ಗದ್ಯ, ಕನ್ನಡ ಪುಸ್ತಕ ಪ್ರಾಧಿಕಾರ, ೨೦೦೬

೯) ಚಿತ್ರಗಳು-ಪತ್ರಗಳು, ಎ.ಎನ್.ಮೂರ್ತಿರಾವ್ ಪ್ರಥಮ ವಿಶ್ವ ಕನ್ನಡ

೧೦) ಬಿ.ಎಂ.ಶ್ರೀ.ಅವರ ಬದುಕು-ಬರಹ. ಕನ್ನಡ ಸಾಹಿತ್ಯ ಪರಿಷತ್ತು.

೧೧) ಶ್ರೀ ನಮನ. ರಾ.ಯ.ಧಾರವಾಡಕರ. ೧೯೮೪

೧೨) ಶ್ರೀ ಸ್ಮರಣೆ, ಜೆ.ಎಸ್ಎಸ್.ಕಾಲೇಜು ಧಾರವಾಡ, ೧೯೮೪

೧೩) ಸಂಭಾವನೆ. ಶ್ರೀಯವರ ಅಭಿನಂದನಾ ಗ್ರಂಥ. ೧೯೪೧

೧೪) ಪಂಚಕಲಶ ಗೋಪುರ, ಡಾ. ಬಿ.ಜಿ.ಎಲ್.ಸ್ವಾಮಿ, ಕಾವ್ಯಾಲಯ ಪ್ರಕಾಶನ ಮೈಸೂರು.೧೯೬೪

---

## ಅನುಬಂಧ- ೪

### ಬಿ.ಎಂ.ಶ್ರೀಕಂಠಯ್ಯ ವ್ಯಕ್ತಿತ್ವ-ಸಾಹಿತ್ಯ ಕುರಿತ ಪ್ರಮುಖ ಕೃತಿಗಳು

೧) ಸಂಭಾವನೆ. ಶ್ರೀಯವರ ಅಭಿನಂದನಾ ಗ್ರಂಥ.

ಸಂಪಾದಕರು: ಮಾಸ್ತಿ ವೆಂಕಟೇಶ ಅಯ್ಯಂಗಾರ್ (೧೯೪೧.೧೯೭೯.)

೨) ಅಶ್ವತ್ಥಾಮನ್: ವಿ ಸೀತಾರಾಮಯ್ಯ, ೧೯೪೬.೧೯೪೮.೧೯೭೩.

೩) ಕಾಣಿಕೆ: ವಯಸ್ಕರ ಶಿಕ್ಷಣ ಸಮಿತಿ, ಮೈಸೂರು. ೧೯೪೬

೪) ಅಶ್ವತ್ಥಾಮನ್-ಒಂದು ಹಕ್ಕಿನೋಟ: ಎನ್.ಅನಂತರಂಗಾಚಾರ್. ೧೯೫೪. ೧೯೭೧.

೫) **ಬಿ.ಎಂ.ಶ್ರೀಕಂಠಯ್ಯ.** ಬಿ. ಶ್ರೀ. ಪಾಂಡುರಂಗರಾವ್.ಐ.ಬಿ.ಎಚ್.ಪ್ರಕಾಶನ, ಬೆಂಗಳೂರು.೧೯೭೧

೬) B.M.Srikantaia. S.V. Ranganna1972. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೭) B.M.Srikantaia.

A.N. Murthy Rao 1974. ಕೇಂದ್ರ ಸಾಹಿತ್ಯ ಅಕಾಡೆಮಿ ನವದೆಹಲಿ.

೮) B.M.Srikantayya. (ಹಿಂದಿ ಅನುವಾದ) Giridhar Rithi.

೯) B.M.Srikantayya. (ಮಲೆಯಾಳಂ ಅನುವಾದ) Pudupalli Raghavan

೧೦) B.M.Srikantayya. (ತಮಿಳು ಅನುವಾದ) R.Madhavanan.

೧೧) B.M.Srikantayya. (ತೆಲುಗು ಅನುವಾದ) P. Dakshinamurthy,

೧೨) ಬಿ.ಎಂ.ಶ್ರೀಕಂಠಯ್ಯ. ಎ.ಎನ್.ಮೂರ್ತಿರಾವ್, ಕನ್ನಡ ಸಾಹಿತ್ಯ ಪರಿಷತ್ತು, ೧೯೭೫.೨೦೦೯.

೧೩) ಬಿ.ಎಂ.ಶ್ರೀಕಂಠಯ್ಯ.

ಎಸ್.ಚನ್ನಪ್ಪ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ತು.ಬೆಂಗಳೂರು. ೧೯೭೫

೧೪) ಬಿ.ಎಂ.ಶ್ರೀ.ಅವರ ಬದುಕು-ಬರಹ.

(ಸಂ) ಜಿ.ಶಂಕರಯ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ೧೯೭೯

೧೫) ಬಿ.ಎಂ.ಶ್ರೀಕಂಠಯ್ಯ:

ವಿ.ಎಂ.ಇನಾಮದಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ೧೯೮೪

೧೬) ಶ್ರೀ ನಮನ. ರಾ.ಯ.ಧಾರವಾಡಕರ. ೧೯೮೪

೧೭) ಶ್ರೀ ಸ್ಮರಣೆ, ಜೆ.ಎಸ್.ಎಸ್.ಕಾಲೇಜು ಧಾರವಾಡ, ೧೯೮೪

೧೮) ಶ್ರೀನಿಧಿ, (ಸಂ) ಡಾ.ಜಿ.ಎಸ್.ಶಿವರುದ್ರಪ್ಪ

(ಬಿ.ಎಂ.ಶ್ರೀ ಅವರ ಜನ್ಮಶತಮಾನೋತ್ಸವದ ನೆನಪಿನ ಸಂಪುಟ)೧೯೮೫

೧೯) ಶ್ರೀಗಂಧ, (ಸಂ) ಚಿ.ಶ್ರೀನಿವಾಸರಾಜು.

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, ೧೯೮೪

೨೦) B.M.S: The Man And His Mission. (ಸಂ) ರಾಮಚಂದ್ರಶರ್ಮ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ೧೯೮೪

೨೧) ನಾಡೋಜ ಬಿ.ಎಂ.ಶ್ರೀ.

ಎಂ.ವಿ.ಸೀತಾರಾಮಯ್ಯ, ರಾಘವ ಪ್ರಕಾಶನ, ಬೆಂಗಳೂರು ೧೯೮೪.

೨೨) ಶ್ರೀ ಸಂಚಿಕೆ.

ಪ್ರಬುದ್ಧ ಕರ್ನಾಟಕ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೮೪

೧೩) ಶ್ರೀ ವಿಶೇಷಾಂಕ: ಲೋಚನ.

ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ೧೯೮೪

೧೪) ಶ್ರೀ ಸಂಚಿಕೆ: ಪುಸ್ತಕ ಪುರವಣಿ, ಮೈಸೂರು. ೧೯೮೪

೧೫) ಮೂರು ದತ್ತಿ ಉಪನ್ಯಾಸಗಳು.. ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ೧೯೮೪

೧೬) ಆಚಾರ್ಯ ಬಿ.ಎಂ.ಶ್ರೀ. ಎಲ್.ಎಸ್.ಶೇಷಗಿರಿರಾವ್. ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ೧೯೮೪

೧೭) ಕನ್ನಡದ ಕಣ್ವ ಬಿ.ಎಂ.ಶ್ರೀ: ಹೋ.ಶ್ರೀನಿವಾಸಯ್ಯ. - ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ.ಬೆಂಗಳೂರು.೧೯೮೪

೧೮) ಶ್ರೀಕಂಠಿಕೆ (ಶ್ರೀ ಪದಕ ವಿಜೇತ ಕವನ ಸಂಕಲನ) ಮೈಸೂರು ವಿಶ್ವವಿದ್ಯಾನಿಲಯ ೧೯೮೪

೧೯) ಶ್ರೀ ನೂರರ ನೆನಪು: ಕನ್ನಡ ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೪

೨೦) ಶ್ರೀ ಪರಿಚಯ: ರಿಸರ್ವ್ ಬ್ಯಾಂಕ್ ಕನ್ನಡ ಸಂಘ, ಬೆಂಗಳೂರು. ೧೯೮೪

೨೧) ಇಂಗ್ಲಿಷ್ ಗೀತೆಗಳು (ಮೂಲದೊಂದಿಗೆ) ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ.ಬೆಂಗಳೂರು.೧೯೮೫

೨೨) ಗದಾಯುದ್ಧ ನಾಟಕ (ಸರಳ ಕನ್ನಾಡುನುವಾದ) ಬಿ.ಎಂ.ಶ್ರೀ. ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ.ಬೆಂಗಳೂರು.೧೯೮೫

೨೩) ಅಶ್ವತ್ಥಾಮನ್ (ಸರಳ ಕನ್ನಾಡುನುವಾದ ಪಿ.ವಿ. ನಾರಾಯಣ) ಬಿ.ಎಂ.ಶ್ರೀ ಶತಮಾನೋತ್ಸವ ಸಮಿತಿ, ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ. ಬೆಂಗಳೂರು.೧೯೮೫.

೨೪) ಪಾರಸಿಕರು (ಸರಳ ಕನ್ನಡಾನುವಾದ) - ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.೧೯೮೫

೨೫) ಶ್ರೀ ಉತ್ಸವ. (ಸಂ) ಶ್ರೀಮತಿ ವಿಶಾಲಕ್ಷಿ ವಿಶ್ವೇಶ್ವರಯ್ಯ -ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೫

೨೬) ಬಿ.ಎಂ.ಶ್ರೀಕಂಠಯ್ಯ - ಡಾ. ರಾಮಚಂದ್ರ ಶರ್ಮ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.

೨೭) ಇಂಗ್ಲಿಷ್ ಗೀತೆಗಳು- ಮುಖಾಮುಖಿ:- ಡಾ. ರಹಮತ್ ತರೀಕೆರೆ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೨೮) ಬಿ.ಎಂ.ಶ್ರೀ ಮತ್ತು ಕನ್ನಡ ಸಂಸ್ಕೃತಿ, - ಡಾ. ನಾ ಗೀತಾಚಾರ್ಯ.ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೯

---